
# ಅಂಚೆ ಚೀಟಿಗಳಲ್ಲಿ ಆರೋಗ್ಯ

ಡಾ॥ ಎ. ಟಿ. ಪಾಟೀಲ




ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು

ಸುವರ್ಣ ಕರ್ನಾಟಕ – ೨೦೦೬

# ಅಂಚೆ ಚೀಟಿಗಳಲ್ಲಿ ಆರೋಗ್ಯ

ಡಾ॥ ಎ. ಟಿ. ಪಾಟೀಲ

ಕನ್ನಡ ಪುಸ್ತಕ ಪ್ರಾಧಿಕಾರ
ಕನ್ನಡ ಭವನ, ಜೆ.ಸಿ. ರಸ್ತೆ
ಬೆಂಗಳೂರು – ೫೬೦ ೦೦೨
ದೂರವಾಣಿ : ೨೨೪೮ ೪೫೧೬

**ANCHE CHEETIGALALLI AROGYA:** Written by **DR. A.T. PATIL**
H. No. 268/1 Shri Thayi Krupa, 4th main, P.J. Extn. Davanagere - 577 002.

*Published by*
**Ashoka N. Chalavadi**
Administrative officer
Kannada Pustaka Pradhikara
Kannada Bhavana, J.C. Road
Bangaluru - 560 002.

© ಕನ್ನಡ ಪುಸ್ತಕ ಪ್ರಾಧಿಕಾರ

Pages : xvi + 76

Price : **Rs. 40/-**

First Print : 2007

Copies : 1000

ISBN : 81-7713-210-5

ಮೊದಲನೇ ಮುದ್ರಣ : ೨೦೦೭

ಪ್ರತಿಗಳು : ೧೦೦೦

ಪುಟಗಳು : ೧೬ + ೭೬

ಬೆಲೆ : ರೂ. ೪೦/-

ಕರಡು ತಿದ್ದಿದವರು : ಲೇಖಕರು

ಪ್ರಕಾಶಕರು
**ಅಶೋಕ ಎನ್. ಚಲವಾದಿ**
ಆಡಳಿತಾಧಿಕಾರಿಗಳು
ಕನ್ನಡ ಪುಸ್ತಕ ಪ್ರಾಧಿಕಾರ
ಕನ್ನಡ ಭವನ, ಜೆ.ಸಿ. ರಸ್ತೆ
ಬೆಂಗಳೂರು – ೫೬೦ ೦೦೨

ಲಕ್ಷ್ಮೀ ಮುದ್ರಣಾಲಯ
LAKSHMI MUDRANALAYA
ISO 9001-2000
ಚಾಮರಾಜಪೇಟೆ, ಬೆಂಗಳೂರು-೧೮
ದೂರವಾಣಿ : ೨೬೬೧ ೩೧೨೩, ೨೬೬೧ ೮೭೫೨

# ಒಂದು ದಿನ ಒಳಕೊಂಡಿತ್ತು ನೋಡಾ

ನಮ್ಮ ಕಣ್ಣೆದುರಿಗೆ ಎರಡು ವಾಸ್ತವಗಳಿವೆ. ಒಂದು – ಜನಾಂಗಿಕ ಸಂಸ್ಕೃತಿಯ ಸ್ಮೃತಿ ಸಂಚಯಗಳಂತಿರುವ ಜನಪದ ಪುರಾಣ ಕಥನಗಳನ್ನು ತಲೆಮಾರಿನಿಂದ ತಲೆಮಾರಿಗೆ ಬಾಯಿಯಿಂದ ಬಾಯಿಗೆ ನೆನಪಿನ ವಾಹಕದಲ್ಲಿ ಸೃಜನಶೀಲವಾಗಿ ಕಾಪಾಡಿಕೊಂಡು ಬಂದ ಮೌಖಿಕ ಜಗತ್ತು. ಇದು ಈಗಾಗಲೇ ನಮ್ಮ ನಡುವೆ ಕಣ್ಮರೆಯಾಗುತ್ತಿರುವ ಜಗತ್ತು. ಇನ್ನೊಂದು–ಬದುಕಿನ ಎಲ್ಲ ಜ್ಞಾನಶಾಖೆಗಳ ಮಾಹಿತಿ ಭಂಡಾರವನ್ನೂ ತನ್ನ ಸೂಚ್ಯಂಕದಲ್ಲಿ ದಾಖಲಿಸಿಕೊಳ್ಳುತ್ತಾ, ಮನುಷ್ಯನ ಸೃಜನಶ್ರಮದ ಕಾಲದೀರ್ಘತೆಯನ್ನು ತನ್ನ ಅಣುಕ್ಷಣಗಳ ಹ್ರಸ್ವತೆಗೆ ತಂದಿಟ್ಟುಕೊಂಡು ದೈತ್ಯ ಸಾಧನೆಯನ್ನು ಮೆರೆಯುತ್ತಿರುವ ಗಣಕ ಜಗತ್ತು. ಇದು ದಿನದಿಂದ ದಿನಕ್ಕೆ ಗಣನೆಗೆ ಸಿಗದ ವೇಗದಲ್ಲಿ ಚಲಿಸುತ್ತಿರುವ ಜ್ಞಾನ ಜಗತ್ತು.

ಮೌಖಿಕ ಸೃಜನ ಪ್ರತಿಭೆಯ ಪ್ರತೀಕ ಸಿರಿಯಜ್ಜಿ. ಗಣಕ ಜ್ಞಾನದ ವೇಗದ ಪ್ರತೀಕ ಶಕುಂತಲಾದೇವಿ. ಸಿರಿಯಜ್ಜಿಯದು ಕೇವಲ ನೆನಪಲ್ಲ; ಅದೊಂದು ಸೃಜನ ಪ್ರತಿಭೆ. ಅದು ಭೂತವಲ್ಲ, ವರ್ತಮಾನ. ಪರಂಪರೆಯನ್ನು ಅರಗಿಸಿಕೊಂಡ ಸಮಕಾಲೀನವಾದ ಸೃಜನೆ. ಅದು ಕೇವಲ ವ್ಯಕ್ತಿಯಲ್ಲ; ಅದೊಂದು ಸಮುದಾಯ ಪ್ರಜ್ಞೆ. ಶಕುಂತಲಾದೇವಿಯವರ ಜ್ಞಾನಶಕ್ತಿ 2x2=4ರ ಲೆಕ್ಕಾಚಾರದ ಅಗಾಧ ನೆನಪಿನ ಕೋಶ. ಇಂದು ತಾಂತ್ರಿಕ ನೈಪುಣ್ಯತೆ ಹಾಗೂ ಪರಿಕಲ್ಪನೆಗಳ ಅದ್ಭುತ ಸಮೀಕರಣದ ಜ್ಞಾನಶಕ್ತಿ. ಇಲ್ಲಿ ಪರಿಭಾವಿಸಬೇಕಾದ ಬಹುಮುಖ್ಯ ವಿಚಾರವೆಂದರೆ, ಮೊದಲನೆಯದು ಭಾವಪ್ರಭೆಯ ಸೃಜನೆಯ ಫಲ. ಎರಡನೆಯದು ಬುದ್ಧಿ ಸಂಚಯದ ತರ್ಕದ ಫಲ. ಇಂದು ಈ ಎರಡು ವಾಸ್ತವಗಳ ನಡುವೆ ಅಕ್ಷರ ಲೋಕದ ಚಲನೆ ಹಲವು ಸವಾಲುಗಳಿಗೆ ಹಲವು ಬಿಕ್ಕಟ್ಟುಗಳಿಗೆ ಮುಖಾಮುಖಿಯಾಗಿದೆ.

ಜ್ಞಾನದ ಶೋಧ ವಿಸ್ತರಣೆಗೊಂಡಂತೆ, ಬಹಳಷ್ಟು ಆತಂಕಗಳು ನಿತ್ಯದ ಭಯಗಳಾಗಿ ನಮ್ಮೆದುರು ಬಿಚ್ಚಿಕೊಳ್ಳುತ್ತಿವೆ. ಮಾಹಿತಿ ತಂತ್ರಜ್ಞಾನದ ವೇಗದಾಳಿಗೆ ಸಿಲುಕಿ ಜಗತ್ತಿನ ಬಹುತೇಕ ಭಾಷೆಗಳು ಕಣ್ಮರೆಯಾಗುವ ಆತಂಕವನ್ನು ಹಲವು

ಜನ ಭಾಷಾತಜ್ಞರು ಗಂಭೀರ ಸಮಸ್ಯೆಯಾಗಿ ಜಗತ್ತಿನ ಮುಂದಿಟ್ಟಿದ್ದಾರೆ. ಈ ಆತಂಕದ ಆವರಣದಲ್ಲಿ ನಮ್ಮ ಕನ್ನಡ ಭಾಷೆಯ ಸ್ಥಿತಿ ಏನು? ಇದು ಇಂದು ನಾವು ಕೇಳಿಕೊಳ್ಳಬೇಕಾದ ಪ್ರಮುಖ ಪ್ರಶ್ನೆ. ಭಾಷೆ ಎಂಬುದು ಕೇವಲ ಸಂವಹನ ಸಂಕೇತವಲ್ಲ. ಅದು ಸಮುದಾಯದ ಸಂಸ್ಕೃತಿ, ನಾಗರಿಕತೆ, ಸೃಜನಶಕ್ತಿ, ಬುದ್ಧಿಭಾವಗಳು ಸಂಲಗ್ನಗೊಂಡ ಬದುಕಿನ ಪ್ರತೀಕ. ಅದು ಸಮುದಾಯದ ಉಸಿರು. ಇಂಥ ಭಾಷೆಯ ಅಳಿಯುವಿಕೆ ಎಂದರೆ ಬದುಕಿನ ಎಲ್ಲ ಕ್ಷೇತ್ರಗಳ ಪ್ರಮುಖ ವ್ಯಾವಹಾರಿಕತೆಯಿಂದ ಆ ಭಾಷೆಯನ್ನು ಹೊರಗಿಡುವುದು; ಆಡಳಿತ ಶಿಕ್ಷಣ ಸಂಪರ್ಕ ಮಾಧ್ಯಮ ಸ್ಥಾನದಿಂದ ಆ ಭಾಷೆಯನ್ನು ಕಣ್ಮರೆ ಮಾಡುವುದು. ಇದರ ಅರ್ಥ ಬಹುದೊಡ್ಡ ಭಾಷಿಕ ಸಮುದಾಯವೊಂದನ್ನು ಜ್ಞಾನದ ಬೆಳಕಿನಿಂದ ದೂರವಿಡುವುದು. ಜಾಗತಿಕ ಬದುಕಿನ ಸುಖ ಸವಲತ್ತುಗಳಿಂದ ವಂಚಿಸುವುದು. ಇಂಥ ಹಲವು ಆಘಾತಕಾರೀ ಆತಂಕಗಳ ವಾತಾವರಣದಲ್ಲಿ ಇಂದು ಕನ್ನಡ ಅಕ್ಷರ ಲೋಕ ತನ್ನ ಗತಿಯನ್ನು ಕಂಡುಕೊಳ್ಳಬೇಕಾಗಿದೆ.

ಸಾವಿರಾರು ವರ್ಷಗಳ ಇತಿಹಾಸದಲ್ಲಿ ಸಾಂಸ್ಕೃತಿಕ, ರಾಜಕೀಯ ದಬ್ಬಾಳಿಕೆಯನ್ನು ಸಮರ್ಥವಾಗಿ ಎದುರಿಸಿ, ಬೆಳೆದುಬಂದ ಕನ್ನಡ ಭಾಷೆಗೆ, ಕನ್ನಡ ಬದುಕಿಗೆ ಆತಂಕ ಆಘಾತಗಳು ಮೈಯುಂಡ ಬಾಳು. ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತ ಮತಿಗಳಿಂದ ಮೊದಲ್ಗೊಂಡು ಹಿತಮಿತ ಮೃದುವಚನ, ನುಡಿ ಟಠಡಢಣ, ಮಾತು ಜ್ಯೋತಿರ್ಲಿಂಗ, ಹಲಗೆ ಬಳಪವ ಪಿಡಿಯದೊಂದಗ್ಗಳಿಕೆಯಲ್ಲಿ ಒಲಿದಂತೆ ಹಾಡಿದ ಹಲವು ಕಾಲದ ಹಲವು ನಿಟ್ಟಿನ ನುಡಿಸಾಧಕರ ಮಾರ್ಗದೇಸಿಗಳ ಸಮಾಹಿತದಲ್ಲಿ ತನಗೆದುರಾದ ಆತಂಕ ಆಘಾತಗಳನ್ನು ಅರಗಿಸಿಕೊಂಡು ಕನ್ನಡದ ದೀಪ ಬೆಳಗಿದೆ. ಇದರರ್ಥ ಆಯಾ ಕಾಲದ ಕನ್ನಡ ಸಮುದಾಯ ತನ್ನ ಕಾಲದ ಸವಾಲುಗಳಿಗೆ ತಕ್ಕ ವಿವೇಕ ತೋರಿ ಸೃಜನಶೀಲವಾಗಿದೆ. ಆದರೆ, ಇಂದಿನ ಆತಂಕ ಹಿಂದೆಂದಿನ ಆಕ್ರಮಣಗಳಿಗಿಂತ ಭಯಾನಕವಾದುದು. ಈ ಭಯಾನಕತೆಯನ್ನು ಎದುರಿಸುವ ಹಾಗೂ ಆರೋಗ್ಯಕರವಾಗಿ ಅದನ್ನು ಅರಗಿಸಿಕೊಂಡು ಬೆಳೆಯುವ ಸತ್ವಶಕ್ತಿ ಭಾಷೆಗಿದ್ದರೂ, ಭಾಷಿಕ ಸಮುದಾಯದ ಇಚ್ಛಾಶಕ್ತಿಯ ಕೊರತೆ ಎದ್ದುಕಾಣುವ ಸಂಗತಿ. ಈ ಇಚ್ಛಾಶಕ್ತಿ ಹೊರಗಿನಿಂದ ಆಮದು ಮಾಡಿಕೊಳ್ಳುವ ಸರಕಲ್ಲ; ಬದುಕನ್ನು ರೂಪಿಸುವ ಪ್ರಭುತ್ವ ಹಾಗೂ ಪ್ರಭುತ್ವವನ್ನು ಆಯ್ಕೆ ಮಾಡಿಕೊಳ್ಳುವ ಜನಸಮುದಾಯದೊಳಗೆ ಅರಿವೇ ಗುರುವಾಗಿ ಮೂಡಬೇಕಾದ ಪ್ರಜ್ಞಾವಿಶೇಷ. ಈ ಪ್ರಜ್ಞಾ ವಿಶೇಷ ಸಿರಿಯಜ್ಜಿಯ ಸಮುದಾಯವನ್ನು ಕಡೆಗಣಿಸದೆ ಸಮೀಕರಣದ ಜ್ಞಾನಶಕ್ತಿಗೆ ಮಣೆ ಹಾಕಬೇಕಿದೆ. ಸಾಮಾಜಿಕ ನ್ಯಾಯವನ್ನು ಸಂಸ್ಕೃತಿಯ ರುಚಿ ವಿಶೇಷತೆಯನ್ನು ಪರಿಭಾವನೆಗೆ ತಂದುಕೊಂಡು ಜಂಗಮಶೀಲವಾಗಬೇಕಿದೆ.

ಅತಿರೇಕಗಳ ಅವಾಂತರದಿಂದ ಸಮುದಾಯವನ್ನು ಕಾಪಾಡುವ ಶಕ್ತಿ ಅಕ್ಷರ ಲೋಕಕ್ಕಿದೆ. ಆದ್ದರಿಂದ ಅಕ್ಷರ ಲೋಕ ಸೃಜನಶೀಲತೆಯನ್ನು ಎಚ್ಚರದಿಂದ ಉಳಿಸಿಕೊಳ್ಳುತ್ತಾ, ಜ್ಞಾನದ ಹೊಸ ವಿಸ್ತರಣೆಗೆ ತೆರೆದುಕೊಳ್ಳುವ ಅಗತ್ಯವಿದೆ.

ವಿಜ್ಞಾನದ ಹೊಸ ಹೊಸ ಆವಿಷ್ಕಾರಗಳಿಗೆ ಪ್ರತಿಸ್ಪಂದಿಸುತ್ತಾ ಬೆಳೆಯುವ ಭಾಷೆಯ ಸೃಜನಶೀಲತೆ ಪ್ರಕಾಶಿಸುತ್ತದೆ. ವೈಜ್ಞಾನಿಕ ವಿಚಾರ ಸೃಜನಶೀಲಭಾವದಲ್ಲಿ ಅಭಿವ್ಯಕ್ತಿಗೊಂಡಾಗ ಅದಕ್ಕೊಂಡು ಮಾನವೀಯತೆಯ ಪ್ರಭೆ ಪ್ರಾಪ್ತವಾಗುತ್ತದೆ. ಹೊಸಕಾಲದ ಸಂವೇದನೆಗಳಿಗೆ ವೈಜ್ಞಾನಿಕ ವಿಚಾರಗಳಿಗೆ ತಾತ್ವಿಕ ತರ್ಕದೀಪ್ತಿಗಳಿಗೆ ತೆರೆದುಕೊಳ್ಳುವ ನಮ್ಮಗುಣ ಜೀವಂತ ಭಾಷೆಯೊಂದರ ದೊಡ್ಡಶಕ್ತಿ. ಕಾಲದ ಅಗತ್ಯಗಳಿಗೆ ಸ್ಪಂದಿಸಬಲ್ಲ ನಮ್ಮಗುಣ ಕನ್ನಡ ಭಾಷೆಯ ದೊಡ್ಡ ಶಕ್ತಿ. ಜಾಗತಿಕ ಮಟ್ಟದಲ್ಲಿ ವಿಸ್ತರಣೆಗೊಳ್ಳುತ್ತಿರುವ ಎಲ್ಲ ಜ್ಞಾನಶಾಖೆಗಳ ಪಾರಿಭಾಷಿಕ ಶಬ್ದ ಸಂಪತ್ತನ್ನು ಸ್ವೀಕರಿಸುತ್ತಾ, ತನ್ಮೂಖೇಣ ವಿಷಯಜ್ಞಾನವನ್ನು ಅರಗಿಸಿಕೊಂಡು ಕನ್ನಡ ಭಾಷೆ ಬೆಳೆಯಬೇಕಿದೆ. ಕನ್ನಡದ ಜ್ಞಾನ ಚೇತನಗಳ ಇಚ್ಛಾಶಕ್ತಿ ಈ ದಿಸೆಯಲ್ಲಿ ಹೆಚ್ಚು ಕ್ರಿಯಾಶೀಲವಾಗಬೇಕಾದ ಅಗತ್ಯವಿದೆ. ಅಲ್ಲಮನ ಒಂದು ವಚನ ಹೀಗಿದೆ–

ಹಿಂದಣ ಅನಂತವನು ಮುಂದಣ ಅನಂತವನು<br>
ಒಂದು ದಿನ ಒಳಕೊಂಡಿತ್ತು ನೋಡಾ<br>
ಒಂದು ದಿನವನೊಳಕೊಂಡು ಮಾತಾಡುವ ಮಹಾಂತನ<br>
ಕಂಡು ಬಲ್ಲವರಾರಯ್ಯ<br>
ಆದ್ಯರು ವೇದ್ಯರು ಅನಂತ ಹಿರಿಯರು ಕಾಲದಂತುವನರಿಯದೆ<br>
ಅಂತೆ ಹೋದರು ಕಾಣಾ ಗುಹೇಶ್ವರ

ಜಗತ್ತಿನ ಜ್ಞಾನಕ್ಕೆ ಹಿಂದಣ ಪರಂಪರೆಯ ಅಪಾರತೆ ಇದೆ. ಮುಂದಣ ಭವಿಷ್ಯದ ಅನಂತತೆ ಇದೆ. ವರ್ತಮಾನದಲ್ಲಿ ಈ ಎರಡೂ ಸಂಲಗ್ನಗೊಂಡ ಭಾವದಲ್ಲಿ ಸೃಜನಶೀಲವಾದಾಗ ಅದು ಅಳಿಯದ ಮಾತಾಗುತ್ತದೆ. ಆ ಮಾತು ಜ್ಯೋತಿರ್ಲಿಂಗ ರೂಪಿಯಾಗುತ್ತದೆ. ನಿಜವಾದ ಪುಸ್ತಕಗಳು ಮಾತು ಜ್ಯೋತಿರ್ಲಿಂಗವಾದ ಸಂಸ್ಕೃತಿ ಸಂಚಯದ ಜ್ಞಾನದೀವಿಗೆಗಳು. ಜ್ಞಾನವನ್ನು ಕೇವಲ ಪಂಡಿತಮಾನ್ಯರ ಸ್ವತ್ತಾಗಿಸದೆ, ಜನಸಾಮಾನ್ಯರ ಬದುಕಾಗಿಸುವುದು ಅಕ್ಷರಲೋಕದ ಗುರಿಯಾಗಬೇಕು. ಜ್ಞಾನ ಪರಂಪರೆಗಳನ್ನು ಶೋಧನೆಗೆ ಹಚ್ಚುತ್ತಾ, ಆತ್ಮಾವಲೋಕನದ ಒಳಮುಖೀದರ್ಶನ ದೀಪ್ತಿಯಲ್ಲಿ ಸತ್ಯವನ್ನು ಮನಗಾಣಿಸಬೇಕು. ಕಂಡ ಸತ್ಯದ ಬೆಳಕಿನಲ್ಲಿ ವರ್ತಮಾನದ ದಾರಿ ತೆರೆದು ಭವಿಷ್ಯದ ಮುಂಗಾಣ್ಕೆಯಿಂದ ಗುರಿಯ ಕಡೆ ಹೆಜ್ಜೆ ಹಾಕಬೇಕು. ಇದು ಬದುಕಿನ ಗತಿಶೀಲ ಗುಣವಾದಾಗ ಅತಿರೇಕಗಳಿಗೆ ಅವಕಾಶವಿರುವುದಿಲ್ಲ.

ಇದು ಜಾಗತೀಕರಣದ ಯುಗ. ಈ ಪ್ರಕ್ರಿಯೆಯ ವೇಗ ಅಪರಿಮಿತವಾದಷ್ಟು ಅಪಾಯಕಾರಿಯೂ ಆಗಿದೆ. ಜಾಗತೀಕರಣದ ದಾಳಿಯಲ್ಲಿ ಏಕಸಂಸ್ಕೃತಿ, ಏಕಜೀವನಶೈಲಿ, ಏಕಭಾಷಾಧಿಪತ್ಯಕ್ಕೆ ಜಗತ್ತನ್ನು ಒಳಗುಮಾಡುವುದರಿಂದ ಆಗುವ ದುಷ್ಪರಿಣಾಮವೆಂದರೆ, ಜೀವನ ವೈವಿಧ್ಯತೆಯ ಬಹುಮುಖೀ ಸಂಸ್ಕೃತಿಗಳ ಸಾವು. ಅತಿರೇಕದ ವೈಪರೀತ್ಯಕ್ಕೆ ಒಳಗಾಗಿ ಬದುಕನ್ನು ಬರಡಾಗಿಸುವ ಹಾಗೂ ಅಸಮಾನತೆಯ ಪ್ರಮಾಣವನ್ನು ಅಗಾಧವಾಗಿಸುವ ಅಪಾಯದಿಂದ ಈ ಸಮುದಾಯಗಳನ್ನು ರಕ್ಷಿಸುವ ಅಗತ್ಯ ಇಂದಿನ ತುರ್ತು. ಈ ತುರ್ತಿನ ಸನ್ನಿವೇಶದಲ್ಲಿ ವಿವೇಕದ ದಾರಿ ತೋರಿ ಅತಿರೇಕಕ್ಕೆ ಕಡಿವಾಣವನ್ನು ಹಾಕಿ ಸಂಸ್ಕೃತಿಯನ್ನು, ಬದುಕನ್ನು ಮಾನವ ಕೋಟಿಯನ್ನು ಸಂರಕ್ಷಿಸಬಲ್ಲ ಶಕ್ತಿ ಸಂಪನ್ನತೆಯಿಂದ ಹೊಳೆವ ಅಕ್ಷರಲೋಕ ಜಗತ್ತಿನ ವೈವಿಧ್ಯತೆಯನ್ನು ಸಂರಕ್ಷಿಸುತ್ತದೆ. ವೈವಿಧ್ಯತೆಗಳೊಳಗಿನ ಸೃಜನಶೀಲತೆಯನ್ನು ಬೆಳೆಸುತ್ತದೆ.

ಪುಸ್ತಕಗಳು ಅಕ್ಷರ ಲೋಕದ ಮೂರ್ತರೂಪಗಳು ; ಅಮೂರ್ತವಾದ ಜ್ಞಾನಸಂಪತ್ತನ್ನು ಧಾರಣ ಮಡಿಕೊಂಡ ಶಬ್ದರೂಪಗಳು. ಶಬ್ದ ಕೇವಲ ಅರ್ಥದ ಅಭಿದಾವೃತ್ತಿಯಲ್ಲಿ ನೆಲೆ ನಿಲ್ಲುವುದಿಲ್ಲ, ವ್ಯಂಜನಾ ವ್ಯಾಪಾರದಲ್ಲಿ ಅನುಭಾವಿಕವಾಗುವುದು. ಈ ವ್ಯಂಜನಾ ವ್ಯಾಪಾರ ಬುದ್ಧಿಭಾವಗಳ ವಿದ್ಯುದಾಲಿಂಗನ ಪ್ರಭೆಯ ಫಲಿತ. ಹೀಗಾಗಿ ಪುಸ್ತಕಗಳು ಸಂಸ್ಕೃತಿ ನಾಗರಿಕತೆಗಳ ಸಂಚಯಿತ ಫಲವಾದಷ್ಟೇ ಸಂಸ್ಕೃತಿಯನ್ನು ನಿರಂತರವಾಗಿ ಉಜ್ಜೀವಿಸುವ ಧಾತು ದ್ರವ್ಯಗಳು.

ಕನ್ನಡ ಪುಸ್ತಕ ಪ್ರಾಧಿಕಾರವು ಕರ್ನಾಟಕದಾದ್ಯಂತ ಪುಸ್ತಕ ಸಂಸ್ಕೃತಿಯನ್ನು ಬೆಳೆಸುವ ಸದುದ್ದೇಶದಿಂದ ಪ್ರಾರಂಭವಾದ ಒಂದು ಸಂಸ್ಕೃತಿ ಕೇಂದ್ರ. ವಾಚನಾಭಿರುಚಿಯನ್ನು ಬೆಳೆಸುವುದು ಹಾಗೂ ಪುಸ್ತಕೋದ್ಯಮವನ್ನು ಆರೋಗ್ಯಕರವಾಗಿ ಪೋಷಿಸುವುದು ಪ್ರಾಧಿಕಾರದ ಹೊಣೆಯಾಗಿರುತ್ತದೆ. ಅದಕ್ಕಾಗಿ ಹಲವು ರೀತಿಯ ಕಾರ್ಯಯೋಜನೆಗಳನ್ನು ಪ್ರಾಧಿಕಾರ ರೂಪಿಸಿಕೊಂಡಿದೆ. ಯುವ ಸಮುದಾಯದಲ್ಲಿ ವಾಚನಾಭಿರುಚಿ ಹೆಚ್ಚಿಸಲು ವಾಚನಾಭಿರುಚಿ ಕಮ್ಮಟಗಳನ್ನು ನಡೆಸುತ್ತಿದೆ. ಪ್ರಕಾಶಕರು, ಲೇಖಕರು ಹಾಗೂ ಓದುಗರ ನಡುವೆ ಚಿಂತನ ಕಮ್ಮಟಗಳನ್ನು ನಡೆಸುತ್ತಿದೆ. ಇವುಗಳ ಜೊತೆಗೆ ಎರಡನೆಯ ಆದ್ಯತೆಯಾಗಿ ಪುಸ್ತಕ ಪ್ರಕಟಣೆಯ ಜವಾಬ್ದಾರಿಯನ್ನು ನಿರ್ವಹಿಸುತ್ತಿದೆ. ಶೈಕ್ಷಣಿಕ ಶಿಸ್ತಿನಲ್ಲಿ ಅಧ್ಯಯನ ಮಾಡುವ ಪರಾಮರ್ಶನ ಗ್ರಂಥಗಳ ಜೊತೆಗೆ ಜನಸಾಮಾನ್ಯರಿಗೆ ಅಗತ್ಯವಾಗಿ ಬೇಕಾದ ಅರಿವನ್ನು ಹಂಚುವ ಪುಸ್ತಕಗಳ ಪ್ರಕಟಣೆಯೂ ಪ್ರಾಧಿಕಾರದ ಉದ್ದೇಶವಾಗಿದೆ.

'ಅಂಚೆ ಚೀಟಿಗಳಲ್ಲಿ ಆರೋಗ್ಯ' – ಕೃತಿಯನ್ನು ಡಾ॥ ಎ.ಟಿ. ಪಾಟೀಲ ಅವರು ಬರೆದಿದ್ದಾರೆ. ಇವರು ವೃತ್ತಿಯಲ್ಲಿ ವೈದ್ಯರಾದರೂ ಅಂಚೆ ಚೀಟಿ ಸಂಗ್ರಹವನ್ನು ಒಂದು ಹವ್ಯಾಸವಾಗಿಸಿಕೊಂಡಿದ್ದಾರೆ. ಅಷ್ಟೇ ಅಲ್ಲದೆ ವಿಶೇಷವಾಗಿ ತಮ್ಮ ವೃತ್ತಿಧರ್ಮದ ಸಂಬಂಧದ ನೆಲೆಯಲ್ಲಿ ತಮ್ಮ ಹವ್ಯಾಸಕ್ಕೆ ಒಂದು ಅರ್ಥಪೂರ್ಣತೆ ತಂದುಕೊಳ್ಳುವ ಕ್ರಿಯೆಯಾಗಿ ಈ ಕೃತಿ ರಚನೆ ಮಾಡಿದ್ದಾರೆ. ವೃತ್ತಿ–ಪ್ರವೃತ್ತಿಗಳೆರಡಕ್ಕೂ ಅಭಿರುಚಿ ಆಸಕ್ತಿಗಳೆಂಬ ಮನೋಧರ್ಮ ಭೂಮಿಕೆಯಾಗಿದೆ. ಒಂದು ವಿಶೇಷ ದಾಖಲಾತಿಯಾಗಿ ಈ ಪುಸ್ತಕ ಮುಖ್ಯವಾಗುತ್ತದೆ. ಇದನ್ನು ಹಿಂದಿನ ಅಧ್ಯಕ್ಷರಾದ ದಿ. ನೆಲಮನೆ ಕೆ. ದೇವೇಗೌಡರ ಕಾಲಾವಧಿಯಲ್ಲಿ ಆಯ್ಕೆ ಮಾಡಲಾಗಿದ್ದು ಸದ್ಯದ ಸಮಿತಿಯು ಪ್ರಕಟಣೆಗೆ ಕೈಗೆತ್ತಿಕೊಂಡು ಪ್ರಟಿಸಿದೆ. ಪ್ರಕಟಣೆಗೆ ಕಾರಣರಾದ ಎಲ್ಲರಿಗೂ ಕೃತಜ್ಞತೆಗಳು.

ಪ್ರೊ. ಎಸ್. ಜಿ. ಸಿದ್ಧರಾಮಯ್ಯ
ಅಧ್ಯಕ್ಷರು

# ಕೃತಜ್ಞತೆಗಳು

ನನ್ನ ಪ್ರಥಮ ಪ್ರಯತ್ನವಾದ "ಅಂಚೆ ಚೀಟಿಗಳಲ್ಲಿ ಆರೋಗ್ಯ" ಕೃತಿಯನ್ನು ಬರೆಯಲು ಪ್ರೋತ್ಸಾಹಿಸಿದ್ದು ಅಲ್ಲದೆ ಪ್ರಕಟಣೆಯ ಹೊಣೆಯನ್ನು ಹೊತ್ತ ಕನ್ನಡ ಪುಸ್ತಕ ಪ್ರಾಧಿಕಾರದ ಅಧಿಕಾರಿ ವೃಂದಕ್ಕೂ ವಿಶೇಷವಾಗಿ ಪ್ರಾಧಿಕಾರದ ಅಧ್ಯಕ್ಷರಾದ ದಿ॥ ಶ್ರೀ ನೆಲೆಮನೆ ದೇವೇಗೌಡರಿಗೂ ಹಾಗೂ ಸದ್ಯದ ಅಧ್ಯಕ್ಷರಾದ ಪ್ರೊ॥ ಎಸ್.ಜಿ. ಸಿದ್ದರಾಮಯ್ಯನವರಿಗೂ ನನ್ನ ಹೃತ್ಪೂರ್ವಕ ಕೃತಜ್ಞತೆಗಳು.

ನನ್ನ ಬರವಣಿಗೆಯ ಪ್ರತಿ ಹಂತದಲ್ಲೂ ನನಗಿಂತಲೂ ಹೆಚ್ಚಿನ ಕಾಳಜಿ ವಹಿಸಿ ಪ್ರತಿಯೊಂದು ಲೇಖನವನ್ನು ಓದಿ, ತಿದ್ದಿ ಹಾಗೂ ಸುರೂಪಕ ಚಿಕಿತ್ಸೆಗೆ ಒಳಪಡಿಸಿ ಯಾವ ಕಾಲಕ್ಕೂ ಬೇಸರ ಪಡದೆ ನನಗೆ ಮಾರ್ಗದರ್ಶನ ಮಾಡಿದ ಡಾ॥ ಡಿ.ಕೆ. ಮಹಾಬಲರಾಜು, ಎಂ.ಡಿ. ಪ್ರಾಧ್ಯಾಪಕರು, ಸಮುದಾಯ ಆರೋಗ್ಯ ಶಾಸ್ತ್ರ, ಜೆ.ಜೆ.ಎಂ.ಎಂ.ಸಿ. ದಾವಣಗೆರೆ ಅವರಿಗೆ ಈ ಪುಸ್ತಕದ ಸಂಪೂರ್ಣ ಶ್ರೇಯಸ್ಸು ಸಲ್ಲಬೇಕು. ಅವರಿಗೂ ನನ್ನ ಹೃದಯ ತುಂಬಿ ಬಂದ ಕೃತಜ್ಞತೆಗಳು.

ನನ್ನ ಕುಟುಂಬದ ಸದಸ್ಯರಾದ ನನ್ನ ಶ್ರೀಮತಿ ಪಿ. ಎ. ನಾಗರತ್ನ, ಮಗಳಾದ ಶ್ರೀಮತಿ ತೇಜಸ್ವಿನಿ ವಿವೇಕ ಪಾಟೀಲ್, MSc.MEd (ಸದ್ಯ ಪುಣೆಯಲ್ಲಿ ವಾಸ) ಹಾಗೂ ನನ್ನ ಚಿ॥ನಾ ಡಾ॥ ಪಿ.ಎ. ಜಯಪ್ರಕಾಶ MBBS,MS (Phtho) DNB [ಸದ್ಯ ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯದಲ್ಲಿ ಕೆಲಸ] ಇವರೆಲ್ಲರನ್ನೂ ನಾನು ಈ ಸಮಯದಲ್ಲಿ ಅವರ ಬೆಂಬಲ ಮತ್ತು ಸಹಕಾರಗಳ ವಿಷಯದಲ್ಲಿ ನೆನೆಯಲೇಬೇಕಾದುದು ನನ್ನ ಆದ್ಯ ಕರ್ತವ್ಯವಾಗಿದೆ.

ಕೊನೆಯದಾಗಿ ನನ್ನ ಈ ಪುಸ್ತಕಕ್ಕೆ ಸುಂದರವಾದ ಮತ್ತು ಅರ್ಥಗರ್ಭಿತವಾದ ಚಿತ್ರಗಳನ್ನು ಬರೆದುಕೊಟ್ಟು ಸಹಕರಿಸಿದ ಶ್ರೀ ನರಸಿಂಹ ಭಟ್ ಹಾಗೂ ಶ್ರೀ ವಿನಾಯಕಭಟ್ ಸಹೋದರರಿಗೂ ನನ್ನ ವಿನಯಪೂರ್ವಕವಾದ ನಮನಗಳು.

ದಾವಣಗೆರೆ
16-07-2007

**ಡಾ॥ ಎ. ಟಿ. ಪಾಟೀಲ**
ಕುಟುಂಬ ವೈದ್ಯರು
ದಾವಣಗೆರೆ

# ಲೇಖಕರ ಪರಿಚಯ

"ವಂಟಮುರಿ" ಎಂಬ ಬೆಳಗಾವಿ ಜಿಲ್ಲೆಯ ಒಂದು ಸುಂದರವಾದ ಹಳ್ಳಿಯಲ್ಲಿ ಜನನ (4–4–1946). ತಂದೆ ದಿ॥ ಟಿ.ವಿ. ಪಾಟೀಲ, ಊರ ಪಟೇಲರು ಹಾಗೂ ಸಮಾಜ ಸುಧಾರಕರು. ತಾಯಿ ದಿ॥ ಗಂಗಾಬಾಯಿ. ಓದಿದ್ದು ತುಂಬಾ ಕಡಿಮೆಯಾದರೂ ಓದುವವರನ್ನು ಮತ್ತು ಓದಿದವರನ್ನು ಕಂಡರೆ ಪಂಚಪ್ರಾಣ. ಪ್ರಾಥಮಿಕ ಶಿಕ್ಷಣ ವಂಟಮುರಿ ಗ್ರಾಮದಲ್ಲಿ. ಹೈಸ್ಕೂಲು ಓದು ಯಮಕನಮರ್ಡಿ ಟೌನಿನಲ್ಲಿ. ಕಾಲೇಜಿ ಶಿಕ್ಷಣ ಬಾಗಲಕೋಟೆ ಮತ್ತು ಬೆಳಗಾವಿ ಶಹರಗಳಲ್ಲಿ. ಎಂ.ಬಿ.ಬಿ.ಎಸ್. ಪದವಿ ಪಡೆದದ್ದು ಕೆ.ಎಂ.ಸಿ. ಹುಬ್ಬಳ್ಳಿಯಲ್ಲಿ. ಕಳೆದ 33 ವರ್ಷಗಳಿಂದ ಕುಟುಂಬ ವೈದ್ಯರಾಗಿ ದಾವಣಗೆರೆಯಲ್ಲಿ ಸೇವೆ ಸಲ್ಲಿಸುತ್ತಿರುವರು.

ಸಾಕಷ್ಟು ಲೇಖನಗಳು 'ವೈದ್ಯಕೀಯ ಸಾಹಿತ್ಯ'ದಲ್ಲಿ ಬೆಳಕು ಕಂಡಿವೆ. ಆಗಾಗ್ಗೆ 'ಜೀವನಾಡಿ', 'ಆದರ್ಶ ಗಂಡ ಹೆಂಡತಿ' ಮತ್ತು 'ಬಾಲ ವಿಜ್ಞಾನ' ಪತ್ರಿಕೆಗಳಿಗೆ ಬರೆಯುತ್ತಿರುವರು.

ಮನೆಯಲ್ಲೊಂದು ಅಪೂರ್ವವಾದ ಗ್ರಂಥಾಲಯವಿದ್ದು ಸುಮಾರು 15000ಕ್ಕೂ ಹೆಚ್ಚಿನ ಕನ್ನಡ ಸಾಹಿತ್ಯದ ಉತ್ತಮೋತ್ತಮ ಪುಸ್ತಕಗಳನ್ನು ಒಂದೆಡೆ ಕಾಣಬಹುದು. ಡಾ॥ ಕೆ. ಶಿವರಾಮ ಕಾರಂತರ ಸುಮಾರು 222 ಪುಸ್ತಕಗಳ ಸಂಗ್ರಹವನ್ನು ಅವರ ಗ್ರಂಥಾಲಯದಲ್ಲಿ ನೋಡಬಹುದು. ಸ್ವಾತಂತ್ರ್ಯೋತ್ತರದ ಎಲ್ಲ ಭಾರತೀಯ ಅಂಚೆ ಚೀಟಿಗಳ ಸಂಗ್ರಹ, ವಿಶೇಷವಾದ ನಾಣ್ಯ / ನೋಟುಗಳ ಸಂಗ್ರಹ ಮತ್ತು ಧ್ವನಿ ಸುರುಳಿಗಳ ಸಂಗ್ರಹವನ್ನು ಸಹ ಅವರ ಮನೆಯಲ್ಲಿ ನೋಡಬಹುದು.

ಶ್ರೀಮತಿ ನಾಗರತ್ನ, ಪುತ್ರಿಯಾದ ಶ್ರೀಮತಿ ತೇಜಸ್ವಿನಿ ವಿವೇಕ ಪಾಟೀಲ M.Sc. MEd (ಸದ್ಯ ಪುಣೆಯಲ್ಲಿ ವಾಸ) ಪುತ್ರರಾದ ಡಾ॥ ಪಿ.ಎ. ಜಯಪ್ರಕಾಶ MBBS.M.S. (Ophtho) DNB (ಸದ್ಯ ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯದಲ್ಲಿ ಕೆಲಸ)–ಇವರೆಲ್ಲರ ಸಹಕಾರಗಳ ಫಲವೇ 'ಅತ್ಯುತ್ತಮ ಗ್ರಂಥಾಲಯ' ಹೊಂದಲು ಸಾಧ್ಯವಾಗಿದೆ. ಈ ಪುಸ್ತಕ ಹೊರಬರಲು ಅವರ ಸಲಹೆ ಸಹಕಾರಗಳು ಮುಖ್ಯ ಪಾತ್ರವಹಿಸಿವೆ.

# ನಿವೇದನೆ

ಅಂಚೆ ಚೀಟಿ ಮತ್ತು ಆರೋಗ್ಯ ಈ ಎರಡು ಪದಗಳು ಮಾನವನ ಜನಜೀವನದೊಂದಿಗೆ ಹಾಸುಹೊಕ್ಕಾಗಿವೆ. ಆರೋಗ್ಯ ಮತ್ತು ಸಂವಹನ ಮಾನವನ ಮುಖ್ಯ ಮೂಲಭೂತ ಅವಶ್ಯಕತೆಗಳು. ಹೀಗಾಗಿ ಈ ಪದಗಳು ಮಾನವನ ಹುಟ್ಟಿನೊಂದಿಗೆ ಹುಟ್ಟಿರಬಹುದು. ಈಗ ಆರೋಗ್ಯ ಕ್ಷೇತ್ರದಲ್ಲಿ ಸಾಕಷ್ಟು ಪ್ರಗತಿಗಳಾಗಿವೆ. ಈ ಪ್ರಗತಿಗೆ ಸರಿಸಾಟಿಯಾಗಿ ಅಂಚೆ ಲೋಕದಲ್ಲೂ ಕ್ಷಿಪಣಿ ವೇಗದ ಸುಧಾರಣೆಗಳಾಗಿವೆ. ನಾನು ಒಬ್ಬ ವೈದ್ಯ ಹಾಗೂ ಹವ್ಯಾಸಿ ಅಂಚೆಚೀಟಿ ಸಂಗ್ರಹಕಾರನೂ ಹೌದು. ಹೀಗಾಗಿ ಆರೋಗ್ಯ ಮತ್ತು ಅಂಚೆ ಚೀಟಿ ಎಂಬ ವಿಷಯವನ್ನು ಇಲ್ಲಿ ಆಯ್ದುಕೊಂಡಿರುತ್ತೇನೆ. ಎರಡು ಪದಗಳ ಬೆಸುಗೆಗೆ ಯುಕ್ತವಾಗಿ ನ್ಯಾಯ ಒದಗಿಸಲು ಯತ್ನಿಸಿದ್ದೇನೆ.

ಅಂಚೆಲೋಕದ ಎಲ್ಲ ಸಂಗತಿಗಳು ನನಗೆ ತಿಳಿದಿಲ್ಲದಿರುವುದು ಹಾಗೂ ನನಗೆ ತಿಳಿದೆಲ್ಲ ವಿಷಯಗಳನ್ನೂ ಇಲ್ಲಿ ಪ್ರಸ್ತಾಪಿಸಲಾಗದ ಸೀಮಿತತೆ ಇರುವುದು. ಬೇಸರದ ಸಂಗತಿ. ಆದಾಗ್ಯೂ ಅಂಚೆ ಚೀಟಿಗಳ ಬಗ್ಗೆ ನನಗೆ ಗೊತ್ತಿರುವುದೆಲ್ಲವನ್ನೂ ತಂದು ತಿಪ್ಪೆ ಹಾಕುವ ಉದ್ದೇಶ ನನಗಿಲ್ಲ. ಆದರೂ ಅಂಚೆ ಲೋಕದ ಕೌತುಕಗಳು, ಅಂಚೆ ಇತಿಹಾಸದ ಮೇಲೆ ಬೆಳಕು ಬೀರುವ ಸಂಗತಿಗಳು ಹಾಗೂ ದಾಖಲಿಸಲೇಬೇಕಾದ ಕೆಲ ವಿಷಯಗಳನ್ನು ಬಾಲಂಗೋಚಿಯಾಗಿ ಬಳಸಿಕೊಂಡಿದ್ದೇನೆ. ಆರೋಗ್ಯ ಸಂಬಂಧಿ ಅಂಚೆ ಚೀಟಿಗಳನ್ನು ಪ್ರಸ್ತಾವಿಕವಾಗಿ ಪ್ರದರ್ಶಿಸುವುದೇ ನನ್ನ ಮುಖ್ಯ ಉದ್ದೇಶ. ಲೇಖಕನ ಧ್ಯೇಯ ಮತ್ತು ಉದ್ದೇಶಗಳನ್ನು ಅರಿತುಕೊಂಡರೆ ವಾಚಕರ ಅಧ್ಯಯನಕ್ಕೆ ಹೆಚ್ಚಿನ ಅರ್ಥ ಸಿಕ್ಕೀತೆಂಬುದು ನನ್ನ ನಿವೇದನೆ.

**–ಡಾ. ಎ. ಟಿ. ಪಾಟೀಲ**
ಕುಟುಂಬ ವೈದ್ಯರು
ಪಿ.ಜೆ. ಬಡಾವಣೆ
ದಾವಣಗೆರೆ – 577 002

# ಪರಿವಿಡಿ


- ಒಂದು ದಿನ ಒಳಕೊಂಡಿತ್ತು ನೋಡಾ iii
- ಕೃತಜ್ಞತೆಗಳು ix
- ಲೇಖಕರ ಪರಿಚಯ xi
- ನಿವೇದನೆ xiii

ಭಾಗ – ಒಂದು

1. ಹವ್ಯಾಸಗಳ ರಾಜಾ 3
2. ಕುಂದಲ್ಯಾ ಹೇಳಿದ ಕಥೆ 6
3. ಅಂಚೆ ಚೀಟಿಯ ಉದಯ 9
4. ಡಾಕಾವರನ ಡಾಕ್‌ಘರ್ 11
5. ಮಾರಿಷಸ್ಸಿನ ಪೋಸ್ಟ್ ಆಫೀಸ್ 13
6. ಅಂದಗೆಟ್ಟ ಅಂಚೆಚೀಟಿಯ ಅದ್ಭುತ ಕತೆ 15

ಭಾಗ – ಎರಡು

7. ಅಂಚೆ ಚೀಟಿಗಳಲ್ಲಿ ಆರೋಗ್ಯ 21
8. ವಿಶ್ವ ಆರೋಗ್ಯ ದಿನ : ಏಪ್ರಿಲ್ : 7 22
9. ಕುಟುಂಬ ಯೋಜನೆ : (Family Planning) 24
10. "ಸ್ವಯಂಪ್ರೇರಿತ ರಕ್ತದಾನ ದಿನಾಚರಣೆ" ಅಕ್ಟೋಬರ್ – 1 26
11. ಅಂಗವಿಕಲರ ಅಂತರರಾಷ್ಟ್ರೀಯ ವರ್ಷ : 1981 28
12. ಕ್ಷಯ ರೋಗಾಣುವಿನ ಆವಿಷ್ಕಾರದ 100ನೇ ವರ್ಷ : 1982 30
13. ವೈದ್ಯಕೀಯ ಮಹಾವಿದ್ಯಾಲಯ, ಕಲ್ಕತ್ತಾ : 150 ವರ್ಷಗಳು 32
14. ಮೆಡಿಕಲ್ ಕಾಲೇಜು : ಮದ್ರಾಸ್ – 150 ವರ್ಷಗಳು 35

15. ಸೇಂಟ್ ಸ್ಟೀಫನ್ಸ್ ಆಸ್ಪತ್ರೆ, ದೆಹಲಿ ಶತಮಾನೋತ್ಸವ : 1985 37
16. ಸೇಂಟ್ ಮಾರ್ಥಾಸ್ ಹಾಸ್ಪಿಟಲ್ : 100 ವರ್ಷಗಳ ಅವಿರತ ಸೇವೆ 39
17. ನೇತ್ರದಾನ ಮತ್ತು ದೃಷ್ಟಿಹೀನರ ಸೇವೆಯ 100 ವರ್ಷಗಳು 42
18. ಡಾ. ಡಬ್ಲ್ಯು.ಎಂ. ಹಾಫ್‌ಕಿನ್ (1860–1930) 45
19. ಭಾರತೀಯ ರೆಡ್‌ಕ್ರಾಸ್ ಸಂಸ್ಥೆ : 50 ವರ್ಷಗಳು 47
20. ಹೆಲನ್ ಕೆಲರ್ : (1880–1968) : ಜನ್ಮಶತಾಬ್ದಿ ವರ್ಷ 49
21. ಮದರ್ ಥೆರೆಸಾ (1910–1997) 52
22. ಪರಿಸರ ಸಂರಕ್ಷಣೆ : Environmental Conservation 54
23. ವಿಶ್ವ ಆಹಾರ ದಿನ : World Food day 56
24. ಚಾರ್ಲಸ್ ಡಾರ್ವಿನ್ : (1809–1882) 58
25. 12ನೆಯ ಅಂತರರಾಷ್ಟ್ರೀಯ ಕುಷ್ಠರೋಗ ಸಮ್ಮೇಳನ : ದೆಹಲಿ 60
26. ಯುನಿಸೆಫ್ (Unicef) ದ 50ನೆಯ ವಾರ್ಷಿಕೋತ್ಸವ : 1986 63
27. ಮಾರಕ ಔಷಧಿಗಳಿಂದ ದೂರವಿರಿ (Beware of Drugs) 65

**ಭಾಗ – ಮೂರು**

28. ಅಂಚೆ ಲೋಕದ ವಿಸ್ಮಯಗಳು 71

## ಭಾಗ : ಒಂದು

# ಬಾಲಂಗೋಚಿ

# ಹವ್ಯಾಸಗಳ ರಾಜಾ



ಅಂಚೆ ಚೀಟಿಗಳ ಸಂಗ್ರಹಣೆ ಒಂದು ಉತ್ತಮ ಹವ್ಯಾಸವೆಂದು ಎಲ್ಲರಿಗೂ ತಿಳಿದಿರುವ ವಿಷಯವೇ ಹೌದು. ಆದರೆ ಈ ಹವ್ಯಾಸಕ್ಕೆ ಹವ್ಯಾಸಗಳ ರಾಜ (King of Hobbies) ನೆಂಬ ಬಿರುದಿದೆ ಎಂಬುದನ್ನು ತಿಳಿದಾಗ ಯಾರಿಗಾದರೂ ಆಶ್ಚರ್ಯವಾಗುವುದು ಸ್ವಾಭಾವಿಕ.

ಅಂಚೆ ಚೀಟಿ ಸಂಗ್ರಹದ ಹವ್ಯಾಸಕ್ಕೆ ವಯಸ್ಸಿನ ಸೀಮಿತತೆಯಿಲ್ಲ. ಮಕ್ಕಳೂ ಮುದುಕರೂ ಸಹ ಈ ಹವ್ಯಾಸವನ್ನು ರೂಪಿಸಿಕೊಳ್ಳಬಹುದು. ಈ ಹವ್ಯಾಸಕ್ಕೆ ಹೆಚ್ಚು ಹಣ ಬೇಕಾಗಿಲ್ಲ. ಫೋಟೋಗ್ರಾಫಿಯಂತಹ ದುಬಾರಿ ಹವ್ಯಾಸ ಇದಲ್ಲ. ಹೀಗಾಗಿ ಬಡವರೂ ಶ್ರೀಮಂತರೂ ಸಹ ಈ ಹವ್ಯಾಸದಿಂದ ಸಾಕಷ್ಟು ನೆಮ್ಮದಿ ಪಡೆದಿದ್ದಾರೆ.

ಈ ಹವ್ಯಾಸಕ್ಕೆ ಹೆಚ್ಚಿನ ಜ್ಞಾನವಾಗಲಿ ತರಬೇತಿಯಾಗಲಿ ಬೇಕಿಲ್ಲ. ಅಂಚೆ ಚೀಟಿ ಸಂಗ್ರಹಕಾರರಿಗೆ ರಾಜ್ಯದ, ರಾಷ್ಟ್ರದ ಹಾಗೂ ಅಂತರ್‌ರಾಷ್ಟ್ರೀಯ ಸ್ನೇಹಿತರನ್ನು ಸಂಪಾದಿಸುವ ಸೌಭಾಗ್ಯ ಮತ್ತು ಸದವಕಾಶಗಳಿಗೆ ಹಾದಿ ಇದೆ. ಅಂಚೆ ಚೀಟಿಯ ಸಂಗ್ರಹದ ಹವ್ಯಾಸದಿಂದಲೇ ಪ್ರಸಿದ್ಧರಾಗಿ ಪ್ರಾಶಸ್ತ್ಯ ಪಡೆದವರು ಉಂಟು. ಜೀವನದ ಜಂಜಾಟವನ್ನು ಮರೆತು ಮನಸ್ಸಿಗೆ ಮುದ ಪಡೆದವರು ಉಂಟು. ಅಪಾರ ಜ್ಞಾನ ಸಂಪಾದಿಸಿದವರು ಉಂಟು.

ವಿಶ್ವದ ವೈವಿಧ್ಯತೆಯನ್ನು, ಆಗುಹೋಗುಗಳನ್ನು, ಕತೆ ಸಂಸ್ಕೃತಿಗಳನ್ನು, ಧಾರ್ಮಿಕ, ಶೈಕ್ಷಣಿಕ, ವೈಜ್ಞಾನಿಕ, ಆರ್ಥಿಕ, ಐತಿಹಾಸಿಕ, ಚಾರಿತ್ರಿಕ ವಿಷಯಗಳನ್ನು ದಾಖಲಿಸಿ ಸಂರಕ್ಷಿಸಿ ಇಡುವ ಅಂಚೆಚೀಟಿ ಸಂಗ್ರಹಕಾರ ನಾಡಿನ ಪರಂಪರೆಯ ರಕ್ಷಕ ಮತ್ತು ರಾಯಭಾರಿಗಳೆಂದರೆ ಉತ್ಪ್ರೇಕ್ಷೆಯ ಮಾತಲ್ಲ.

ಅಂಚೆ ಚೀಟಿಯ ಸಂಗ್ರಹಣೆಯ ಹವ್ಯಾಸ ಕೇವಲ ಒಂದು ಹವ್ಯಾಸವಷ್ಟೇ ಅಲ್ಲ. ಇದರಿಂದ ಮನರಂಜನೆ ಜ್ಞಾನಾಭಿವೃದ್ಧಿ, ಶಿಕ್ಷಣ, ಬಂಧುತ್ವ, ಸದ್ಭಾವನೆ, ಶಾಂತಿ ಸೌಹಾರ್ದತೆಯಂತಹ ಅನೇಕಾನೇಕ ಉಪಯುಕ್ತತೆಗಳು ಲಭಿಸುತ್ತವೆ. ಕೆಲ ಅಂಚೆ ಚೀಟಿ ಸಂಗ್ರಹಕಾರರು ಜಾಣತನದಿಂದ ರೂಢಿಸಿಕೊಂಡ ಈ ಹವ್ಯಾಸದಿಂದ ಕೋಟಿ ಕೋಟಿ ಗಳಿಸಿರುವುದು ಉಂಟು.


ಅಂಚೆ ಚೀಟಿ ಸಂಗ್ರಹದ ಹವ್ಯಾಸವು ಸಂಗ್ರಹಕಾರರ ನೋವನ್ನು ನಗುವಾಗಿ ಮಾರ್ಪಡಿಸಿದ ಅನೇಕಾನೇಕ ಉದಾಹರಣೆಗಳುಂಟು. ಪಾರ್ಶ್ವವಾಯು ಪೀಡಿತರಾಗಿ ಅಪಾರ ನೋವನ್ನು, ಸೀಮಾ ಬಂಧನವನ್ನು ಅನುಭವಿಸುತ್ತಿದ್ದ ಅಮೇರಿಕದ ಅಧ್ಯಕ್ಷರಾದ ಶ್ರೀ ಫ್ರಾಂಕಲಿನ್ ರೂಜುವೆಲ್ಟರ (1882–1945) "ಅಂಚೆ ಚೀಟಿ ಹವ್ಯಾಸವು ತಮ್ಮ ಜೀವನದ ಚಿಂತೆಗಳನ್ನೆಲ್ಲ ಇಲ್ಲವಾಗಿಸಿದೆ. ನನ್ನ ಬದುಕಿನಲ್ಲಿ ನಿತ್ಯ ಚೈತನ್ಯವನ್ನು ತುಂಬಿದೆಯಲ್ಲದೆ, ಈ ಹವ್ಯಾಸದಿಂದಾಗಿ ನಾನು ಚೈತನ್ಯದ ಚಿಲುಮೆಯಾಗಿ ಬದುಕಲು ಸಾಧ್ಯವಾಯಿತು" ಎಂದು ತಮ್ಮ ಆತ್ಮಕತೆಯಲ್ಲಿ ಹೆಮ್ಮೆಯಿಂದ ಹೇಳಿಕೊಂಡಿದ್ದಾರೆ.

ಅಂಚೆ ಚೀಟಿ ಸಂಗ್ರಹಣೆಗೆ ಅಪೂರ್ವ ಮತ್ತು ರೋಚಕವಾದ ಇತಿಹಾಸವಿದೆ. ಈ ಹವ್ಯಾಸಕ್ಕೆ 'ಫಿಲ್ಯಾಟೆಲಿ' (Philately) ಎಂಬ ಹೆಸರಿದೆ. ಗ್ರೀಕ್ ಭಾಷೆಯ ಫಿಲೋ (ಆಸಕ್ತಿ ಅಥವಾ ಪ್ರೇಮ) ಮತ್ತು ಅಟೆಲಿ (ಕರ ವಿನಾಯತಿ) ಎಂಬ ಪದಗಳಿಂದ 'ಫಿಲ್ಯಾಟೆಲಿ' ರೂಪಗೊಂಡಿದೆ.

ಸ್ಟಾಂಪು ಸಂಗ್ರಹಣೆ ಈಗ ಜಾಗತಿಕ ಹವ್ಯಾಸವಾಗಿ ಬಿಟ್ಟಿದೆ. ಆದರೆ 19ನೆಯ ಶತಮಾನದ ಮಧ್ಯದಲ್ಲಿ ಲಂಡನ್ನಿನ ಯುವತಿಯೋರ್ವಳು ತನ್ನ ಕೋಣೆಯನ್ನು 16,000 ಸ್ಟಾಂಪುಗಳಿಂದ ಅಲಂಕೃತಗೊಳಿಸಿಕೊಂಡಿದ್ದಳು. ಅಷ್ಟೇ ಅಲ್ಲ 1841ರಲ್ಲಿ ಲಂಡನ್ನಿನ 'ಟೈಮ್ಸ್' ಪತ್ರಿಕೆಯ ಮೂಲಕ ವಾಚಕರು ಬಳಸಿದ ಅಂಚೆ ಚೀಟಿಗಳನ್ನು ತನಗೆ ದಾನ ಮಾಡಬೇಕೆಂದು ಕೋರಿ ಜಾಹಿರಾತು ನೀಡಿದ್ದಳು. ಅಂಚೆ ಚೀಟಿ ಸಂಗ್ರಹಕಾರರ

ಜಾಡನ್ನು ಹುಡುಕಿ ಹೊರಟಾಗ ಈ ಯುವತಿಯೇ ಅಂಚೆ ಚೀಟಿ ಸಂಗ್ರಹಿಸುವ ಗೀಳನ್ನು ಅಂಟಿಸಿಕೊಂಡಿದ್ದ ಪ್ರಥಮ ಫಿಲ್ಯಾಟೆಲಿಸ್ಟ (Philatelist) ಆಗಿದ್ದಳೆಂದು ತಿಳಿದು ಬರುತ್ತದೆ. ಲಂಡನ್ನಿನ ಪ್ರಖ್ಯಾತ ಪತ್ರಿಕೆ 'ಪಂಚ್' (Punch) ಅಂಚೆ ಚೀಟಿ ಹವ್ಯಾಸ ಜನತೆಯಲ್ಲಿ ಹೊಸದಾಗಿ ಹುಟ್ಟಿರುವ ಅತ್ಯುತ್ಸಾಹದ ಗೀಳು (MAINA) ಎಂದು 1842ರಲ್ಲಿಯೇ ಬಣ್ಣಿಸಿದೆ.

# ಕುಂದಲ್ಯಾ ಹೇಳಿದ ಕಥೆ




ಸಂದೇಶಗಳನ್ನು ಸಾಗಿಸಲು ಪಳಗಿಸಿದ ಪಾರಿವಾಳಗಳನ್ನು, ಗಿಳಿಗಳನ್ನು ಬಳಸಲಾಗುತ್ತಿದ್ದ ವಿಷಯ ನಿಮಗೆ ತಿಳಿದಿರಬಹುದು. ಆದರೆ ಹಳ್ಳಿ ನಾಯಿಗಳನ್ನು ಈ ಕಿತಿಮಿಗಾಗಿ ಬಳಸಿಕೊಳ್ಳುತ್ತಿದ್ದರೆಂದರೆ ನಂಬಿಕೆಯೇ ಹುಟ್ಟದು. ನಮ್ಮ ಕುಂದಲ್ಯಾ ಹೇಳುವವರೆಗೂ ನನಗೂ ಸಹ ಈ ವಿಷಯ ತಿಳಿದಿರಲಿಲ್ಲ.

ಕುಂದಲ್ಯಾ ನಮ್ಮೂರಿನ ಯಜಮಾನ ಮನುಷ್ಯ. ಅವನಿಗೆ ಆ ಹೆಸರು ಹೇಗೇ ಬಂತೆಂದು ಯಾರೂ ಗೊತ್ತಿದ್ದಿಲ್ಲ. ಸಾಕ್ಷಾತ್ ಕುಂದಲ್ಯಾನಿಗೂ ಈ ಬಗ್ಗೆ ಏನೇನೂ ತಿಳಿಯದು. ಆದರೆ ಅಂಚೆ ಚೀಟಿಯ ಗತ ಇತಿಹಾಸವನ್ನು ಹುಡುಕುತ್ತಾ ಮತ್ತು ಅವಲೋಕಿಸುತ್ತ ಹೋದಾಗ ಕುಂದಲ್ಯಾನಂತವರ ಮಾತುಗಳಿಗೆ ಮಾನ್ಯತೆ ಮತ್ತು ಪ್ರಾಧಾನ್ಯತೆಗಳನ್ನು ನೀಡಲೇಬೇಕಾಗುತ್ತದೆ. ಇಂಥ ಅದೆಷ್ಟು ಕೌತುಕಮಯ ಘಟನೆಗಳು ದಾಖಲೆಯ ಪರಿಧಿಗೆ ಬರದೇ ಕಣ್ಮರೆಯಾಗಿವೆಯೋ ಎಂದು ಯೋಚಿಸಿದಾಗ ಬೇಸರವಾಗುತ್ತದೆ. ಕುಂದಲ್ಯಾಜ್ಜ ಪ್ರತಿದಿನ ತಪ್ಪದೇ ನಮ್ಮ ಶಾಲೆಯ ಕಟ್ಟೆಯ ಮೇಲೆ ಕೂರುತ್ತಿದ್ದ. ಹತ್ತಾರು ಮೈಲಿ ಸುತ್ತಮುತ್ತಲಿನ ಹಳ್ಳಿಗಳಿಂದ ಹುಡುಗರೆಲ್ಲಾ ಈ ವಂಟಮುರಿ ಶಾಲೆಗೆ ಬರಬೇಕಿತ್ತು. ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲೂಕಿನ ಹಲವು ಹತ್ತಾರು

ಹಳ್ಳಿಗಳ ಪೈಕಿ 'ವಂಟಮುರಿ' ಒಂದು. ನೈಸರ್ಗಿಕವಾಗಿ ಸುಂದರವಾದ ಹಳ್ಳಿ. ಮೇಲಾಗಿ ದೇಶಗತಿ ಊರು. ಹೀಗಾಗಿ ಪ್ರಾಥಮಿಕ ಶಿಕ್ಷಣದ ಎಲ್ಲ ಅನುಕೂಲಗಳು ವಂಟಮುರಿಯ ಶಾಲೆಯಲ್ಲಿ ಮೇಳೈಸಿಕೊಂಡಿದ್ದವು.

ಒಂದು ದಿನ ನಮ್ಮ ತಂದೆಯವರು ಅಂಚೆಕಾರ್ಡನ್ನು ಶಾಲೆಯ ಬಳಿಯಿರುವ ಕೆಂಪು ಡಬ್ಬಿಗೆ ಹಾಕಿ ಬರಲು ಹೇಳಿದ್ದರು. ನನ್ನ ಜೇಬಿನಲ್ಲಿದ್ದ ಅಂಚೆಯ ಕಾರ್ಡನ್ನು ನೋಡಿದ ಕುಂದಲ್ಯಾಜ್ಜ – "ನೀವೇಲ್ಲಾ ಈಗ ಒಂದು ಕಾರ್ಡು ಬರೆದು ಹಾಕಿಬಿಟ್ರ ಮುಗಿದಂಗಾಯ್ತಪ್ಪಾ. ನಮ್ಮ ಕಾಲ್ದಾಗ ಇಷ್ಟೆಲ್ಲ ಸವಲತ್ತು ಎಲ್ಲಿತ್ತಪ್ಪಾ" ಎಂದು ಹೇಳಿದ. ತಕ್ಷಣ "ಹಂಗಾದ್ರೆ ನಿಮ್ಮ ಜಮಾನದಾಗ ನೀವು ಹುಟ್ಟಿದ್ದು, ಸತ್ತಿದ್ದು, ಮದುವೆಯಾದದ್ದು ಇಂತಹ ಸುದ್ದಿಗಳನ್ನು ಬೀಗರಿಗೆ ಹ್ಯಾಂಗ್ ರವಾನಿ ಮಾಡತಿದ್ರಿ"–ಎಂದು ಕುಂದಲ್ಯಾಜ್ಜನನ್ನು ಕುತೂಹಲದಿಂದ ಪ್ರಶ್ನಿಸಿದೆ.


ಆಗ ಅಜ್ಜ ಹೇಳಿದ ಹಳ್ಳಿನಾಯಿ ಪ್ರಸಂಗ ನನ್ನ ನೆನಪಿನಾಳದಲ್ಲಿ ಹುದುಗಿಬಿಟ್ಟಿದೆ. ಇಂತಹ ಘಟನೆಗಳಿಗಾಗಿ ನನ್ನಲ್ಲಿರುವ ಅಂಚೆ ಇತಿಹಾಸದ ಪುಸ್ತಕಗಳನ್ನೆಲ್ಲಾ ತಡಕಾಡಿ ನೋಡಿದೆ. ಹವ್ಯಾಸಿ ಅಂಚೆ ಚೀಟಿ ಸಂಗ್ರಹಕಾರರನ್ನು ಕೇಳಿದೆ. ಎಲ್ಲಿಯೂ ಇಂತಹ ವಿಚಿತ್ರ ಸಂಗತಿಯ ಬಗ್ಗೆ ಸುಳಿವು ಸಿಗಲಿಲ್ಲ. ಹೀಗೆ ಅದೆಷ್ಟೋ ಸಂಗತಿಗಳು ಕಾಲಗರ್ಭದಲ್ಲಿ ಹುದುಗಿ ಹೋಗಿವೆಯೋ ಏನೋ. ಇಂತಹ ಸಂಗತಿಗಳು ವಾಚಕರ ಕುತೂಹಲಕ್ಕೆ ಮೇವಾಗಬಹುದೆಂಬ ಉದ್ದೇಶದಿಂದ ಹಾಗೂ ನನಗೆ ದೊರೆತ ವಿಷಯ ನಶಿಸಿಹೋಗದಂತೆ ದಾಖಲಿಸಲು ಈ ಪ್ರಸಂಗವನ್ನು ಇಲ್ಲಿ ಉಲ್ಲೇಖಿಸಿದ್ದೇನೆ.

ಕುಂದಲ್ಯಾ ಸಣ್ಣವನಿದ್ದಾಗ, ಅಂದರೆ 19ನೆಯ ಶತಮಾನದ ಅಂತ್ಯದಲ್ಲಿ ಬೆಳಗಾವಿ ಜಿಲ್ಲೆಯ ಕೆಲ ಹಳ್ಳಿಗಳಲ್ಲಿ ನಾಯಿಗಳನ್ನು ಸಂವಹನ ಸಾಧನಗಳನ್ನಾಗಿ ಬಳಸುವ ಪದ್ಧತಿಯಿತ್ತು. ನಾಯಿಗಳು ಹಳ್ಳಿಯಿಂದ ಹಳ್ಳಿಗೆ ಓಡಾಡಿಕೊಂಡಿದ್ದ ಕಾಲವದು. ಪ್ರತಿಯೊಬ್ಬರಿಗೂ ಪ್ರತಿಯೊಂದು ಹಳ್ಳಿಯ ಪ್ರತಿಯೊಂದು ಮನೆಯ ನಾಯಿಯ ಪರಿಚಯವಿರುತ್ತಿತ್ತು. ಹಳ್ಳಿಯ ಜನರು ತಮ್ಮ ನಾಯಿಗಳಿಂದ ತಮ್ಮ ಊರಿನ ಸಂಗತಿಗಳನ್ನು ಇತರ ಊರುಗಳಿಗೆ ಟಾಮ್ ಟಾಮ್ ಮಾಡುತ್ತಿದ್ದರು. ಅದು ಹೇಗೆಂದರೆ ನಾಯಿಯ ಕೊರಳಿಗೆ ಹಗ್ಗ ಕಟ್ಟಿ ಹಗ್ಗಕ್ಕೆ ಗಂಟುಗಳನ್ನು ಹಾಕಿ ತನ್ಮೂಲಕ ತಮ್ಮ ಊರಿನ ಆಗುಹೋಗುಗಳನ್ನು ಸಾಂಕೇತಿಕವಾಗಿ ಬಹಿರಂಗ ಪಡಿಸುತ್ತಿದ್ದರು. ಅದು ಹೇಗೆಂದರೆ– ನಾಯಿಯ ಕೊರಳಿನ ಕುಣಿಕೆಯಲ್ಲಿ ಒಂದು ಗಂಟಿದ್ದರೆ ಎಲ್ಲರೂ ಸೌಖ್ಯವೆಂದು. ಊರಿನಲ್ಲಿ ಮಳೆ ಬೆಳೆ ಚೆನ್ನಾಗಿದೆಯೆಂದು ಅರ್ಥ. ಎರಡು ಗಂಟುಗಳು : ಮದುವೆ, ಮಗುವಿನ ಜನನ ಮುಂತಾದ ಸಂಭ್ರಮದ ಸಂಗತಿಗಳ ಕುರುಹು. ಮೂರನೆಯ ಗಂಟು ಸಾವು. ಅಸೌಖ್ಯತೆ ಮುಂತಾದವುಗಳನ್ನು ಸೂಚಿಸುತ್ತಿತ್ತು. ಹೀಗೆ ಹಳ್ಳಿನಾಯಿಯನ್ನು ಬಳಸಿ ಬಗೆ ಬಗೆಯ ಸಂಕೇತಗಳನ್ನು ಕಳುಹಿಸುತ್ತಿದ್ದ ನಮ್ಮ ಹಿರಿಯರ ನಡುವಳಿಕೆ ನಮ್ಮನ್ನು ಆಶ್ಚರ್ಯಚಕಿತರನ್ನಾಗಿ ಮಾಡವುದು. ಈ ಸಂಗತಿ ನಮ್ಮ ಇಂದಿನ ಕೋಡಿಂಗ (Coding) ಮತ್ತು ಡಿ ಕೋಡಿಂಗ (De Coding) ವ್ಯವಸ್ಥೆಯು ಹಿಂದಿನಿಂದಲೇ ಇತ್ತೆಂದು ರುಜುವಾತು ಪಡಿಸುತ್ತದೆ.

ಪ್ರಾಚೀನ ಕಾಲದಲ್ಲಿ ಮೂಲನಿವಾಸಿಗಳು, ಆದಿವಾಸಿಗಳು ಸನ್ನೆ ಸಂಕೇತಗಳ ಮೂಲಕ ಸಂಹವನ ನಡೆಯಿಸುತ್ತಿದ್ದರೆಂದು ಕೇವಲ ಓದಿ ತಿಳಿದುಕೊಂಡಿದ್ದ ನನಗೆ ಕುಂದಲ್ಯಾಜ್ಜ ಹೇಳಿದ ಸಂಗತಿಯಿಂದ ಇವೆಲ್ಲವೂ ನಿಜವಿರಬೇಕೆಂದು ಅನಿಸಿದೆ.

ಈ ಸಂದರ್ಭದಲ್ಲಿ ಶ್ರೀ ಕೆ. ಪಿ. ಪೂರ್ಣಚಂದ್ರ ತೇಜಸ್ವಿಯವರ 'ಫ್ಲೈಯಿಂಗ್ ಸಾಸರ್ಸ್ ಭಾಗ – 2ರಲ್ಲಿ ಯುರೋಪ ಮತ್ತು ಅಮೇರಿಕದ ಜನರು ಫ್ಲೈಯಿಂಗ್ ಸಾಸರಿನ ಮೂಲಕ ಅನ್ಯಗ್ರಹ ವಾಸಿಗಳೊಂದಿಗೆ ಸನ್ನೆಗಳ ಮೂಲಕ ಮುಖಾಮುಖಿ ಸಂಭಾಷಿಸಿದ್ದನ್ನು ಸ್ಮರಿಸಿಕೊಳ್ಳಬಹುದು.

# ಅಂಚೆ ಚೀಟಿಯ ಉದಯ




ಅಂಚೆ ಚೀಟಿ ಹುಟ್ಟಿದ ಮತ್ತು ಬೆಳೆದು ಬಂದ ಪೂರ್ವ ಇತಿಹಾಸದ ಹಾದಿಯನ್ನು ಹುಡುಕಿಕೊಂಡು ಹೊರಟಾಗ ಎಣಿಕೆಗೂ ಮೀರಿದ ವಿಸ್ಮಯದ ಸಂಗತಿಗಳ ಜಾಲವೇ ಕಂಡುಬರುವುದು. ಪ್ರತಿಯೊಂದು ಅಂಚೆ ಚೀಟಿಯೂ ತನ್ನ ಕಥೆಯನ್ನು ತನ್ನದೇ ದಾಟಿಯಲ್ಲಿ ಹೇಳುತ್ತದೆ. ಆದರೆ ಕೇಳುಗರಿಗೆ ಇದಕ್ಕೆ ಸ್ಪಂದಿಸುವ ಸಹೃದಯತೆ ಇರಬೇಕಷ್ಟೆ


ಅಂಚೆ ಚೀಟಿ ಈಗ ಸಂವಹನ ಮಾಧ್ಯಮದ ಮೂಲ ಅವಶ್ಯಕತೆಯಾಗಿದೆ. ಸಂವಹನೆ ಮಾನವನ ಹುಟ್ಟಿನಷ್ಟೇ ಪುರಾತನವಾದದ್ದು.

ಮಾನವ ಒಂಟಿಯಲ್ಲ. ಈತ ಸಂಘಜೀವಿ, ಸಂಪರ್ಕಜೀವಿ, ಒಬ್ಬರು ಮತ್ತೊಬ್ಬರೊಡನೆ ಸಂಪರ್ಕಕ್ಕಾಗಿ ತವಕಿಸುತ್ತಿರುವುದು ಮಾನವನ ಹುಟ್ಟುಗುಣ ಮಾನವ-ಮಾನವನ ಸಂಪರ್ಕಗಳು ಅಧಿಕವಾಗುತ್ತಾ ಹೋದಂತೆ ಮಾನವನ ಬದುಕು ಹೆಚ್ಚು ಸಹನೀಯವಾಗಿ ಹೆಚ್ಚು ಸುಧಾರಣೆಯಾಗಿ ಪರಿವರ್ತನೆಗೊಳ್ಳುತ್ತದೆ ಎಂಬುದು ನಿಸ್ಸಂದೇಹ. ಬುದ್ಧಿವಂತನಾದ ಮಾನವನು ತನ್ನ ಮೂಲಭೂತ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು ಹೊಸ ಹೊಸ ಹಾದಿಗಳನ್ನು ಕಂಡುಕೊಳ್ಳಹತ್ತಿದ. ಕಾಲ ಕಳೆದಂತೆ ಮಾನವನು ಬುದ್ಧಿವಂತನಾಗಹತ್ತಿದ. ಜನಸಂಖ್ಯೆ ಹೆಚ್ಚಿತು. ವಿಸ್ತಾರವಾದ ಭೂಮಿಯಲ್ಲಿ ಜನ ಪಸರಿಸುವುದು ಅನಿವಾರ್ಯವಾಯಿತು. ಈ ಬೆಳವಣಿಗೆಗಳಿಗೆ ಅನುಗುಣವಾಗಿ

ಸವಲತ್ತುಗಳನ್ನು ಸೃಷ್ಟಿಸಿಕೊಳ್ಳುವಲ್ಲಿ ಅವನು ಹಿಂದೆ ಬೀಳಲಿಲ್ಲ. ಹೀಗೆ ಮಾನವ ಕಂಡುಕೊಂಡ ಸಂಪರ್ಕ ವ್ಯವಸ್ಥೆಗಳಲ್ಲಿ ಅತ್ಯಂತ ಸರಳ ಸುಲಭ ಹಾಗೂ ಅಗ್ಗದ ಮಾಧ್ಯಮವೇ 'ಅಂಚೆ ವ್ಯವಸ್ಥೆ'. ಅಂಚೆ ವ್ಯವಸ್ಥೆಯೊಂದಿಗೆ ಹುಟ್ಟಿದ ಕೂಸೇ ಅಂಚೆಚೀಟಿ ಈ ಕೂಸುಗಳನ್ನೇ ಸಂಗ್ರಹಿಸುವ ಹವ್ಯಾಸಿಗಳಿಗೆ 'ಅಂಚೆ ಚೀಟಿ ಸಂಗ್ರಹಕಾರ' ಎನ್ನುತ್ತಾರೆ. ಇಂಗ್ಲೀಷಿನಲ್ಲಿ ಇವರಿಗೆ 'ಫಿಲ್ಯಾಟೆಲಿಸ್ಟ' (Philatelist) ಎನ್ನುತ್ತಾರೆ. ಅಂತೂ ಈಗ ವಿಶ್ವದಲ್ಲಿ ಫಿಲ್ಯಾಟೆಲಿಸ್ಟ ಸಂಘಗಳ ಸುಸಜ್ಜಿತ ಜಾಲವೇ ಇದೆ. ಅಂಚೆ ಚೀಟಿಗಳ ಗತ ಚರಿತ್ರೆ ಎಲ್ಲರ ಆಸಕ್ತಿಯನ್ನು ಕೆರಳಿಸಲಾರದಾದರೂ ಕೆಲ ಸಂಗತಿಗಳು ನಿಜಕ್ಕೂ ನಮ್ಮ ಕಣ್ಣನ ತೆರೆಸುವಷ್ಟು ಪ್ರಭಾವಶಾಲಿಯಾಗಿವೆ. ಇಂತಹ ಕೆಲ ಪ್ರಸಂಗಗಳನ್ನು ಮಾತ್ರ ತಿಳಿದುಕೊಂಡರೆ ಸಮಸ್ತ ಅಂಚೆಲೋಕದ ಪರಿಚಯವಾಗದಿದ್ದರೂ ಸ್ವಲ್ಪವಾದರೂ ತಿಳಿದೀತು.

ಅಂಚೆಚೀಟಿ ತಾನು ಒಂದೇ ಹುಟ್ಟಲಿಲ್ಲ. ತನ್ನೊಂದಿಗೆ ಅನೇಕ ಸಂಗ್ರಹಕಾರರನ್ನು ಸೃಷ್ಟಿಸಿತು. ಸಂಗ್ರಹಕಾರರ ಜಾಲವನ್ನೇ ನೇಯ್ದಿತು. ಇದರಿಂದಾಗಿ ಅನೇಕ ರಾಷ್ಟ್ರೀಯ, ಅಂತರ್‌ರಾಷ್ಟ್ರೀಯ ಸಂಘ ಸಂಸ್ಥೆಗಳು ಜನ್ಮ ತಳೆದವು. ಹೀಗಾಗಿ ಅಂಚೆ ಚೀಟಿ ಸಂಗ್ರಹದ ಹವ್ಯಾಸಕ್ಕೆ 'ಹವ್ಯಾಸಗಳ ರಾಜ' (King of Hobbies) ನೆಂಬ ಬಿರುದಿಗೆ ಭದ್ರವಾದ ಬುನಾದಿ ಇದೆ.

# ಡಾಕಾವರನ ಡಾಕ್‌ಘರ್





ನಾವು ಈಗ ಅಂಚೆಯೊಂದಿಗೆ ಅವಿನಾಭಾವ ಸಂಬಂಧವಿರಿಸಿಕೊಂಡಿದ್ದೇವೆ. ಸುಮಾರು 300 ವರ್ಷಗಳಿಗೂ ಹಿಂದೆ ಅಂದರೆ 1680ರಲ್ಲಿ ಡಾಕಾವರ ಎಂಬುವವನು ಸುವ್ಯವಸ್ಥಿತ ಅಂಚೆ ವ್ಯವಸ್ಥೆಯನ್ನು ಆರಂಭಿಸಿದನೆಂದು ಇತಿಹಾಸ ತಿಳಿಸುತ್ತದೆ. ಡಾಕಾವರ ಲಂಡನ್ನಿನ ಒಬ್ಬ ವ್ಯಾಪಾರಿ. ಈತ ಸರ್ಕಾರಿ ಅಂಚೆ ವ್ಯವಸ್ಥೆಯ ಪ್ರತಿಸ್ಪರ್ಧಿಯಾಗಿ ಸಾರ್ವಜನಿಕರಿಗೆ ಸುಲಭ ದರದಲ್ಲಿ ಹೆಚ್ಚಿನ ಅನುಕೂಲತೆಗಳನ್ನು ಕಲ್ಪಿಸುವ ಸದುದ್ದೇಶದಿಂದ ತನ್ನದೇ ಆದ ಅಂಚೆ ವ್ಯವಸ್ಥೆಯನ್ನು ಆರಂಭಿಸಿದನು. ಇದಕ್ಕೆ ಅವನಿಗೆ ಫ್ರಾನ್ಸಿನ ಲೂಯಿ ದೊರೆಯ ಪ್ರೋತ್ಸಾಹ ಹಾಗೂ ಮಾರ್ಗದರ್ಶನಗಳ ಬೆಂಬಲವೂ ಇತ್ತು. ಹೀಗಾಗಿ ಡಾಕಾವರನ ಅಂಚೆ ವ್ಯವಸ್ಥೆ ಲಂಡನಿನಾದ್ಯಂತ ಬೇಗನೆ ಜನಪ್ರಿಯವಾಯಿತು. ಈ ವ್ಯವಸ್ಥೆಯನ್ನು ಇಂದಿನ ಕೊರಿಯರ ವ್ಯವಸೆಗೆ ಹೋಲಿಸಬಹುದು.

ಡಾಕಾವರನು ಹುಟ್ಟು ಹಾಕಿದ ಅಚ್ಚುಗಟ್ಟಾದ ಅಂಚೆ ವ್ಯವಸ್ಥೆಯು "ಪೆನ್ನಿ ಪೋಸ್ಟ್" (Penni Post) ಎಂದು ಹೆಸರುವಾಸಿಯಾಯಿತು. ಏಕೆಂದರೆ ಈ ವ್ಯವಸ್ಥೆಯಲ್ಲಿ ಪ್ರತಿಯೊಂದು ಪತ್ರಕ್ಕೂ ಹಾಗೂ 1 ಪೌಂಡ್ ತೂಕದವರೆಗಿನ ಪಾರ್ಸಲ್ಲಿಗೂ 1 ಪೆನ್ನಿ ಶುಲ್ಕವನ್ನು ನಿಗದಿಮಾಡಲಾಗಿತ್ತು. ಇದಕ್ಕೂ ಹಿಂದಿನ ಅಂಚೆ ವ್ಯವಸ್ಥೆಗಳಲ್ಲಿ ಪತ್ರವನ್ನು ಸ್ವೀಕರಿಸಿದವರೇ ಅಂಚೆ ಶುಲ್ಕವನ್ನು ಸಂದಾಯ ಮಾಡಬೇಕಾಗುತ್ತಿತ್ತು. ಈ ವ್ಯವಸ್ಥೆಯಲ್ಲಿ

ಸುಧಾರಣೆ ತರಲು ಅಂಚೆ ಶುಲ್ಕವನ್ನು ಪತ್ರ ಕಳುಹಿಸುವವರೇ ಮುಂಗಡವಾಗಿ ಪಾವತಿಸುವ ನಿಯಮವನ್ನು ಪ್ರಥಮವಾಗಿ ಜಾರಿಗೆ ತಂದವನೇ ಡಾಕಾವರ. ಈ ವ್ಯವಸ್ಥೆ ಇಂದಿಗೂ ಮುಂದುವರೆದಿದೆ.

ಹಾಗೆ ನೋಡಿದರೆ ಡಾಕಾವರನು ಡಾಕ್‌ಫರ್ ಆರಂಭಿಸಿದ ಸಮಯದಲ್ಲಿಯೂ ಅಂಚೆಚೀಟಿಗಳೇ ಇರಲಿಲ್ಲ. ಇದರ ಬದಲಿಗೆ ತ್ರಿಕೋನಾಕಾರದ ಎಲೆಯಾಕಾರದ ಮುದ್ರೆಗಳನ್ನು ಪತ್ರದ ಮೇಲೆ ಹಾಕಲಾಗುತ್ತಿತ್ತು. ಹಣ ಸ್ವೀಕರಿಸಿದ ಕುರುಹು ಆಗಿದ್ದ ಈ ಸೀಲುಗಳಲ್ಲಿ ಪೋಸ್ಟ್ ಮಾಡಿದ ದಿನಾಂಕವೂ ಮತ್ತು ಸಮಯವೂ ಇರುತ್ತಿತ್ತು. ಅನಿವಾರ್ಯ ಕಾರಣಗಳಿಂದಾಗಿ 1682ರಲ್ಲಿ ಡಾಕಾವರನ ಅಂಚೆ ವ್ಯವಸ್ಥೆ ಅಂತ್ಯಗೊಂಡಿತು. ಡಾಕಾವರನು ರೂಪಿಸಿದ ನಿಯಮಗಳೆಲ್ಲವನ್ನೂ ತನ್ನದಾಗಿಸಿಕೊಂಡ ಸರ್ಕಾರಿ ಅಂಚೆ ವ್ಯವಸ್ಥೆ ಸಾಕಷ್ಟು ಸುಧಾರಣೆಗೊಂಡಿತು. ಹೀಗಾಗಿ 'ಡಾಕಾವರ'ನನ್ನು ಆಧುನಿಕ ಅಂಚೆ ವ್ಯವಸ್ಥೆಯ 'ಹರಿಕಾರ'ನೆಂದು ಧಾರಾಳವಾಗಿ ಹೇಳಬಹುದು.

# ಮಾರಿಷಸ್ಸಿನ ಪೋಸ್ಟ್ ಆಫೀಸ್




ಮುದ್ರಣ ದೋಷಗಳಿಂದಾಗಿ ಖ್ಯಾತಿ ಪಡೆದ ಅಂಚೆ ಚೀಟಿಗಳಲ್ಲಿ 'ಪೋಸ್ಟ್ ಆಫೀಸ್ : ಮಾರಿಷಸ್' ಅಂಚೆ ಚೀಟಿಯು ಪ್ರಮುಖವಾದುದು. ಮಾರಿಷಸ್ ಹಿಂದು ಮಹಾಸಾಗರದಲ್ಲಿನ ಒಂದು ಸಣ್ಣ ದ್ವೀಪ, ಆದರೂ ಅಂಚೆಚೀಟಿಗಳನ್ನು ಬಿಡುಗಡೆ ಮಾಡಿದ ಐದನೆಯ ರಾಷ್ಟ್ರವೆಂಬ ಹಿರಿಮೆ ಹೊತ್ತಿದೆ. 'ಪೋಸ್ಟ್ ಆಫೀಸ್ : ಮಾರಿಷಸ್'ಯೆಂದೇ ವಿಶ್ವವಿಖ್ಯಾತವಾಗಿರುವ ಅಂಚೆ ಚೀಟಿಯ ಕಥೆಯು ರೋಚಕವಾಗಿದೆ.

ಮಾರಿಷಸ್ಸಿನ ಅಂದಿನ ಗವರ್ನರ ಪತ್ನಿಯಾದ ಲೇಡಿಗೋಮ್ 1847ರಲ್ಲಿ ಒಂದು ಬೃಹತ್ ಪ್ರಮಾಣದ ವೇಷಭೂಷಣ (Fancy Dress) ಗಳ ಸ್ಪರ್ಧೆ ನಡೆಸಲು ಯೋಜಿಸಿದ್ದಳು. ಈ ಸ್ಪರ್ಧೆಗಾಗಿ ಆಮಂತ್ರಣ ಪತ್ರಗಳು ಸಿದ್ಧವಾದವು. ಆಮಂತ್ರಣ ಪತ್ರಗಳ ಮೇಲೆ ಹೊಸ ವಿನೂತನ ಅಂಚೆ ಚೀಟಿಗಳನ್ನು ಅಂಟಿಸಬೇಕೆಂಬುದು ಲೇಡಿಗೋಮಳ ಇನ್ನಿಲ್ಲದ ಬಯಕೆಯಾಗಿತ್ತು. ಅದಕ್ಕಾಗಿ ಪತಿ ಗವ್ರನರರ ಮೊರೆ ಹೋದಳು. ಪತ್ನಿಯ ಬಯಕೆ ಪೂರೈಸಲು ಗವ್ರನರ್ ಸಾಹೇಬರು ತರಾತುರಿಯಿಂದ ಹೊಸ ಅಂಚೆ ಚೀಟಿ ತರುವ ಆದೇಶವನ್ನು ಹೊರಡಿಸಿಯೇ ಬಿಟ್ಟರು. ಕಾಲಾವಕಾಶ ಕಡಿಮೆಯಿದ್ದುದರಿಂದ ಅವಸರ ಅವಸರವಾಗಿ ಮುದ್ರಣ ಕಾರ್ಯ ನಡೆಯಿತು. ಆದಾಗ್ಯೂ ಅನುಭವಿ ವಿನ್ಯಾಸಗಾರರನ್ನೇ ಪಡಿಯಚ್ಚು ತಯಾರಿಸಲು ನೇಮಿಸಲಾಗಿತ್ತು. ಆತನು

ಗವರ್ನರರ ಆಜ್ಞೆಯನ್ವಯ ಹೆಚ್ಚಿನ ಮುತುವರ್ಜಿ ವಹಿಸಿ ಪಡಿಯಚ್ಚು ತಯಾರಿಸಿದನಾದರೂ 'ಪೋಸ್ಟಪೇಡ್' (Post Paid) ಎಂದಿರಬೇಕಾದ ಜಾಗದಲ್ಲಿ 'ಪೋಸ್ಟ ಆಫೀಸ್' (Post Office) ಯೆಂದು ಕೆತ್ತಿಬಿಟ್ಟಿದ್ದನು. ಹೀಗಾಗುವುದಕ್ಕೂ ಒಂದು ಕಥೆಯಿದೆ. ಅದೇನೆಂದರೆ ಆತ ಪೋಸ್ಟಪೇಡ' ಎಂಬ ಶಬ್ದವನ್ನು ಮರೆತೇ ಬಿಟ್ಟಿದ್ದನು. ತನ್ನ ಮರೆವಿಗೆ ಹಿಡಿಶಾಪ ಹಾಕಿಕೊಂಡು ಈ ಪದದ ನೆನಪಿಗಾಗಿ ಯೇಸುವನ್ನು ಮೊರೆಹೋದನು. ಹೀಗಿರುವಾಗ ತಕ್ಷಣ ಅವನಿಗೆ 'ಪೋಸ್ಟ ಆಫೀಸ್' ಎಂಬ ಪದ ಚಕ್ಕನೇ ತಲೆ ಸೇರಿತು. ಹೀಗಾಗಿ ಅವನು ತಯಾರಿಸಿದ ಪಡಿಯಚ್ಚಿನಲ್ಲಿ 'ಪೋಷ್ಟ ಆಫೀಸ' ಎಂಬ ಪದ ಮೂಡಿಬಂತು. ಅಚ್ಚಿನ ಮನೆಯಿಂದ ಹೊರಬಂದ ಅಂಚೆಚೀಟಿಯ ಬಿಡುಗಡೆ ಸಮಾರಂಭವು 1847ರ ಸೆಪ್ಟೆಂಬರ್ 5ರಂದು ವಿಜೃಂಭಣೆಯಿಂದಲೇ ನಡೆಯಿತು. ಯೇಸುವಿನ ದಯದಿಂದಲೋ ಏನೋ ಅಂಚೆ ಚೀಟಿಯಲ್ಲಿ ನುಸುಳಿದ ತಪ್ಪು ಎಂತಹ ಘಟಾನುಘಟಿಗಳ ಗಮನಕ್ಕೂ ಬರಲಿಲ್ಲ. 17 ವರ್ಷಗಳ ನಂತರ ಮೇಡಂ ಬೊಖಾರ್ಟ ಎಂಬವಳು ಈ ತಪ್ಪನ್ನು ಪತ್ತೆ ಮಾಡಿದಳು. ಇಂತಹದೇ ಅಂಚೆ ಚೀಟಿಗಳಿಗಾಗಿ ಅಂಚೆ ಚೀಟಿ ಸಂಗ್ರಹದ ಹವ್ಯಾಸಕಾರರು ಅನವರತ ನಡೆಯಿಸಿದ ಹುಡುಕಾಟದಿಂದ 26 ಅಂಚೆ ಚೀಟಿಗಳು ಬೆಳಕಿಗೆ ಬಂದವು. ಇದ್ದಕ್ಕಿದ್ದಂತೆ ಅದೃಷ್ಟ ಖುಲಾಯಿಸಿದ ಈ ಅಂಚೆ ಚೀಟಿಯ ಬೆಲೆ ದಿನೇ ದಿನೇ ಗಗನಕ್ಕೆ ಏರಹತ್ತಿತು. 1968ರ ಹರಾಜಿನಲ್ಲಿ ಈ ಅಂಚೆಚೀಟಿ 38000 ಡಾಲರುಗಳಿಗೆ ವಿಕ್ರಯವಾಗಿ ವಿಶ್ವವಿಖ್ಯಾತವಾಯಿತು. ಕೇವಲ 1 ಪೆನ್ನಿಯ ಅಂಚೆಚೀಟಿ ಕೋಟಿಗಟ್ಟಲೇ ಬೆಲೆ ಪಡೆದಿರುವುದು ಒಂದು ದಾಖಲೆಯೇ ಹೌದು. ತನ್ನ ವಿಶೇಷತೆಗಾಗಿ ಅಮೂಲ್ಯ ನಿಧಿಯನ್ನೇ ತಂದ ಅಂಚೆ ಚೀಟಿಗಳಲ್ಲಿ 'ಮಾರಿಷಸ್ ಪೋಸ್ಟ್' ಒಂದಾಗಿದೆ. ಇಂತಹ ಅದೆಷ್ಟೋ ಪ್ರಕರಣಗಳು ದಾಖಲಾಗದೇ ಉಳಿದರಲೂಬಹುದು.

# ಅಂದಗೆಟ್ಟ ಅಂಚೆಚೀಟಿಯ ಅದ್ಭುತ ಕತೆ



ಅಂಚೆ ಚೀಟಿಗೂ ಒಂದು ರೋಚಕವಾದ ಕತೆ ಇರುತ್ತದೆ ಎಂದರೆ ಆಶ್ಚರ್ಯವಾಗುತ್ತದೆಯಲ್ಲವೇ ? ಅದರಲ್ಲೂ ಅಂದಗೇಡಿ ಅಂಚೆ ಚೀಟಿಗೆ ಅದ್ಭುತ ಕತೆ ಇರುತ್ತದೆಯೆಂದರೆ ಇನ್ನೂ ವಿಸ್ಮಯವಾಗುತ್ತದೆಯಲ್ಲವೇ ? ನಿಜ. ಇಂಥಾ ಒಂದು ರಂಜನೀಯ ಕಥೆ ತಿಳಿಯಲು ನಾವು ಲಂಡನ್ನಿಗೆ ಪಯಣಿಸೋಣ ಬನ್ನಿ.

ನ್ಯೂಯಾರ್ಕ್ ನಗರದಿಂದ 1965ರ ಜನವರಿ 26ರ ಸಂಜೆ ಹೊರಟ ಮಿರಿಮಿರಿ ಮಿರುಗುವ ಕೆಂಪು ಬಣ್ಣದ ಬೋಯಿಂಗ 707 ವಿಮಾನ ಲಂಡನ್ನಿನಲ್ಲಿ ಭೂಸ್ಪರ್ಶ ಮಾಡುವುದರೊಂದಿಗೆ ಕಥೆ ಆರಂಭವಾಗುತ್ತದೆ. ವಿಮಾನದ ಹಾದಿಯನ್ನೇ ಜಾತಕ

ಪಕ್ಷಿಯಂತೆ ಕಾಯುತ್ತಿದ್ದ ಪತ್ರಕರ್ತರು, ಛಾಯಾಚಿತ್ರಗ್ರಾಹಕರು ಗಣ್ಯ ವ್ಯಕ್ತಿಗಳು ಅವಸರವಸರವಾಗಿ ವಿಮಾನವನ್ನು ಮುತ್ತಿಕೊಂಡರು.

ಏನಿತ್ತು ಆ ವಿಮಾನದಲ್ಲಿ ಅಂಥಾ ಅಮೂಲ್ಯ ವಸ್ತು ಎಂದು ಅಂದಿರಲ್ಲವೇ ?

ಮಿ॥ ಫಿನ್‌ಬೆರ್ ಕೆನ್ನಿ ಎಂಬ ಗಣ್ಯವ್ಯಕ್ತಿ ಕೇವಲ ಒಂದು ಸೆಂಟ್ ಮೌಲ್ಯದ 2 ಲಕ್ಷ ಪೌಂಡಿಗೆ ವಿಮೆ ಮಾಡಿಸಿದ 'ಬ್ರಿಟಿಸ್ ಗಯಾನಾ' ಎಂಬ ಅಪರೂಪದ ಅಂಚೆ ಚೀಟಿ ಹೊತ್ತು ಉದಯರವಿಯಂತೆ ಹೆಮ್ಮೆಯಿಂದ ಬೀಗುತ್ತ ಸಕಲ ರಾಜ ಮರ್ಯಾದೆಗಳೊಂದಿಗೆ ಬಿಗಿ ಬಂದೋಬಸ್ತ್ ವ್ಯವಸ್ಥೆಯ ನಡುವೆ ವಿಮಾನದಿಂದ ಇಳಿದುಬಂದ.

ಲಂಡನ್ನಿನಲ್ಲಿ ಆಗ ಏರ್ಪಡಿಸಲಾಗಿದ್ದ ವಿಶೇಷ ಅಂಚೆ ಚೀಟಿಗಳ ಪ್ರದರ್ಶನಕ್ಕಾಗಿ ಒಂದು ಸೆಂಟಿನ ಅಂಚೆಚೀಟಿಯನ್ನು ವಿಶೇಷ ಮುತುವರ್ಜಿಯಿಂದ ರಾಜ ಮರ್ಯಾದೆಗಳೊಂದಿಗೆ ತರಿಸಲಾಗಿತ್ತು. ಈ ಅಪರೂಪದ ಅಂಚೆಚೀಟಿಯ ಸುರಕ್ಷತಾ ದೃಷ್ಟಿಯಿಂದ ಬಂದೂಕುಧಾರಿಗಳ ತಂಡವೇ ಅಂಚೆಚೀಟಿಯನ್ನು ಹಗಲು-ರಾತ್ರಿಯೆನ್ನದೆ ಅನವರತವಾಗಿ ಕಾಯುತ್ತಿತು. ಪ್ರದರ್ಶನಕ್ಕೆ ಬಂದು ಹೋಗುವ ಪ್ರತಿಯೊಬ್ಬರನ್ನು ತಪಾಸಣೆಗೆ ಗುರಿಪಡಿಸಲಾಗುತ್ತಿತ್ತು. ಮುಂಜಾಗ್ರತೆಯ ಕ್ರಮವಾಗಿ ನೂಕುನುಗ್ಗಲುಗಳನ್ನೂ ಪ್ರದರ್ಶನದ ವೇಳೆಯಲ್ಲಿ ನಿಯಂತ್ರಿಸಲು ವಿಶೇಷ 'ಪಾಸು'ಗಳ ವ್ಯವಸ್ಥೆಯನ್ನು ಸಹ ಮಾಡಲಾಗಿತ್ತು. ಲಂಡನ್ನಿನ ಪತ್ರಿಕೆಗಳಲ್ಲಿ ಸುದ್ದಿ ಮಾಧ್ಯಮಗಳಲ್ಲಿ, ಜನರ ಬಾಯಲ್ಲಿ ಈ ಅಂಚೆ ಚೀಟಿಯದೇ ಅತಿ ಮುಖ್ಯ ವಿಷಯ. ಬಿ.ಬಿ.ಸಿ.ಯೂ ಕೂಡ ಈ ಅಂಚೆ ಚೀಟಿಯ ಬಗ್ಗೆ ಒಂದು ವಿಶೇಷ ಕಾರ್ಯಕ್ರಮವನ್ನು ಬಿತ್ತರಿಸಿತು.

ಅಂದವಿಲ್ಲದ, ಚಂದವಿಲ್ಲದ, ಅಮೀಬದಂತೆ ಅಂಕುಡೊಂಕಾದ ಬಣ್ಣವಿಲ್ಲದ ಅನಾಕರ್ಷಕ ಈ ಅಂಚೆಚೀಟಿಗೆ ಇಂತಹ ವಿಶೇಷತೆ ದೊರೆತ ಸಂಗತಿಯನ್ನು ಬರೆಯುತ್ತಾ ಹೋದರೆ ಬೃಹತ್ ಇತಿಹಾಸವೇ ಸೃಷ್ಟಿಯಾಗುತ್ತದೆ.


ಒಂದು ಶತಮಾನದ ಹಿಂದೆ ಬ್ರಿಟಿಷರ ವಸಾಹತುವಾದ ಗಯಾನಾದಲ್ಲಿ ಅಂಚೆಚೀಟಿಗಳ ದಾಸ್ತಾನು ಮುಗಿದಾಗ ತುರ್ತಾಗಿ ಅಂಚೆ ಚೀಟಿಗಳನ್ನು ಸ್ಥಳೀಯವಾಗಿ ಮುದ್ರಿಸುವ ಏರ್ಪಾಡು ಮಾಡಲಾಗಿತ್ತು. ಅಂಚೆ ಇಲಾಖೆಯ ಹಿರಿಯ ಅಧಿಕಾರಿಯ ಆದೇಶದಂತೆ 4 ಸೆಂಟು ಬೆಲೆಯ ಅಂಚೆ ಚೀಟಿ ನಡುಗಡ್ಡೆ ಮತ್ತು ಹಡಗಿನ ಚಿತ್ರದೊಂದಿಗೆ ಹೊರಬರಬೇಕಾಗಿತ್ತು. ಅಂಚೆಚೀಟಿಯ ಮುದ್ರಣ ತ್ವರಿತವಾಗಿ ಆಗಿದ್ದ ಅವಕಾಶವನ್ನು ಸದುಪಯೋಗಪಡಿಸಿಕೊಂಡ ಮುದ್ರಾರಾಕ್ಷಸನ ಹಾವಳಿಯಿಂದಾಗಿ ಅಂಚೆಚೀಟಿಯ ಮೇಲೆ 4 ಸೆಂಟಿನ ಬದಲು 1 ಸೆಂಟ್ ಆಗಿ ಮುದ್ರಿಸಲ್ಪಟ್ಟಿತು. ಮುದ್ರಣಕ್ಕೆ ಬಳಸಿದ ಕಾಗದದ ಗುಣಮಟ್ಟ ಬಹಳ ಕೆಳಮಟ್ಟದ್ದಾಗಿತ್ತು. ಕಂದು ಬಣ್ಣದ ಕಾಗದದ ಮೇಲೆ ಕಪ್ಪು ವರ್ಣದ ಮುದ್ರಣ. ಯಾರಾದರೂ ನಕಲು ಮಾಡಲು ಹೇಳಿ ಮಾಡಿಸಿದಂತೆ ಅನುಕೂಲವಾಗಿತ್ತು. ಹೀಗಾಗಿ ಈ ಅಂಚೆ ಚೀಟಿಯನ್ನು ಮಾರುವ ಮುನ್ನ ಪೋಸ್ಟಮಾಸ್ಟರ ಅದರ ಮೇಲೆ ಸಹಿ ಮಾಡಿರಬೇಕು ಎಂಬ ಕಾನೂನು ಜಾರಿಗೆ ಬಂತು.

ಹದಿನೇಳು ವರ್ಷಗಳ ನಂತರ ಗಯಾನಾದಲ್ಲಿ ವಾಸಿಸುತ್ತಿದ್ದ ವೆರಗಾನ್ ವಾಘ್ ಎಂಬ ತರುಣನಿಗೆ ಬಂದ ಅಂಚೆ ಪತ್ರದಲ್ಲಿ ಈ ಅಂದಗೇಡಿ ಅಂಚೆ ಚೀಟಿ ಅಂಟಿಕೊಂಡಿತ್ತು. ಏನೋ ಈ ಅಂಚೆಚೀಟಿ ವಿಶೇಷವಾಗಿ ಕಾಣಿಸುತ್ತಿದೆ ಎಂದುಕೊಂಡು ಲಕೋಟೆಯಿಂದ ಅದನ್ನು ಯಾರ್‍ರಾಬಿರ್‍ರಿಯಾಗಿ ಕಿತ್ತು ಮೊದಲೇ ಆಕಾರವಿಲ್ಲದ ಅಂಚೆಚೀಟಿಯ ಆಕಾರವನ್ನು ಮತ್ತಷ್ಟು ವಿರೂಪಗೊಳಿಸಿ ತನ್ನ ಬಳಿ ಇಟ್ಟುಕೊಂಡ. ಕೆಲ ಕಾಲದ ನಂತರ ಇಂಥಾ ಅತೀ ಕುರೂಪಿ ಅಂಚೆ ಚೀಟಿಯನ್ನು ಹೇಗಾದರೂ ಮಾಡಿ ತನ್ನಿಂದ ಸಾಗ ಹಾಕಬೇಕೆಂದುಕೊಂಡು ಮಿ॥ ಎನ್. ಆರ್. ಮ್ಯಾಕ್ ಕಿನ್ನಾನ್ ಎಂಬವನಿಗೆ ತಗಲು ಹಾಕಿ ಆರು ಸಿಲ್ಲಿಂಗ್ ಪಡೆದು ತಲೆ ತೊಳೆದುಕೊಂಡುಬಿಟ್ಟ.

ಈ ಅಂಚೆ ಚೀಟಿಯ ಅದೃಷ್ಟದಲ್ಲಿ ಭದ್ರವಾದ ನೆಲೆ ಇರಲಿಲ್ಲವೆಂದು ಕಾಣುತ್ತದೆ. 5 ವರ್ಷಗಳ ನಂತರ ಲಿವರಪೂಲಿನ ಮಿ॥ ಥಾಮಸ್ ರಿಡ್‌ಫಾಥ್ 120 ಪೌಂಡು ಕೊಟ್ಟು ಈ ಅಂಚೆ ಚೀಟಿಯ ಒಡೆಯನಾದ. ಮರುವರ್ಷ ಫ್ರಾನ್ಸಿನ ಮಿ॥ ಫಿಲಿಪ್ ಲಾ ರಿನೋಟೆರ್ ವಾನ್ ಫೆರಾರಿ 150 ಪೌಂಡು ಕೊಟ್ಟು ಈ ಅಂಚೆ ಚೀಟಿಯನ್ನು ತನ್ನ ಸ್ವಾಧೀನಕ್ಕೆ ತೆಗೆದುಕೊಂಡ. ಹೀಗೆ ಕೈಯಿಂದ ಕೈಗೆ ವಿಲೇವಾರಿಯಾಗುತ್ತಿದ್ದ ಅತ್ಯಂತ ವಿರಳವಾದ ಅಂಚೆಚೀಟಿಯ ಸುದ್ದಿಕಾಳ್ಗಿಚ್ಚಿನಂತೆ ವಿಶ್ವದಾದ್ಯಂತ ಹರಡಿ ಅಂಚೆ ಚೀಟಿ ಸಂಗ್ರಹಕಾರರ ನಿದ್ದೆಗೆಡೆಸಿತು. ಮಿ॥ ಫೆರಾರಿಯ ನಿಧನದ ನಂತರ ಅವನ ಸಂಗ್ರಹದಲ್ಲಿದ್ದ ಅಂಚೆ ಚೀಟಿಯನ್ನು ಹರಾಜು ಮಾಡಲಾಯಿತು. 7343 ಪೌಂಡುಗಳಿಗೆ ಖರೀದಿಸಿದ ಅರ್ಥರ್ ಹ್ಯಾಂಡನೂ 1933ರಲ್ಲಿ ಮರಳಿ ಮಣ್ಣಿಗೆ ಪಯಣಿಸಿದ ಅನಂತರ ಆತನ ವಿಧವೆ ಪತ್ನಿ ಕೋರ್ಟಿನ ಕಟ್ಟೆ ಹತ್ತಿ ಅಂಚೆಚೀಟಿಯ ಸ್ವಾಮಿತ್ವ ಪಡೆದು ಅನಂತರ ಆಸ್ಟ್ರೇಲಿಯಾದ ಅನಾಮಿಕನೊಬ್ಬನಿಗೆ 40,000 ಪೌಂಡುಗಳಿಗೆ ಮಾರಿಬಿಟ್ಟಳು. ಇದನ್ನು ಕೊಂಡ ವ್ಯಕ್ತಿ ಲಂಡನ್ನಿನಲ್ಲಿ 1965 ರಂದು ಒಂದು ಬೃಹತ್ ಪ್ರದರ್ಶನವನ್ನು ಏರ್ಪಡಿಸಿ ಜನತೆಗೆ ಈ ಅಂಚೆಚೀಟಿಯ ದರ್ಶನದ ಲಾಭವನ್ನು ಒದಗಿಸಿದನು. ತಾನೂ ಧನಿಕನಾದನು ಆ ಮಾತು ಬೇರೆ.

ಅಮೇರಿಕದಲ್ಲಿ ಈ ಒಂದು ಸೆಂಟಿನ ಅಂಚೆ ಚೀಟಿಯ ಹರಾಜು ನಡೆದಾಗ ಉಂಟಾದ ನೂಕು ನುಗ್ಗಲುಗಳನ್ನು ನಿಯಂತ್ರಿಸಲು ಪೋಲಿಸರು ಹೆಣಗಾಡಬೇಕಾಯಿತು. ಆದಾಗ್ಯೂ ಅಲ್ಲಿ ಉಂಟಾದ ಸ್ಮಶಾನ ಸದೃಶ್ಯ ಮೌನದ ನಡುವೆಯೇ ಅಂಚೆಚೀಟಿ 2,80,000 ಪೌಂಡುಗಳಿಗೆ ಹರಾಜಾಗಿ ಎಲ್ಲರ ಹೃದಯ ಬಡಿತವನ್ನು ಹೆಚ್ಚಿಸಿತು. ಇದನ್ನು ಕೊಂಡ ವ್ಯಕ್ತಿಗೆ ಜಗತ್ತಿನಲ್ಲಿ ನನ್ನ ಬಳಿ ಮಾತ್ರ ಇಂಥ ಒಂದೇ ಒಂದು ಅಂಚೆ ಚೀಟಿ ಇರಬೇಕು. ಇನ್ನಾರ ಬಳಿಯೂ ಇರಬಾರದು ಎಂಬ ಧೋರಣೆಯಿತ್ತು. ಹೀಗಾಗಿ ಆತ ಮತ್ತೊಬ್ಬನ ಬಳಿ ಇಂತಹದ್ದೇ ಅಂಚೆ ಚೀಟಿ ಇರುವುದನ್ನು ಪತ್ತೆ ಹಚ್ಚಿ, ಅವನು ಹೇಳಿದ ಭಾರೀ ಬೆಲೆಗೆ ಅದನ್ನು ಕೊಂಡು ತನ್ನ ಅಂಚೆಚೀಟಿಯ ಸಾರ್ವಭೌಮತ್ವವನ್ನು ಕಾಪಾಡಿಕೊಳ್ಳುವ ಸಲುವಾಗಿ, ಸಾರ್ವಜನಿಕರ ಎದುರಿಗೆ ಆ ಇನ್ನೊಂದು ಅಂಚೆ ಚೀಟಿಯನ್ನು ಸುಟ್ಟು ಹಾಕಿದನು.

ಅಂಚೆ ಚೀಟಿ ಪ್ರಪಂಚದಲ್ಲಿ ಇತಿಹಾಸವನ್ನೇ ಸೃಷ್ಟಿಸಿ ಧೃವತಾರೆಯಾಗಿ ಮೆರೆಯುತ್ತಿರುವ ಈ ಅಂಚೆಚೀಟಿಯ ಈಗಿನ ಬೆಲೆ ಕೇವಲ ಇಪ್ಪತ್ತೆರಡು ಕೋಟಿ ರೂಪಾಯಿಗಳು ಮಾತ್ರ, ಇದು ಮತ್ತೇ ಹರಾಜಾಗಬಹುದು. ಆಗ ಅದನ್ನು ಕೊಳ್ಳಲು ನೀವು ಈಗಿನಿಂದಲೇ ಸಿದ್ಧರಾಗಿಬಿಡುವುದು ಒಳ್ಳೆಯದು.



## ಭಾಗ : ಎರಡು


# ಅಂಚೆ ಚೀಟಿಗಳಲ್ಲಿ ಆರೋಗ್ಯ

# ಅಂಚೆ ಚೀಟಿಗಳಲ್ಲಿ ಆರೋಗ್ಯ

ಅಂಚೆ ಚೀಟಿಗಳಲ್ಲಿ ಇರುವಷ್ಟು ವೈವಿಧ್ಯತೆ ಮತ್ತೆಲ್ಲೂ ಕಂಡುಬರುವುದಿಲ್ಲವೆಂದರೆ ಸತ್ಯ ನಾಶವಾಗದು. ಅನೇಕಾನೇಕ ವಿಷಯಗಳ ವಿಸ್ತಾರ ರೂಪಗಳು ಅಂಚೆ ಚೀಟಿಯಲ್ಲಿ ಮೂಡಿ ಜನತೆಯ ಮನಸ್ಸಿಗೆ ಮುದ ಕೊಟ್ಟಿವೆಯಲ್ಲದೆ ಅಪಾರ ಜ್ಞಾನಾರ್ಜನೆಯ ಮೂಲ ಸೆಲೆಯಾಗಿವೆ. ಅಪಾರ ವಿಷಯಗಳನ್ನು ಸ್ಮಾರಕದ ರೂಪದಲ್ಲಿ ಪರಿವರ್ತಿಸಿ ಇಡುವ ಅಂಚೆ ಚೀಟಿಗಳ ವೈವಿಧ್ಯತೆಯನ್ನು ಕಂಡು ಅಂಚೆ ಚೀಟಿಯ ಸಂಗ್ರಹಕಾರರೇ ದಿಗ್ಭ್ರಮೆಗೊಂಡಿದ್ದಾರೆ. ತಮ್ಮ ಸೀಮಿತತೆಯನ್ನು ಅರಿತುಕೊಂಡು ತಮ್ಮ ಅಭಿಲಾಷೆಗೆ ತಕ್ಕಂತಹ ವಿಷಯಗಳ ಅಂಚೆ ಚೀಟಿಗಳನ್ನು (Thematic Collection) ಮಾತ್ರ ಸಂಗ್ರಹಿಸಿ ವಿಷಯ ಸಂಬಂಧಿ ಅಂಚೆ ಚೀಟಿಗಳ ಸಂಗ್ರಹಕಾರ (Thematic Collector) ಆಗಿದ್ದಾರೆ. ಯಾವುದೇ ಒಂದು ಸೂರಿನಡಿ ಈ ಎಲ್ಲಾ ರೀತಿಯ ಅಂಚೆ ಚೀಟಿಗಳನ್ನು ಪ್ರದರ್ಶಿಸುವುದು ಸುಲಭ ಸಾಧ್ಯವಾಗದ ಕೆಲಸ.

ಅಂಚೆ ಚೀಟಿಗಳಲ್ಲಿ ಹಣ್ಣುಗಳು, ಹೂವುಗಳು, ಮರಗಿಡಗಳು, ನದಿಗಳು, ಸರೋವರಗಳು ಹಾಗೂ ಪರ್ವತ ಶ್ರೇಣಿಗಳು ಮೂಡಿಬಂದಿವೆ. ಕಾಜಾಣ, ಕೋಗಿಲೆ ಹಾಡಿವೆ. ನವಿಲುಗಳು ಕುಣಿದಿವೆ. ಮೀನುಗಳು ಈಜಿವೆ. ಪ್ರಾಣಿಪಕ್ಷಿಗಳ ಸಂಕುಲವೇ ಮುಖವೆತ್ತಿ ಮೆರೆದಿವೆ. ಸೈಕಲ್ಲು, ಬಂಡಿ, ಟ್ರೇನು, ಬಸ್ಸು, ಲಾರಿ, ಕಾರು, ವಿಮಾನಮತ್ತು ಕ್ಷಿಪಣಿಗಳು ನಿಶ್ಚಲವಾಗಿ ನಿಂತಿವೆ. ವಿವಿಧ ಕ್ಷೇತ್ರಗಳ ಖ್ಯಾತಿವೆತ್ತ ಮಹನೀಯರು ಮೈದಳೆದಿದ್ದಾರೆ. ಇಷ್ಟೆಲ್ಲಾ ವೈವಿಧ್ಯತೆಗಳ ನಡುವೆ ಜನತೆಗೆ ಆರೋಗ್ಯದ ಬಗ್ಗೆ ಅರಿವು ಮೂಡಿಸುವ ಪ್ರಯತ್ನದಿಂದ ಪುಂಕಾನುಪುಂಕವಾಗಿ ಅಂಚೆ ಚೀಟಿಗಳು ಹೊರಬಿದ್ದಿವೆ. ಸಿಡುಬು ರೋಗ ಜಗತ್ತಿನಿಂದಲೇ ಕಣ್ಮರೆಯಾಗಿಸಿದ ಮಾನವನ ಪ್ರಯತ್ನದಲ್ಲಿ ಅಂಚೆ ಚೀಟಿಗಳು ವಹಿಸಿದ ಪಾತ್ರವನ್ನು ಅಲಕ್ಷಿಸಲಾಗದು. ಮಲೇರಿಯಾ ಮತ್ತು ಕ್ಷಯ ಕಾಯಿಲೆಗಳ ಬಗ್ಗೆ ಜನರಲ್ಲಿ ಪ್ರಜ್ಞೆ ಮೂಡಿಸಲು ಅಂಚೆ ಚೀಟಿಗಳೊಂದಿಗೆ ಪೋಸ್ಟ ಕಾರ್ಡ್ ಮತ್ತು ಅಂತರ್ ದೇಶಿಯ ಪತ್ರಗಳ ಮೇಲಿನ ಮುದ್ರಣವು ಸಹಕಾರಿಯಾಗಿತ್ತು. ಆರೋಗ್ಯದ ಬಗ್ಗೆ ವಿಶೇಷವಾಗಿ ಹೊರಡಿಸಲಾದ ಕೆಲ ಪ್ರಾತಿನಿಧಿಕ ಅಂಚೆ ಚೀಟಿಗಳ ಒಳಗೊಂಡ ಮುದ್ರೆ ಒತ್ತಿದ (Cancellation) ಮೊದಲ ದಿನ ಆವರಣಗಳನ್ನು ನನ್ನ ಸಂಗ್ರಹದಿಂದ ಹೆಕ್ಕಿ ಯಥಾವತ್ತಾಗಿ ನಿಮ್ಮ ಅವಲೋಕನಕ್ಕಾಗಿ ಇಡಲಾಗಿದೆ.

# ವಿಶ್ವ ಆರೋಗ್ಯ ದಿನ : ಏಪ್ರಿಲ್ : 7




ಭಾರತ ಸರ್ಕಾರವು ಕಳೆದ ಐವತ್ತು ವರ್ಷಗಳಲ್ಲಿ ಆರೋಗ್ಯದ ವಿವಿಧ ಆಯಾಮಗಳತ್ತ ವಿಶೇಷ ಗಮನಹರಿಸಿ ಹಲವಾರು ಗಮನಾರ್ಹ ಅಂಚೆ ಚೀಟಿಗಳನ್ನು ಹೊರತಂದಿದ್ದಾರೆ. W.H.O. ದ ಸದಸ್ಯ ರಾಷ್ಟ್ರಗಳು ಸಹ ಈ ನಿಟ್ಟಿನಲ್ಲಿ ಹಿಂದೆ ಬಿದ್ದಿಲ್ಲ. ಪ್ರತಿವರ್ಷ ಏಪ್ರಿಲ್ 7ನ್ನು ವಿಶ್ವ ಆರೋಗ್ಯ ದಿನವನ್ನಾಗಿ ಜಗತ್ತಿನಾದ್ಯಂತ ಆಚರಿಸಲಾಗುತ್ತಿದೆ. ವಿಶ್ವ ಆರೋಗ್ಯ ಸಂಸ್ಥೆ ತನ್ನ ಸಂವಿಧಾನವನ್ನು 1948ರಲ್ಲಿ ಒಮ್ಮತದಿಂದ ಸ್ವೀಕರಿಸಿದ್ದರ ನೆನಪಿಗಾಗಿ ಈ ದಿನಾಚರಣೆ ರೂಢಿಯಲ್ಲಿ ಬಂದಿದೆ. ಪ್ರತಿವರ್ಷ ಜ್ವಲಂತ ಆರೋಗ್ಯ ಸಮಸ್ಯೆಯನ್ನು ಪರಿಗಣಿಸಿ ಘೋಷಣೆಯೊಂದನ್ನು ಹೊರಡಿಸಲಾಗುವುದು.

ವರ್ಷವಿಡೀ ಈ ಬಗ್ಗೆ ವಿಶ್ವದಾದಂತ್ಯ ಜನರಲ್ಲಿ ಪ್ರಜ್ಞೆ ಮೂಡಿಸುವ ಹಲವಾರು ಜನಪರ ಕಾರ್ಯಕ್ರಮಗಳು ನಡೆಯುವವು. 1976ರಲ್ಲಿ ವಿಶ್ವ ಆರೋಗ್ಯ ಸಂಸ್ಥೆ (W.H.O.) ಯು "ಪೂರ್ವಾಲೋಚನೆ ಕುರುಡುತನವನ್ನು ತಡೆಯುತ್ತದೆ" (Fore sight prevents Blindnes) ಎಂಬ ಘೋಷಣೆಯನ್ನು ಹೊರಡಿಸಿತ್ತು.

ಗುಣಪಡಿಸಬಹುದಾದ ಕುರುಡುತನವನ್ನು ನಿವಾರಿಸಲು ನಾವೆಲ್ಲರೂ ಯತ್ನಿಸಿದಲ್ಲಿ ದೇಶದ ಆರೋಗ್ಯ, ಆರ್ಥಿಕ ಮತ್ತು ಸಾಮಾಜಿಕ ಸಮಸ್ಯೆಗಳನ್ನು ಕೆಲಮಟ್ಟಿಗಾದರೂ

ತಗ್ಗಿಸಬಹುದು. ಈ ಕಾರ್ಯಕ್ರಮ ಯಶಸ್ವಿಯಾಗಬೇಕಾದರೆ ಸಾರ್ವಜನಿಕರ ಪಾತ್ರ ವಿಶೇಷವಾಗಿ ಶಿಕ್ಷಕರ, ಸಾಮಾಜಿಕ ಕಾರ್ಯಕರ್ತರ ಮತ್ತು ಸಮಾಜದ ಮುಖಂಡರ, ಪಾತ್ರ ಹಿರಿದು.

"Fore Sight Prevents Blindness" ಈ ಘೋಷಣೆ ಕಣ್ಣಿನ ಆರೋಗ್ಯದ ತತ್ವಗಳನ್ನಲ್ಲದೇ ಆಧ್ಯಾತ್ಮಿಕ ಜ್ಞಾನವನ್ನು ಸಹ ಒಳಗೊಂಡಿರುವುದೊಂದು ವಿಶೇಷ. ನಾವುಗಳು ಕುರುಡುತನದಿಂದ ಬಳಲುತ್ತಿರುವ ವ್ಯಕ್ತಿಗಳನ್ನು ಕತ್ತಲೆಯಿಂದ ಬೆಳಕಿನೆಡೆಗೆ ನಡೆಸುವಲ್ಲಿ ಪ್ರಮುಖ ಪಾತ್ರ ವಹಿಸಲು ಪ್ರೇರಣೆ ನೀಡುತ್ತದೆ.

ಈ ಘೋಷಣೆ ಶಿಕ್ಷಕವೃಂದ ಮತ್ತು ವಿಜ್ಞಾನಿಗಳಿಗೆ ಹೊಸ ಹೊಸ ಆವಿಷ್ಕಾರಗಳತ್ತ ಗಮನಹರಿಸಲು ಸಹಕಾರಿಯಾಗುವುದಲ್ಲದೇ ಅವರ ದೃಢ ಮನಸ್ಸಿಗೆ ಅಗ್ನಿಸಾಕ್ಷಿಯಾಗಬಲ್ಲದು.

ಈ ಘೋಷಣೆ ವಿದ್ಯಾರ್ಥಿಗಳಿಗೆ ಸತ್ಯಶೋಧನೆಯತ್ತ ಮುನ್ನುಗ್ಗಲು ಪ್ರೇರೇಪಿಸುವುದಲ್ಲದೆ ಆಂತರಿಕವಾಗಿ ಕತ್ತಲು ತುಂಬಿದ ವಿಚಾರಗಳನ್ನು ಹೊಡೆದೋಡಿಸಲು ಸಹಕಾರಿಯಾಗಿ ಅವರನ್ನು ಭವ್ಯ ಭವಿಷ್ಯದತ್ತ ಕರೆದೊಯ್ಯುವುದರಲ್ಲಿ ಸಂಶಯವಿಲ್ಲ.


ಈ ಘೋಷಣೆ ಶಸ್ತ್ರ ಚಿಕಿತ್ಸಾ ವೈದ್ಯರು ಹಾಗೂ ಕುಟುಂಬ ವೈದ್ಯರುಗಳಿಗೆ ಒಂದು ಸವಾಲು. ಎಲ್ಲ ಆಯಾಮಗಳಿಂದಲೂ ಅವರು ತಮ್ಮ ಅರ್ಹ ಸೇವೆ ಸಲ್ಲಿಸಿ ಕತ್ತಲು ತುಂಬಿದ ಸಾವಿರಾರು ಜೀವಿಗಳಿಗೆ ಬೆಳಕಿನ ದರ್ಶನ ಮಾಡಿಸಬಹುದಾಗಿದೆ.

ಸಾಂದರ್ಭಿಕವಾಗಿ ಈ ಸಂದೇಶವನ್ನು ಸಾರಲು ವಿಶೇಷ ಅಂಚೆ ಚೀಟಿಯನ್ನು ತರಲಾಗಿದೆ.

ಪ್ರತಿ ವರ್ಷದಂತೆ 7ನೆಯ ಏಪ್ರಿಲ್ 1998ರಂದು ವಿಶ್ವ ಆರೋಗ್ಯ ದಿನಾಚರಣೆಯನ್ನು ಜಗತ್ತಿನಾದ್ಯಂತ ಆಚರಿಸಲಾಯಿತು. ಈ ವರ್ಷದ ವಿಶ್ವ ಆರೋಗ್ಯ ದಿನಾಚರಣೆಗೆ "ಸುರಕ್ಷಿತ ತಾಯ್ತನ" ಎಂಬುದು ಘೋಷಣೆಯಾಗಿತ್ತು.

"Safe motherhood" - Pregnancy is Special : Let's make it safe-

# ಕುಟುಂಬ ಯೋಜನೆ : (Family Planning)





ಕುಟುಂಬ ಯೋಜನೆಯ (Family Planning) ಮಹತ್ವ ಮತ್ತು ಉದ್ದೇಶಗಳನ್ನು ಜನರಲ್ಲಿ ಒಡಮೂಡಿಸುವ ಏಕೈಕ ಧ್ಯೇಯದಿಂದ 22.9.1976 ರಲ್ಲಿ ಬಿಡುಗಡೆಯಾದ ಅಂಚೆಚೀಟಿ ಮತ್ತು ಪ್ರಥಮದಿನ ಲಕೋಟೆಯ ಸುಂದರವಾದ ಮನಮುಟ್ಟುವ ವಿನ್ಯಾಸಗಳನ್ನು ಚಿತ್ರದಲ್ಲಿ ಕಾಣಬಹುದು. ಭಾರತವನ್ನು ಜನಸಂಖ್ಯಾ ಸ್ಫೋಟದ ಅನಾಹುತ (Population Explosion) ದಿಂದ ತಪ್ಪಿಸಿ ಸ್ವಾತಂತ್ರ್ಯ ನಂತರದ ವರ್ಷಗಳಲ್ಲಿ ದೇಶ ಸಾಧಿಸಿದ, ಸಾಧಿಸುತ್ತಿರುವ ಪ್ರಗತಿಯ ಚಿತ್ರವನ್ನು ಬಿಂಬಿಸುವುದಾಗಿದೆ. "ಸಣ್ಣ ಕುಟುಂಬ ಸುಖೀ ಕುಟುಂಬ" (Small Family Happy Family) ಯೆಂಬುದನ್ನು ಜನರಿಗೆ ಅರಿವು ಮೂಡಿಸಿ ಕುಟುಂಬ ಯೋಜನೆಯ ಪ್ರಯೋಜಗಳನ್ನು ಪಡೆದು ದೇಶವನ್ನು 20ನೆಯ ಶತಮಾನದತ್ತ ಯಶಸ್ವಿಯಾಗಿ ಕೊಂಡೊಯ್ಯಬೇಕಾಗಿರುವುದು ಪ್ರತಿಯೊಬ್ಬನ ಪವಿತ್ರ ಕರ್ತವ್ಯವಾದೆಗಿಯೆಂದು ನೆನಪಿಸುವುದು ಈ ಯೋಜನೆಯ ಮೂಲ ಉದ್ದೇಶಗಳಲ್ಲಿ ಒಂದಾಗಿದೆ. ಕುಟುಂಬ ಯೋಜನೆ ನಮಗಾಗಿ ಇರುವ ಸ್ವಸಂತೋಷದ ಮತ್ತು ಐಚ್ಛಿಕವಾದ ಯೋಜನೆ. ಇದರ ಯಶಸ್ಸಿಗಾಗಿ ನಾವೆಲ್ಲರೂ ಸಕ್ರಿಯವಾಗಿ ಭಾಗವಹಿಸಬೇಕಾಗಿದೆ. ಪ್ರಥಮ ಪಂಚವಾರ್ಷಿಕ ಯೋಜನೆಯ ಅಡಿಯಲ್ಲಿ "ಕುಟುಂಬ ಯೋಜನೆ"ಯನ್ನು 1952ರಲ್ಲಿ ತರಲು ಯೋಚಿಸಲಾಯಿತು. ಭಾರತ ಸರ್ಕಾರ ಈ

ಯೋಜನೆಯ ಯಶಸ್ಸಿಗಾಗಿ ಹಗಲಿರುಳು ದುಡಿಯುತ್ತಿದ್ದು ಹಣವನ್ನು ನೀರಿನಂತೆ ವ್ಯಯಿಸಲಾಗುತ್ತಿದೆ. ಲಕ್ಷಾನುಗಟ್ಟಲೇ ಜನರು ಈ ಕಾರ್ಯಕ್ರಮದ ಯಶಸ್ಸಿಗಾಗಿ ಯಾವುದೇ ಆಶೆ–ಅಮಿಷಗಳಿಲ್ಲದೇ ದುಡಿಯುತ್ತಿರುವುದು ಒಂದು ಆಶಾಕಿರಣವಾಗಿದೆ. ಈ ವಿಷಯದ ಬಗ್ಗೆ ಒಂದೆರಡು ಮಾತುಗಳು.

ಆದರ್ಶ ಗಂಡ ಹೆಂಡತಿಯರು ತಮಗೆ ಆಗಬೇಕಾದ ಮಕ್ಕಳ ಸಂಖ್ಯೆಯನ್ನು ತಮ್ಮ ಇಚ್ಛೆಗೆ ತಕ್ಕಂತೆ ಮೊದಲೇ ನಿರ್ಧರಿಸಿಕೊಂಡು, ತಮ್ಮ ದಾಂಪತ್ಯ ಜೀವನದ ಸೌಖ್ಯಕ್ಕೆ ಭಂಗಬರದಂತೆ ಆಚರಿಸುವ ಒಂದು ವೈಜ್ಞಾನಿಕ ವಿಧಿ. ವೈಯಕ್ತಿಕ, ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಕಾರಣಗಳಿಂದ ಅಗತ್ಯ. ಸಂಸಾರದಲ್ಲಿ ಶಾಂತಿ ನೆಲೆಸಬೇಕಾದರೆ ಮಕ್ಕಳ ಸಂಖ್ಯೆ ಕಡಿಮೆಯಿರಲೇಬೇಕು. ತಾಯಿಯ ಆರೋಗ್ಯ, ತಂದೆಯ ಸಂಪಾದನೆ ಮಕ್ಕಳ ವಿದ್ಯಾಭ್ಯಾಸ ಮತ್ತು ಯೋಗಕ್ಷೇಮ ಎಲ್ಲವನ್ನೂ ಗಮನದಲ್ಲಿಟ್ಟಿಕೊಂಡು ನಮ್ಮ ಸಂಸಾರವನ್ನು 1 ಇಲ್ಲವೇ 2 ಮಕ್ಕಳಿಗೆ ಸೀಮಿತಗೊಳಿಸಬೇಕು. ಆ ಮಕ್ಕಳ ಮಧ್ಯೆ 3–4 ವರ್ಷ ಅಂತರವಿರಬೇಕು. ರಾಷ್ಟ್ರದ ಹಿತದೃಷ್ಟಿಯಿಂದ ಸಹ ದೇಶದ ಜನಸಂಖ್ಯೆಯನ್ನು ಮಿತಿಯಲ್ಲಿಡುವುದು ಅಗತ್ಯ. ರಾಷ್ಟ್ರವು ಕೈಕೊಳ್ಳುತ್ತಿರುವ ಹೊಸ ಹೊಸ ಯೋಜನೆಗಳಿಂದ, ಆಹಾರ, ಉದ್ಯೋಗ, ವಸತಿಯ ಕ್ಷೇತ್ರದಲ್ಲಿ ಪ್ರಗತಿ ಸಾಧಿಸಿದರೂ, ಜನಸಂಖ್ಯೆ ಬೆಳೆಯುತ್ತ ಹೋದಲ್ಲಿ ಈ ಎಲ್ಲ ಪ್ರಗತಿ ಶೂನ್ಯ ಸಂಪಾದನೆಯಾಗುವುದು. ವಿಶ್ವಶಾಂತಿಯ ದೃಷ್ಟಿಯಿಂದಲೂ ಜನಸಂಖ್ಯೆ ಹಿಡಿತದಲ್ಲಿರುವುದು ಅವಶ್ಯವಾಗಿದೆ.

# ಸ್ವಯಂಪ್ರೇರಿತ ರಕ್ತದಾನ ದಿನಾಚರಣೆ

# ಅಕ್ಟೋಬರ್ 1





ಪ್ರತಿ ವರ್ಷ ಅಕ್ಟೋಬರ್ 1ರಂದು ಅಖಿಲ ಭಾರತ ಸ್ವಯಂ ಪ್ರೇರಿತ ರಕ್ತದಾನದ ದಿನವೆಂದು ಆಚರಿಸಲಾಗುತ್ತಿರುವುದು ಬಹಳಷ್ಟು ಜನರಿಗೆ ತಿಳಿದಿರುವ ವಿಷಯ. (Voluntary Blood Donation) ರಕ್ತದಾನವನ್ನು ವ್ಯಾಪಾರೀಕರಣದಿಂದ ಮುಕ್ತಗೊಳಿಸುವುದು. ಮತ್ತು ಅದರ ಪವಿತ್ರತೆಯನ್ನು ಕಾಪಾಡಿಕೊಳ್ಳುವ ಎಚ್ಚರಿಕೆಯನ್ನು ಜನರಲ್ಲಿ ಮೂಡಿಸುವುದು. ಈ ಉದ್ದೇಶಗಳ ಸಫಲತೆಗಾಗಿ ಅಂಚೆ ಇಲಾಖೆಯವರು ಬಿಡುಗಡೆ ಮಾಡಿರುವ ಸ್ಟಾಂಪು ತುಂಬಾ ಮನೋಜ್ಞವಾಗಿದೆ.

ಸ್ವಯಂ ಪ್ರೇರಿತ ರಕ್ತದಾನ ದಾನಗಳಲ್ಲಿಯೇ ಶ್ರೇಷ್ಠವಾದುದು. ನಂದಿ ಹೋಗುತ್ತಿರುವ ಒಂದು ಜೀವಕ್ಕೆ ಪುನರ್ಜನ್ಮವನ್ನು ದಯಪಾಲಿಸುವುದೇ ರಕ್ತದಾನದ ವಿಶಿಷ್ಟವಾದ ಸಾರ್ಥಕತೆಯನ್ನು ಎತ್ತಿತೋರಿಸುವುದು. 'ರಕ್ತದಾನ' ಮಾಡುವುದರಿಂದ, ರಕ್ತದಾನಿಗಳಿಗೆ ಯಾವುದೇ ತರಹದ ಹಾನಿಗಳಿಲ್ಲ. ಸುರಕ್ಷತೆಯ ದೃಷ್ಟಿಯಿಂದ ರಕ್ತದಾನ ಸ್ವೀಕರಿಸುವವರು ಚಿಂತಿಸಬೇಕಿಲ್ಲ. ಏಡ್ಸ್‌ನಿಂದ ಪೀಡಿತ ಇಂದಿನ ಸಮಾಜದಲ್ಲಿ ಸ್ವಯಂಪ್ರೇರಿತ ರಕ್ತದಾನ ಒಂದೇ ಆ ಭೀತಿಯನ್ನು ಹೊಡೆದೋಡಿಸಬಲ್ಲುದು. ಈ ನಿಟ್ಟಿನಲ್ಲಿ 'ವಿಶ್ವ ಆರೋಗ್ಯ


ಸಂಸ್ಥೆ' ತುಂಬಾ ಚುರುಕಾಗಿ ಕಾರ್ಯ ಮಾಡುತ್ತಿರುವುದು ಸ್ತುತ್ಯಾರ್ಹ. ರಕ್ತದಾನವೆಂದರೆ ಜೀವದಾನವೆಂದೇ (The Gift of Life) ವ್ಯಾಖ್ಯಾನಿಸಬಹುದು. ಆಧುನಿಕ ವೈದ್ಯಶಾಸ್ತ್ರದಲ್ಲಿ 'ರಕ್ತದಾನ'ಕ್ಕೆ ವಿಶಿಷ್ಟ ಸ್ಥಾನವನ್ನು ಕಲ್ಪಿಸಲಾಗಿದೆ. ಮಾನವನು ಮಾನವನಿಗೆ ಮಾಡುವ ಅತೀ ದೊಡ್ಡ ಉಪಕಾರವೆಂದರೆ 'ರಕ್ತದಾನ'. ಸದೃಢ ಆರೋಗ್ಯವಂತ 18 ರಿಂದ 55 ವಯಸ್ಸಿನ ವ್ಯಕ್ತಿಗಳು ಪ್ರತಿ ಮೂರು ತಿಂಗಳಿಗೊಮ್ಮೆ ರಕ್ತದಾನ ಮಾಡಬಹುದು.

ರಕ್ತವನ್ನು ಕೃತಕವಾಗಿ ತಯಾರಿಸಲು ಸಾಧ್ಯವಿಲ್ಲ. ಒಬ್ಬ ಮನುಷ್ಯನಿಂದ ಪಡೆದ ರಕ್ತವನ್ನೇ ಇನ್ನೊಬ್ಬನಿಗೆ ನೀಡಬೇಕಾಗುತ್ತದೆ. ಯುವಜನರು ಹೆದರಿಕೆ, ಮೂಢನಂಬಿಕೆಗಳು ಮತ್ತು ಉದಾಸೀನತೆಗಳನ್ನು ಬದಿಗೊತ್ತಿ ತುರ್ತು ಪ್ರಸಂಗಗಳಲ್ಲಿ, ಮನಸ್ಸಿನಲ್ಲಿ ಯಾವುದೇ ಕಲ್ಮಷಗಳನ್ನು ಇಟ್ಟುಕೊಳ್ಳದೇ ರಕ್ತದಾನ ಮಾಡಲು ಮುಂದೆ ಬರಬೇಕಾಗಿರುವುದು ಸದ್ಯದ ಸ್ಥಿತಿಗಳಲ್ಲಿ ಅತೀ ಅವಶ್ಯವಾಗಿರುತ್ತದೆ.

ಸ್ವಯಂಪ್ರೇರಿತ ರಕ್ತದಾನ ಶ್ರೇಷ್ಠದಾನ ಹಾಗೂ ಸುರಕ್ಷಿತ



# ಅಂಗವಿಕಲರ ಅಂತರರಾಷ್ಟ್ರೀಯ ವರ್ಷ : 1981




ಜಗತ್ತಿನಲ್ಲಿ ಜನ್ಮ ತಳೆದ ಪ್ರತಿ ಹತ್ತು ಮಕ್ಕಳಲ್ಲಿ ಓರ್ವ ಮಗು ಹುಟ್ಟುವಾಗಲೇ ಇಲ್ಲವೇ ಹುಟ್ಟಿದ ಆನಂತರದ ಬಾಲಾವಧಿಯಲ್ಲಿ ಅಂಗವಿಕಲರಾಗುತ್ತಿರುವುದು ಒಂದು ಜಾಗತಿಕ ಪಿಡುಗು ಆಗಿ ಪರಿಣಮಿಸಿದೆ. ಹೀಗೆ ಹುಟ್ಟುವ ಮಕ್ಕಳ ಅವಶ್ಯಕತೆಗಳ ಬಗ್ಗೆ ಪೂರ್ವಭಾವಿಯಾಗಿ ಅರಿವಾಗದಿರುವುದು, ಜೊತೆ ಜೊತೆಗೆ ಪುನರ್ವಸತಿ ಸೇವೆಗಳ ಕೊರತೆ ಮತ್ತು ಅಸಮರ್ಪಕತೆಗಳ ಪರಿಣಾಮಗಳಿಂದಾಗಿ ಅಂಗವಿಕಲತೆಯ ಸಮಸ್ಯೆ ಸೃಷ್ಟಿಯಾಗುತ್ತಿದೆ. ಹೀಗಾಗಿ ಮಕ್ಕಳು ಕುರುಡುರಾಗಬಹುದು. ಕಿವುಡರಾಗಬಹುದು. ಮೂಕರಾಗಬಹುದು ಇಲ್ಲವೇ ಕೈಕಾಲು ನ್ಯೂನತೆಗಳಿಗೆ ಗುರಿಯಾಗಬಹುದು. ಇಂತಹ 'ಸೀಮಾ ಬಂಧನ'ಗಳಿಂದ ಅವರು ಸಮಾಜಕ್ಕೆ ಹೊರೆಯಾಗುವರು. ಸರಿಯಾದ ಆರೈಕೆ ಸೂಕ್ತ ಸಮಯದಲ್ಲಿ ಲಭಿಸಿದಲ್ಲಿ ಇವರನ್ನು ಅಂಗವಿಕಲತೆಯಿಂದ ತಪ್ಪಿಸಿ ಸಮಾಜದ ಉಪಯುಕ್ತ ಪ್ರಜೆಗಳನ್ನಾಗಿ ಪರಿವರ್ತಿಸಬಹುದಾಗಿದೆ. ನಮ್ಮಲ್ಲಿ ಬೇರುಬಿಟ್ಟಿರುವ ಅಂಧಾನುಕರಣೆ, ಮೂಢನಂಬಿಕೆ ಹಾಗೂ ತಾತ್ಸಾರಗಳ ವಿಷಮ ಜಾಲದಲ್ಲಿ ಸಿಲುಕಿರುವ ಅಂಗವಿಕಲರನ್ನು ಅಂಗವಿಕಲತೆಯಿಂದ ಮೇಲಕ್ಕೆ ಎತ್ತುವುದು ಕೆಲವು ಸಲ ಕಷ್ಟ ಸಾಧ್ಯವಾಗುವುದು. ಇಂತಹ ಸಾಮಾಜಿಕ ಕಾರಣಗಳಿಂದಾಗಿ ಜಗತ್ತಿನ ಅಂಗವಿಕಲರ ಸಂಖ್ಯೆ 100 ಮಿಲಿಯನಗಳನ್ನು ಮೀರಿದೆ ಎಂದರೆ ಜ್ವಲಂತ ಸಮಸ್ಯೆಯ

ಒಂದು ಪಾರ್ಶ್ವವಾದರೂ ತಮ್ಮೆಲ್ಲರಿಗೂ ಪರಿಚಯವಾಗಬಹುದು. ಇದರ ಅರ್ಧದಷ್ಟು ಜನರು ಅಭಿವೃದ್ಧಿ ಹೊಂದುತ್ತಿರುವ (Developing Countries) ರಾಷ್ಟ್ರದ ಪ್ರಜೆಗಳಾಗಿರುವುದು ಮತ್ತಷ್ಟು ಖೇದಕರ.


ಈ ಸಮಸ್ಯೆಯ ಮೂಲ ಕಾರಣಗಳು ಏನೆಂದರೆ ಅಪೌಷ್ಟಿಕತೆ, ಜನನ ಕಾಲದಲ್ಲಾಗುವ ಅನಾಹುತಗಳು, ಪೋಲಿಯೋದಂತಹ ಸಾಂಕ್ರಾಮಿಕ ರೋಗಗಳು, ರೋಗಗಳ ಪ್ರತಿಬಂಧಕ ಉಪಾಯಗಳತ್ತ ಅಲಕ್ಷ್ಯ ಮತ್ತು ಅಜಾಗರೂಕತೆಗಳು. ಪ್ರತಿಬಂಧಕ ಉಪಾಯಗಳು ಮತ್ತು ಪುನರ್ವಸತಿಗಳ ವಿಷಯಗಳಲ್ಲಿ ಜನರಲ್ಲಿ ತಿಳುವಳಿಕೆ ಮೂಡಿಸಬೇಕಾಗಿದೆ. ಈ ಎಲ್ಲ ಕಾರಣಗಳಿಂದ ಜಗತ್ತಿನ ಬಹಳಷ್ಟು ಕುಟುಂಬಗಳು ತಮ್ಮ ಮಕ್ಕಳು ಅಂಗವಿಕಲರಿದ್ದಾಗ್ಯೂ ಇದು ನಮ್ಮ ದೌಭಾರ್ಗವೆಂದುಕೊಂಡು ಪರಿಹಾರಕ್ಕಾಗಿ ಪ್ರಯತ್ನಿಸುವುದಿಲ್ಲ. ಕುಟುಂಬ ಸದಸ್ಯರ ನಿರ್ಲಕ್ಷತೆಯನ್ನು ಸಮಾಜವೂ ಸಹ ಖಂಡಿಸುವದಿಲ್ಲ.

ಈ ಜಾಗತಿಕ ಸಮಸ್ಯೆಗೆ ಮಂಗಳ ಹಾಡಲು ವಿಶ್ವಸಂಸ್ಥೆ 1981ನೇ ವರ್ಷವನ್ನು ಅಂಗವಿಕಲರ ವರ್ಷವೆಂದು ಸಾರಿತ್ತು. ಸದ್ಯ ಅಂಗವಿಕಲರ ಸಮಸ್ಯೆಗಳನ್ನು ಆಳವಾಗಿ ಅಭ್ಯಸಿಸಿ ಪರಿಹಾರೋಪಾಯಗಳನ್ನು ಕಂಡುಕೊಳ್ಳಲು ಸಾಕಷ್ಟು ದೇಶಗಳು ಮುಂದೆ ಬಂದಿರುವುದು ಒಂದು ಶುಭ ಲಕ್ಷಣವೇ ಸೈ. ಈ ನಿಟ್ಟಿನಲ್ಲಿ ಭಾರತ ಸರ್ಕಾರವು ಉತ್ತಮವಾದ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು ಅಂಗವಿಕಲರ ಸಮಸ್ಯೆಗಳ ಇತ್ಯರ್ಥಕ್ಕೆ ಕಂಕಣಬದ್ಧವಾಗಿರುವುದರಿಂದ ಇವರ ಜೀವನದಲ್ಲಿ ಆಶಾಕಿರಣ (Ray of Hope) ಮೂಡಿಸಿ ಅಂಗವಿಕಲರ ಏಳ್ಗೆಗೆ ಸಾಕಷ್ಟು ಉದ್ಯೋಗಾವಕಾಶಗಳನ್ನು ಕಲ್ಪಿಸಲಾಗಿದೆ. ರಾಷ್ಟ್ರೀಯ ಕಾರ್ಯಕ್ರಮಗಳ ಅಡಿಯಲ್ಲಿ ಯಥೇಚ್ಛವಾಗಿ ಹಣವನ್ನು ಸಹ ವಿನಿಯೋಗಿಸಲಾಗಿದೆ. ಹಲವಾರು ರಾಜ್ಯ ಸರ್ಕಾರಗಳು ಈಗಾಗಲೇ 5% ಗಳಷ್ಟು ಸರ್ಕಾರಿ ಕೆಲಸಗಳನ್ನು ಅಂಗವಿಕಲರ ಹಿತದ ದೃಷ್ಟಿಯಿಂದ ಕಾಯ್ದಿರಿಸಿರುವುದು ಮತ್ತು ಅದನ್ನು ಕಾನೂನಾಗಿ ಮಾಡಿ ಕಟ್ಟುನಿಟ್ಟಾಗಿ ಪಾಲಿಸುತ್ತಿರುವುದು ಅಂಗವಿಕಲರಿಗೆ ದೊರಕಿದ 'ಸಾಮಾಜಿಕ ನ್ಯಾಯ'ವೆಂದೇ ವ್ಯಾಖ್ಯಾನಿಸಬಹುದು.

ಅಂಗವಿಕಲತೆಯನ್ನು ಅಳಿಸಿಹಾಕಲು ಸರ್ಕಾರದ ಜೊತೆಯಲ್ಲಿಯೇ ಅನೇಕ ಸಾರ್ವಜನಿಕ ಸಂಘ ಸಂಸ್ಥೆಗಳು ಶ್ರಮಿಸುತ್ತಿವೆ. ಮಹನೀಯರನೇಕರು ಸಹ ಈ ಸಮಸ್ಯೆಯ ನಿವಾರಣೆಯತ್ತ ತನುಮನ ಧನಗಳಿಂದ ಶ್ರಮಿಸುತ್ತಿರುವುದು ಶ್ಲಾಘನೀಯ.

ಈ ಸಂದರ್ಭವನ್ನು ಹೆಚ್ಚು ಅರ್ಥಪೂರ್ಣವನ್ನಾಗಿಸುವಲ್ಲಿ ಅಂಚೆ ಇಲಾಖೆಯು ಸುಂದರವಾದ ಸ್ಟಾಂಪನ್ನು 20-4-1981ರಲ್ಲಿ ಹೊರಡಿಸಿದೆ. ಅಂಚೆಚೀಟಿಯ ಮತ್ತು ಪ್ರಥಮ ದಿನದ ಆವರಣದ ವಿನ್ಯಾಸಕಾರರು ಶ್ರೀ ಕಾಶಿನಾಥ ರಾಹರು.

# ಕ್ಷಯ ರೋಗಾಣುವಿನ ಆವಿಷ್ಕಾರದ
# 100ನೇ ವರ್ಷ : 1982





ಅನಾದಿ ಕಾಲದಿಂದಲೂ ಮಾನವನನ್ನು ಬಿಡದೇ ಕಾಡುತ್ತ ಬಂದಿರುವ ರೋಗಗಳಲ್ಲಿ ಕ್ಷಯ (T.B.) ಪ್ರಮುಖವಾದದ್ದು. ಬಹು ಪುರಾತನವಾದ ಈ ಕಾಯಿಲೆಯನ್ನು ಮಾನವನು ತನ್ನದೇ ರೀತಿಯಲ್ಲಿ ತಿಳಿದು ಯುಕ್ತ ಪರಿಹಾರ ಮಾರ್ಗಗಳನ್ನು ಕಂಡುಕೊಳ್ಳುತ್ತ ಬಂದಿದ್ದಾನೆ. ಮುಖ್ಯವಾಗಿ ಕ್ಷಯರೋಗವು ಪೂರ್ವಜನ್ಮದ ಪಾಪದ ಫಲವೆಂದು ನಂಬಿದ್ದರು. ಇಂತಹ ಸಮಯದಲ್ಲಿ ರಾಬರ್ಟ್ ಕಾಕ್ ಎಂಬ ವಿಜ್ಞಾನಿ ಕ್ಷಯಕ್ಕೆ ರೋಗಾಣುಗಳೇ ಕಾರಣವೆಂದು ರುಜುವಾತುಪಡಿಸಿದನು. ಅಲ್ಲದೇ ಸೂಕ್ಷ್ಮಾತೀಸೂಕ್ಷ್ಮ ಜೀವಿಗಳು ಮನುಷ್ಯನಿಗೆ ಅನಾರೋಗ್ಯವನ್ನುಂಟು ಮಾಡಬಲ್ಲವು ಎಂದು ಇಡೀ ಪ್ರಪಂಚಕ್ಕೆ ಪ್ರಪ್ರಥಮವಾಗಿ ತಿಳಿಸಿದ ಮಹನೀಯ ಇವನು. ಕೆಲ ಸಂಶೋಧಕರು T.B. ಯನ್ನು ವಂಶಪಾರಂಪರಿಕವೆಂದು ಬಣ್ಣಿಸಿದ್ದರು. ಅಪೌಷ್ಠಿಕತೆ, ಜನಾರೋಗ್ಯದ ಲೋಪದೋಷಗಳು ಮತ್ತು ಅನಿರ್ಮಲ ವಾತಾವರಣಗಳಿಂದಲೇ ಈ ಕಾಯಿಲೆ ಹುಟ್ಟುವುದೆಂದು ಹಿಂದಿನವರು ಭಾವಿಸಿದ್ದರು. ರೋಗ ಹಬ್ಬಲು ಕಾರಣವಾದ ರೋಗಾಣುವಿನ ಶೋಧವಾದ ನಂತರ ಈ T.B. ಕಾಯಿಲೆಯನ್ನು ನಿರ್ಮೂಲ ಮಾಡುವ ಔಷಧಿಗಳ ಸಂಶೋಧನೆಯಲ್ಲಿ ವಿಜ್ಞಾನಿಗಳು

ಮಗ್ನರಾದರು ಮತ್ತು T.B. ಹರಡದಂತಹ ಪ್ರತಿಬಂಧಕ ಉಪಾಯಗಳತ್ತ ಗಮನಹರಿಸಿದರು.

ರಾಬರ್ಟ್ ಕಾಕ್‌ನು ಜರ್ಮನಿಯ ಹ್ಯಾನೋವರ ಪ್ರಾಂತದ ಕ್ಲೌಸ್‌ಥರ್ ಹೆಸರಿನ ಹಳ್ಳಿಯೊಂದರಲ್ಲಿ 1843ರಲ್ಲಿ ಜನಿಸಿದನು. ಗೊಟ್ಟಿನ್‌ಜೆನ್ ವಿಶ್ವವಿದ್ಯಾಲಯದಿಂದ 1866ರಲ್ಲಿ ವೈದ್ಯನಾಗಿ ಹೊರಬಂದನು. ಅಂಥ್ರಾಕ್ಷ (Anthrax) ಕಾಯಿಲೆಯ ರೋಗಾಣುವಿನ ಸಂಶೋಧನೆ ಮತ್ತು ಅದರ ಬೇರ್ಪಡುಸುವಿಕೆ (Isolation) ಈತನ ಪ್ರಥಮ ಪ್ರಮುಖ ಸಾಧನೆಯಾಗಿತ್ತು. 1881ರಲ್ಲಿ ಲಂಡನ್ನಿನಲ್ಲಿ ಜರುಗಿದ ಅಂತಾರ್ರಾಷ್ಟ್ರೀಯ ವೈದ್ಯಕೀಯ ಮೇಳದಲ್ಲಿ T.B. ಕಾಯಿಲೆಯ ಉಪಟಳದ ಬಗ್ಗೆ ತಿಳಿದುಕೊಂಡು ಅದರ ಸವಿಸ್ತಾರವಾದ ಅಭ್ಯಾಸದತ್ತ ತನ್ನ ಗಮನ ಹರಿಸಿದನು. ಮರುವರ್ಷವೇ (24-3-1982) ರಲ್ಲಿ ಸತತ ತನ್ನ ಸಂಶೋಧನೆಗಳ ಫಲವಾಗಿ ಕ್ಷಯವನ್ನುಂಟು ಮಾಡುವ ರೋಗಾಣುವನ್ನು ಕಂಡುಹಿಡಿದು, ಅದನ್ನು ಬೇರ್ಪಡಿಸುವಲ್ಲಿ ಯಶಸ್ವಿಯಾದನು. ಈ ಸೂಕ್ಷ್ಮಜೀವಿಗೆ ("Tubercle Bacillus") ಟ್ಯೂಬರ್‌ಕಲ್ ಬ್ಯಾಸಿಲಸ್ ಎಂದು ನಾಮಕರಣ ಮಾಡಿದನು. ಈತನ ಸಂಶೋಧನೆ ಜಗಜ್ಜಾಹೀರವಾಗಿ ರಾಬರ್ಟ್ ಕಾಕ್‌ನು ಅಂತರರಾಷ್ಟ್ರೀಯ ವ್ಯಕ್ತಿಯಾದನು. ಮತ್ತು ಬರ್ಲಿನದಲ್ಲಿ ಹೊಸದಾಗಿ ಆರಂಭವಾದ "ಮೈಕ್ರೊಬಾಯೋಲಾಜಿ ಮತ್ತು ಆರೋಗ್ಯ ವಿಜ್ಞಾನ ಸಂಸ್ಥೆಯ ನಿರ್ದೇಶಕನಾಗಿ ನೇಮಿಸಲ್ಪಟ್ಟನು. ಭಾರತವನ್ನು 1886ರಲ್ಲಿ ಸಂದರ್ಶಿಸಿ, ಕಾಲರಾ ಕಾಯಿಲೆಯ ರೋಗಾಣುಗಳನ್ನು ಕಂಡುಹಿಡಿದು ಬೇರ್ಪಡಿಸುವಲ್ಲಿ ಯಶಸ್ವಿಯಾದನು. ಈತನ ಮಹತ್ವದ ವೈದ್ಯಕೀಯ ಸಂಶೋಧನೆಗಳನ್ನು ಮನ್ನಿಸಿ, 1905ರಲ್ಲಿ ಈತನಿಗೆ ನೊಬೆಲ್ ಪಾರಿತೋಷದಿಂದ ಸನ್ಮಾನಿಸಲಾಯಿತು. ತನ್ನ 67ನೇ ವಯಸ್ಸಿನಲ್ಲಿ ಹೃದಯ ಸ್ತಂಭನದಿಂದ 27-5-1910ರಲ್ಲಿ ಇಹಲೋಕ ಯಾತ್ರೆಯನ್ನು ಮುಗಿಸಿದನು.

ಅಂಚೆ ಇಲಾಖೆಯವರು ಅತೀ ಮಹತ್ವದ ಶೋಧದ ಶತಮಾನೋತ್ಸವ ವರ್ಷದಲ್ಲಿ ರಾಬರ್ಟ್ ಕಾಕ್‌ನನ್ನು ನೆನೆಯಲು ತುಂಬಾ ಸುಂದರವಾದ ವಿನ್ಯಾಸದ ಸ್ಟಾಂಪನ್ನು ಹೊರತಂದಿದ್ದಾರೆ. 24-3-1982ರಲ್ಲಿ ಬಿಡುಗಡೆಯಾದ ಅಂಚೆ ಚೀಟಿಯ ವಿನ್ಯಾಸಕಾರರು ಚರಣಜಿತರಾಲ. ಮೊದಲ ದಿನ ಆವರಣದ ವಿನ್ಯಾಸ ಮತ್ತು ಮುದ್ರೆಯ ಹೊಣೆ ಶ್ರೀ ಎ. ರಾಮಚಂದ್ರನ್‌ರದು.

# ವೈದ್ಯಕೀಯ ಮಹಾವಿದ್ಯಾಲಯ ಕಲ್ಕತ್ತಾ : 150 ವರ್ಷಗಳು




ಭಾರತೀಯರಿಗೂ ಯುರೋಪಿನಲ್ಲಿ ಲಭ್ಯವಿರುವ ಅತ್ಯಂತ ಸುಧಾರಿತ ಅಲೋಪೆಥಿಕ್ ವ್ಯವಸ್ಥೆಯ ಲಾಭಗಳು ದೊರಕಲಿ, ಅವರ ಬಾಳು ಸಹ ಹಸನಾಗಿರಲಿ ಮತ್ತು ರೋಗರುಜಿನಗಳಿಂದ ಮುಕ್ತವಾಗಿರಲಿ ಎಂಬ ಘನ ಉದ್ದೇಶದಿಂದ ಆಗಿನ ಭಾರತದ ಗವರ್ನರ್ ಜನರಲ್ ಆಗಿದ್ದ ಲಾರ್ಡ್ ವಿಲಯಂ ಬೆಂಟಿಂಗ್‌ರವರು 1835ರಲ್ಲಿ ಮೆಡಿಕಲ್ ಕಾಲೇಜು, ಬೆಂಗಾಲ ಹೆಸರಿನ ಸಂಸ್ಥೆಯನ್ನು ಸ್ಥಾಪಿಸಿದರು. ಜಾತಿ ಮತ್ತು ಧರ್ಮಗಳ ಭೇದ ಭಾವಗಳನ್ನು ಮರೆತು ಭಾರತೀಯ ಯುವಕರು ವಿಶ್ವವೈದ್ಯರಾಗಬೇಕೆಂಬುದನ್ನು ಲಾರ್ಡ್ ವಿಲಿಯಂ ಬೆಂಟಿಂಗ್‌ರು ಆಶಿಸಿದ್ದರು. ಇದರ ಫಲವೇ ಈ ವೈದ್ಯಕೀಯ ಮಹಾವಿದ್ಯಾಲಯ ಸ್ಥಾಪನೆಗೆ ಕಾರಣವಾಯಿತು.

ಈ ಮೆಡಿಕಲ್ ಕಾಲೇಜು ಸ್ಥಾಪನೆ ಹಿನ್ನೆಲೆಯನ್ನು ಅರಿಯಲು ಹೊರಟಾಗ ಆಗಿನ ದೇಶಿ ವೈದ್ಯರ ಸಮರ್ಪಿತ ಸೇವಾ ಮನೋಭಾವದ ಬಹಳ ದೊಡ್ಡ ಯೋಗದಾನವಿರುವುದು ಕಂಡುಬರುವುದು. ಈ ದೇಶಿವೈದ್ಯರ ಸೇವಾ ಮನೋಭಾವನೆಗಳು, ಶಿಸ್ತು, ವಿಧೇಯತೆ ಮತ್ತು ಕಾರ್ಯತತ್ಪರತೆಗಳನ್ನು ಮನಗಂಡು

ಆಗಿನ ಬ್ರಿಟಿಶ್ ಸರ್ಕಾರ 1824ರಲ್ಲಿ ಈ ದೇಶಿವೈದ್ಯರಿಗೆ ಹೆಚ್ಚಿನ ವೈದ್ಯಕೀಯ ಶಿಕ್ಷಣವನ್ನು ನೀಡುವ ದಿಶೆಯಲ್ಲಿ ವೆರ್ನಾಕ್ಯೂಲರ್ ಮೆಡಿಕಲ್ ಸ್ಕೂಲನ್ನು ಸ್ಥಾಪಿಸಿದರು. ವಿದ್ಯಾರ್ಥಿಗಳ ಕೌಶಲ್ಯತೆ, ಶಿಸ್ತು ಮತ್ತು ಉತ್ಸಾಹಗಳು ಈ ಸ್ಕೂಲನ್ನು ಮೆಡಿಕಲ್ ಕಾಲೇಜಾಗಿ ಪರಿವರ್ತಿಸುವಲ್ಲಿ ಯಶಸ್ವಿಯಾದವು. 1835ರಲ್ಲಿ ಹೊಸ ಮೆಡಿಕಲ್ ಕಾಲೇಜು ಡಾ॥ ಎಮ್.ಎಸ್. ಬ್ರಾಮ್‌ಲೇ ಎಂಬ ಪ್ರಿನ್ಸಿಪಾಲರ ನೇತೃತ್ವದಲ್ಲಿ ಕಾರ್ಯ ಆರಂಭಿಸಿತು. ಪಂಡಿತ ಮಧುಸೂದನ ಗುಪ್ತಾರವರು ಪ್ರೊಫೆಸರ್ ಆಗಿ ಅಧಿಕಾರ ವಹಿಸಿಕೊಂಡರು.

ಐವತ್ತು ವಿದ್ಯಾರ್ಥಿಗಳಿಗೆ ಪ್ರವೇಶದ ಅವಕಾಶವಿತ್ತು. ಪ್ರತಿತಿಂಗಳು ವಿದ್ಯಾರ್ಥಿಗಳಿಗೆ ಸ್ಟೈಪಂಡ್ ರೂಪದಲ್ಲಿ ರೂ. 7 ರಿಂದ 12ರವರೆಗೆ ಕೊಡಲಾಗುತ್ತಿತ್ತು. ಸಾರ್ವಜನಿಕರ ವಂತಿಗೆಯಿಂದ 1910ರವರೆಗೆ ಸಾಕಷ್ಟು ವೈದ್ಯ ಕಾಲೇಜಿನ ಕಟ್ಟಡಗಳು ನಿರ್ಮಾಣವಾದವು.

ವೈದ್ಯಕೀಯ ಕಾಲೇಜಿನ ಶತಮಾನೋತ್ಸವದ ಅಂಗವಾಗಿ 1935ರಲ್ಲಿ ತುರ್ತು ಚಿಕಿತ್ಸೆಯ ವಿಭಾಗದ ಅಡಿಗಲ್ಲು ಸಮಾರಂಭ ಏರ್ಪಟ್ಟಿತ್ತು. ಹೆಚ್ಚಿನ ಶಿಕ್ಷಣ ಮತ್ತು ಸಂಶೋಧನೆಗಳ ಅನುಕೂಲತೆಗಳಿಗಾಗಿ ಈ ಕಾಲೇಜಿನ 150ನೆಯ ವರ್ಷದ ಸಿಹಿ ನೆನಪಿಗಾಗಿ 1984 ರಲ್ಲಿ ಸ್ಮಾರಕ ಭವನದ ಶಿಲಾಶಾಸನ ಇಡಲಾಯಿತು.


ಈ ಕಾಲೇಜು ಕೆಲ ಅದ್ವಿತೀಯ ಕಾರ್ಯಗಳಿಂದ ಇತಿಹಾಸ ಪ್ರಸಿದ್ಧವಾಗಿದೆ. ಪಂಡಿತ ಮಧುಸೂದನ ಗುಪ್ತಾರವರು ನಾಲ್ಕು ವೈದ್ಯಕೀಯ ವಿದ್ಯಾರ್ಥಿಗಳೊಂದಿಗೆ 1836ರಲ್ಲಿ ನಿರ್ಜೀವ ಮಾನವನ ದೇಹದ ವಿಚ್ಛೇದನೆ ಮಾಡುವ (Dissection) ಮೂಲಕ ಅಂಗರಚನಾ ಶಾಸ್ತ್ರದ ಪಾಠಗಳನ್ನು ಆರಂಭಿಸಿದ್ದು, ಮೂಢನಂಬಿಕೆಗಳ ನಾಡಾದ ಭಾರತದಲ್ಲಿ ನಡೆದದ್ದು ಅತಿ ಮುಖ್ಯ ಘಟನೆಯೇ ಸರಿ. ಈ ಕಾಲೇಜಿನಿಂದ ಮೊದಲ ಬಾರಿಗೆ ಐದು ಭಾರತೀಯ ಡಾಕ್ಟರುಗಳು 1838ರಲ್ಲಿ ಹೊರಬಂಧರು. ಡಾ॥ ಬಾಬು ಉಮಾಚರಣ ಸೇಟ ಮೊದಲಿಗನಾಗಿ ಉತ್ತೀರ್ಣರಾದರು. ಬ್ರಿಟಿಷ್ ಸರ್ಕಾರವು ಈ ಕಾಲೇಜನ್ನು 1845ರಲ್ಲಿ ಮಾನ್ಯ ಮಾಡಿದುದರಿಂದ ಪ್ರಥಮ ತಂಡದ ನಾಲ್ಕು ವಿದ್ಯಾರ್ಥಿಗಳನ್ನು ಹೆಚ್ಚಿನ ವಿದ್ಯಾಭ್ಯಾಸಗಳಿಗೆ ಪರದೇಶಗಳಿಗೆ ಕಳುಹಿಸಲಾಯಿತು. ಬಾಬು ಮುತ್ತಿ-ಲಾಲ-ಸೀಲರ ಉದಾರ ದೇಣಿಗೆಯ ಫಲವಾಗಿ 1848ರಲ್ಲಿ ಶೈಕ್ಷಣಿಕ ಆಸ್ಪತ್ರೆಯು ಆರಂಭವಾಯಿತು. ಕಲ್ಕತ್ತಾ ವಿಶ್ವವಿದ್ಯಾಲಯವು ಈ ವೈದ್ಯ ಕಾಲೇಜನ್ನು 1857ರಲ್ಲಿ ಮಾನ್ಯ ಮಾಡಿತು. ಪ್ರಥಮ ವಿದ್ಯಾರ್ಥಿನಿಯಾಗಿ ಕಾದಂಬಿನಿ ಗಂಗೂರಿ 1884ರಲ್ಲಿ ಕಾಲೇಜನ್ನು ಸೇರಿದಳು. ಈ ಕಾಲೇಜಿನಿಂದ ಹೊರಬಂದ ಮಹನೀಯರಲ್ಲಿ ಸರ್. ಎನ್. ಆರ್. ಸರ್ಕಾರ, ಸರ್. ಯು.ಎನ್. ಬ್ರಹ್ಮಚಾರಿ, ಸರ್. ಕೇದಾರನಾಥದಾಸ್. ಸರ್. ಡಾ॥ ಬಿ.ಸಿ. ರಾಯ ಅವರನ್ನು ನೆನಪಿಸಬಹುದು.

ಐವತ್ತು ವಿದ್ಯಾರ್ಥಿ ಮತ್ತು ಇಪ್ಪತ್ತು ಹಾಸಿಗೆಗಳಿಂದ ಆರಂಭವಾದ ಈ ಮೆಡಿಕಲ್ ಕಾಲೇಜಿನಲ್ಲಿ ಸದ್ಯ 750 ವಿದ್ಯಾರ್ಥಿಗಳು ಪದವಿಗಳಿಗಾಗಿ ಹಾಗೂ 100 ವಿದ್ಯಾರ್ಥಿಗಳು ಸ್ನಾತಕೋತ್ತರ ಪದವಿಗಳಿಗಾಗಿ ಓದುತ್ತಿರುವುದು ಈ ಕಾಲೇಜು ಬೆಳೆದು ಬಂದ

ದಾರಿಯನ್ನು ಪರಿಚಯಿಸುವುದು. ಸದ್ಯ 2000 ಒಳರೋಗಿಗಳು ಹಾಗೂ 6000 ಹೊರರೋಗಿಗಳು ದಿನಂಪ್ರತಿ ಅತೀ ಯೋಗ್ಯವಾದ ಚಿಕಿತ್ಸೆಯನ್ನು ಪಡೆಯುತ್ತಿರುವರು.

ಅಂಚೆ ಇಲಾಖೆಯವರು ಬಿಡುಗಡೆ ಮಾಡಿರುವ ಈ ಅಂದವಾದ ಸ್ಟಾಂಪ್‌ನ ವಿನ್ಯಾಸವನ್ನು ನಾಸಿಕದಲ್ಲಿರುವ ಇಂಡಿಯಾ ಸೆಕುರಿಟಿ ಪ್ರೆಸ್‌ನವರು ದಯಪಾಲಿಸಿದ್ದು. ಆವರಣದ ಮೇಲಿರುವ ಮುದ್ರೆಯ ವಿನ್ಯಾಸ ನೇಣು ಬಗ್ಗಾ ಅವರದ್ದು.

# ಮೆಡಿಕಲ್ ಕಾಲೇಜು : ಮದ್ರಾಸ್ -
# 150 ವರ್ಷಗಳು





ಮದ್ರಾಸ್ ಮೆಡಿಕಲ್ ಕಾಲೇಜಿಗೆ ಒಂದು ವಿಶಿಷ್ಟವಾದ ಇತಿಹಾಸವಿದೆ. ಮೊದಲು ಮೆಡಿಕಲ್ ಸ್ಕೂಲು ಇದ್ದುದು ಆನಂತರದ ದಿನಗಳಲ್ಲಿ ಮಹಾವಿದ್ಯಾಲಯವಾಗಿ ಪರಿವರ್ತನೆಗೊಂಡಿದ್ದು, ವೈದ್ಯಕೀಯ ಶಿಕ್ಷಣ ಪ್ರಸಾರದ ಕ್ಷೇತ್ರದಲ್ಲಿ ಅದ್ವಿತೀಯ ಸ್ಥಾನ ಪಡೆದಿದೆ. ಈಸ್ಟ್ ಇಂಡಿಯಾ ಕಂಪನಿಯ ಪ್ರೋತ್ಸಾಹ ಮತ್ತು ಧನಸಹಾಯಗಳು ಈ ಕಾಲೇಜಿನ ಬೆಳವಣಿಗೆಗಳಿಗೆ ಇನ್ನಿಲ್ಲದ ನೆಲೆ ನೀಡಿದವು. ತದನಂತರದ ಸರ್ಕಾರಗಳು ಕೂಡ ಈ ವೈದ್ಯಕೀಯ ಕಾಲೇಜಿನ ಏಳ್ಗೆಗೆ ಸಾಕಷ್ಟು ಸಹಾಯ-ಸಹಕಾರಗಳನ್ನು ಕಾಲ ಕಾಲಕ್ಕೆ ಒದಗಿಸಿದ ಫಲವೇ ಈಗ ದೇಶದಲ್ಲಿಯೇ ಶ್ರೇಷ್ಠ ವೈದ್ಯಕೀಯ ಕಾಲೇಜುಗಳಲ್ಲಿ ಒಂದಾಗಿದೆ. ಆರಂಭದಲ್ಲಿ ಕೇವಲ ಹತ್ತು ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶಗಳನ್ನು ಕಲ್ಪಿಸಿದ ಈ ಕಾಲೇಜು ಈಗ ವರ್ಷವೊಂದಕ್ಕೆ ಒಂದು ನೂರಾ ಎಪ್ಪತ್ತೇಳು ಎಂ.ಬಿ.ಬಿ.ಎಸ್. ವಿದ್ಯಾರ್ಥಿಗಳ ಪ್ರವೇಶಕ್ಕೆ ಅನುವು ಮಾಡಿಕೊಟ್ಟಿದೆ. ಜೊತೆ ಜೊತೆಯಲ್ಲಿಯೇ 500 ಸ್ನಾತಕೋತ್ತರ ವಿದ್ಯಾರ್ಥಿಗಳು ತಮ್ಮ ಜೀವನದ ಕನಸು ನನಸಾಗಲು ಹಗಲಿರುಳು ಅಭ್ಯಾಸದಲ್ಲಿ ನಿರತರಾಗಿರುವರು. ಮದ್ರಾಸ ನಗರ, ತಮಿಳುನಾಡು ಹಾಗೂ ಅದರ ಸುತ್ತಮುತ್ತಲಿನ ರಾಜ್ಯಗಳಿಂದ ದಿನಂಪ್ರತಿ ಆರೈಕೆಗಾಗಿ ಬರುವ ರೋಗಿಗಳಿಗೆ ಕಾಲೇಜಿನ

ಸಿಬ್ಬಂದಿ ವರ್ಗದವರು ಸ್ತುತ್ಯಾರ್ಹ ಸೇವೆಯನ್ನು ಸಲ್ಲಿಸುತ್ತಿರುವುದು ಇದರ ಹೆಗ್ಗಳಿಕೆಯ ಕುರುಹು. ಸುಮಾರು 6000 ಒಳರೋಗಿಗಳ ನಾನಾ ರೋಗಗಳಿಗೆ ಲಭ್ಯವಿರುವ ಉತ್ತಮೋತ್ತಮ ಚಿಕಿತ್ಸೆಗಳಿಗಾಗಿ ಇಲ್ಲಿನ ವೈದ್ಯರು ಹಸಿವು ನೀರಡಿಕೆಗಳನ್ನು ಮರೆತು ಕಾರ್ಯಮಗ್ನರಾಗಿರುವುದೊಂದು ವಿಶೇಷ. ವರ್ಷವೊಂದರಲ್ಲಿ ಸುಮಾರು 25 ಲಕ್ಷ ಹೊರ ರೋಗಿಗಳ ಹಾಗೂ ಒಂದು ಲಕ್ಷ ಒಳರೋಗಿಗಳ ಚಿಕಿತ್ಸೆ ಇಲ್ಲಿ ನಿರಂತರವಾಗಿ ನಡೆಯುತ್ತಿರುವುದು ಒಂದು ಯಜ್ಞಕ್ಕೆ ಹೋಲಿಸಬಹುದಾಗಿದೆ. ಈ ಅಗಾಧವಾದ ಕೆಲಸದಲ್ಲಿ ವಿದ್ಯಾರ್ಥಿಗಳು, ಹಿರಿ–ಕಿರಿಯ ವೈದ್ಯರು ಅಲ್ಲದೇ ಶಿಕ್ಷಕವೃಂದದವರು ಅಪಾರ ಶ್ರದ್ಧೆ ಮತ್ತು ಸೇವಾ ಮನೋಭಾವಗಳಿಂದ ದುಡಿಯುತ್ತಿರುವುದು ನಮ್ಮೆಲ್ಲರ ಸೌಭಾಗ್ಯವೇ ಸರಿ.

ಈ ಕಾಲೇಜಿನ ಏಳ್ಗೆಗಾಗಿ ಶ್ರಮಿಸಿದವರ ಸಂಖ್ಯೆ ಎಣಿಕೆಗೆ ನಿಲುಕದು. ಆದಾಗ್ಯೂ ವಿದೇಶಿ ಮಹಾಪುರುಷರಲ್ಲಿ ಡಾ॥ ಜೇಮ್ಸ್ ಅಂಡರಸನ್, ಡಾ॥ ಜೇಮ್ಸ್ ಅನ್ನೆಸ್ಲಿ ಹಾಗೂ ಲೆ॥ ಕೆ॥ ಡೊನೊವನ್‌ರನ್ನು ನೆನೆಯಲೇಬೇಕು. ಲೆ॥ ಕ॥ ಡೊನೊವನ್‌ನು ಕಾಲಾ ಅಜಾರ್ (Kalazaar) ದ ಕಾರಣವನ್ನು ಈ ಕಾಲೇಜಿನ ವಾರ್ಡುಗಳಲ್ಲಿಯೇ ಕಂಡುಹಿಡಿದನು. ಇದು ಆತನ ಮಹತ್ತರವಾದ ಸಾಧನೆಯಾಗಿದೆ. ಸ್ವದೇಶಿ ವೈದ್ಯ ಮಹನೀಯರಲ್ಲಿ ಡಾ॥ ಗುರುಸ್ವಾಮಿ ಮೂದಲಿಯಾರ, ಕರ್ನಲ್ ಪಾಂಡಲಾಯ, ಸರ್. ಎ.ಎಲ್. ಮೂದಲಿಯಾರ ಹಾಗೂ ಡಾ॥ ಎಸ್. ರಂಗಾಚಾರಿ ಇವರನ್ನು ಹೆಸರಿಸಲೇಬೇಕು. ಸದ್ಯ 52 ವಿಶೇಷತಜ್ಞರು, 170 ಪ್ರಾಧ್ಯಾಪಕರು 600 ಹಿರಿ–ಕಿರಿಯ ವೈದ್ಯರು, 1400 ಪದವಿ ಪೂರ್ವ ವಿದ್ಯಾರ್ಥಿಗಳು ಹಾಗೂ 1000 ಸ್ನಾತಕೋತ್ತರ ವಿದ್ಯಾರ್ಥಿಗಳ ತಂಡವೇ ಆಸ್ಪತ್ರೆಗೆ ಬರುವ ರೋಗಿಗಳ ಸೇವೆಗೆ ಸಜ್ಜಾಗಿರುವುದು. ಸದ್ಯಕ್ಕಂತೂ ಎಲ್ಲ ಅತ್ಯಾಧುನಿಕ ಸೌಕರ್ಯಗಳು ಆಸ್ಪತ್ರೆಯಲ್ಲಿ ಲಭ್ಯವಿದ್ದು, ಹೊಸ ಹೊಸ ಸೌಲಭ್ಯಗಳನ್ನು ಬರಮಾಡಿಕೊಳ್ಳುವಲ್ಲಿ ಸರ್ಕಾರವು ಹಿಂದೆ ಬಿದ್ದಿಲ್ಲದಿರುವುದು ನಾವೆಲ್ಲರೂ ಹೆಮ್ಮೆ ಪಡುವಂತಹ ಸಂಗತಿಯೇ.

ಮದ್ರಾಸ ಮೆಡಿಕಲ್ ಕಾಲೇಜಿನ 150ನೇ ವರ್ಷದ ಸಮಾರಂಭದ ನೆನಪಿಗಾಗಿ ಭಾರತೀಯ ಅಂಚೆ ಇಲಾಖೆಯವರು ಹೊರತಂದಿರುವ ಅಂಚೆಚೀಟಿಯಲ್ಲಿ ಕಾಲೇಜಿನ ಪಾರ್ಶ್ವ ಭಾಗವನ್ನು ಕಾಣಬಹುದು. ಅಂಚೆ ಚೀಟಿ ವಿನ್ಯಾಸದ ಹೊಣೆ ಹೊತ್ತವರು ಇಂಡಿಯಾ ಸೆಕುರಿಟಿ ಪ್ರೆಸ್ಸಿನವರು ಮೊದಲ ದಿನದ ಮುದ್ರೆ ಮತ್ತು ಆವರಣಗಳ ವಿನ್ಯಾಸಕಾರರು ಶ್ರೀನೆನುಬಗ್ಗಾ ಸ್ಟಾಂಪಿನ ಬಿಡುಗಡೆಯಾದದ್ದು 6–3–1985ರಂದು.

# ಸೇಂಟ್ ಸ್ಟೀಫನ್ಸ್ ಆಸ್ಪತ್ರೆ, ದೆಹಲಿ
# ಶತಮಾನೋತ್ಸವ : 1985




ದೆಹಲಿಯ ಸುತ್ತಮುತ್ತಲಿನ ವಿಶೇಷವಾಗಿ ಮಕ್ಕಳ ಮತ್ತು ಸ್ತ್ರೀಯರ ಆರೋಗ್ಯ ಸಮಸ್ಯೆಗಳ ಪರಿಹಾರಕ್ಕಾಗಿ 1885ರ ಅಕ್ಟೋಬರ 31ರಂದು ಸೇಂಟ್ ಸ್ಟೀಫನ್ ಅವರ ಆಸ್ಪತ್ರೆ ಆರಂಭವಾಯಿತು. ವೈದ್ಯ ಕ್ಷೇತ್ರಕ್ಕೆ ಯಾವ ರೀತಿಯಿಂದಲೂ ಸಂಬಂಧವಿರದ, ಸಮಾಜ ಸೇವಕಿಯಾದ ಮಿಸೆಸ್ ಪ್ರಿಸ್ಸಿಲ್ಲಾ ವಿಂಟರ (Mrs. Priscilla Winter) ಅವರ ಕನಸಿನ ಕೂಸೇ ಈ ಆಸ್ಪತ್ರೆ. ಆಸ್ಪತ್ರೆಯ ದಿನನಿತ್ಯದ ಚಟುವಟಿಕೆ ಮತ್ತು ಬೆಳವಣಿಗೆಗಳಲ್ಲಿ ಸಮಾಜ ಸೇವಿಕೆಯರ ಹಾಗೂ ಕ್ರಿಶ್ಚಿಯನ್ ಸಂನ್ಯಾಸಿನಿಯರ ಪಾತ್ರ ತುಂಬಾ ಹಿರಿದಾದುದು. ಯಮುನಾ ನದಿಯ ದಡದಲ್ಲಿ ತನ್ನ ಕಾರ್ಯವನ್ನು ಆರಂಭಿಸಿದ ಈ ಸಂಸ್ಥೆ 1874ರಲ್ಲಿ ಔಷಧಾಲಯವಾಗಿ ಪರಿವರ್ತನೆ ಹೊಂದಿತು. 1885ರ ಸುಮಾರಿಗೆ, ದಾನಿಗಳ ಹೃತ್ಪೂರ್ವಕ ಸಹಾಯದ ಫಲದಿಂದ 40 ಹಾಸಿಗೆಗಳ, ಮಕ್ಕಳ ಹಾಗೂ ಸ್ತ್ರೀಯರ ಆಸ್ಪತ್ರೆಯ ರೂಪದಲ್ಲಿ ಚಾಂದನಿ ಚೌಕನಲ್ಲಿ ತನ್ನ ಸೇವೆಯನ್ನು ಆರಂಭಿಸಿತು. 1909ರಲ್ಲಿ 100 ಹಾಸಿಗೆಗಳಿಗೆ ತನ್ನ ಸೌಲಭ್ಯಗಳನ್ನು ವಿಸ್ತರಿಸುವಲ್ಲಿ ಗೆಲುವು ಕಂಡಿತು. 1976ರಲ್ಲಿ 375 ಹಾಸಿಗೆಗಳ ಸಾರ್ವಜನಿಕ ಆಸ್ಪತ್ರೆಯ ರೂಪವನ್ನು ತಳೆದು, ಸದ್ಯ 450 ಒಳರೋಗಿಗಳ ಶುಶ್ರೂಷೆಗಾಗಿ ಎಲ್ಲ ತರದ ಸೌಲಭ್ಯಗಳನ್ನು ಹೊಂದಿದ್ದು ಜನರ ಅಪಾರ ಮೆಚ್ಚುಗೆಗೆ ಪಾತ್ರವಾಗಿದೆ.


ಸೇಂಟ್ ಸ್ಟೀಫನ್ ಆಸ್ಪತ್ರೆ ಸ್ತ್ರೀಯರ ಮೊದಲ ಆಸ್ಪತ್ರೆಯೆಂಬ ಹೆಗ್ಗಳಿಕೆಗೆ ಪಾತ್ರವಾಗಿತ್ತು. ಸ್ತ್ರೀಯರ ಆರೋಗ್ಯ ರಕ್ಷಣೆಯ ಹೊಣೆ ಹೊತ್ತಿದ್ದ ಆಸ್ಪತ್ರೆ ಆನಂತರದ ದಿನಗಳಲ್ಲಿ ಮಕ್ಕಳ ಮತ್ತು ಗರ್ಭಿಣಿ ಸ್ತ್ರೀಯರ ಆರೈಕೆಗಳತ್ತ ಪ್ರಥಮ ಪ್ರಾಶಸ್ತ್ಯ ನೀಡಿ ಸ್ತ್ರೀ ಸಮುದಾಯದ ವಿಶ್ವಾಸ ಗಳಿಸಿತು. ಮೊದಲ ಪ್ರಸವೋತ್ತರ ಕೇಂದ್ರವೆಂದು ಸರ್ಕಾರದ ಮಾನ್ಯತೆ ಪಡೆದ ಆಸ್ಪತ್ರೆಯು ದಾದಿಯರ ತರಬೇತಿ ಕೇಂದ್ರವನ್ನು ಸಹ ಮೊಟ್ಟಮೊದಲಿಗೆ ಆರಂಭಿಸುವಲ್ಲಿ ಯಶಸ್ವಿಯಾಯಿತು. ಸೇವಾಮನೋಭಾವನೆ ಮತ್ತು ಅನುಕಂಪಗಳಿಗೆ ಒಂದು ಹೊಸ ಅರ್ಥ ನೀಡಿದ ಈ ಸಂಸ್ಥೆ ರೋಗಿಗಳ ವೈಯಕ್ತಿಕ ಕಾಳಜಿಗಳತ್ತ ಗಮನಹರಿಸಿದ್ದನ್ನು ಈ ಆಸ್ಪತ್ರೆಯ ಇತಿಹಾಸದುದ್ದಕ್ಕೂ ಕಾಣಬಹುದಾಗಿದೆ.

ಆಸ್ಪತ್ರೆಯ ಆಡಳಿತ ಮಂಡಳಿಯು ಮುಕ್ಕಾಲು ಭಾಗ ಹಾಸಿಗೆಗಳನ್ನು ಬಡವರಿಗಾಗಿಯೇ ಕಾಯ್ದಿರಿಸಿದೆ. ಹಾಗೂ ಬಡವರಿಗೆ ಸಹಾಯಧನದ (Subsidy) ಪ್ರಯೋಜನಗಳನ್ನು ಕಲ್ಪಿಸಲಾಗಿದೆ. ತೀರಾ ಬಡವರಿಗೆ ಹಾಗೂ ಸಮಾಜದ ಹಿಂದುಳಿದ ವರ್ಗದವರಿಗೆ ಪುಕ್ಕಟೆ ಔಷದೋಪಚಾರಗಳ ವಿಶೇಷ ಸವಲತ್ತುಗಳನ್ನು ಕಲ್ಪಿಸಿದೆ. ಆಸ್ಪತ್ರೆಯ ಸಮುದಾಯ ಶಾಸ್ತ್ರ ವಿಭಾಗವು ಜನಪರ ಆರೋಗ್ಯ ಕಾರ್ಯಕ್ರಮಗಳಾದ ಕುಟುಂಬಯೋಜನೆ, ವೃದ್ಧರ ಸಮಸ್ಯೆಗಳ ಪರಿಹಾರ, ಸಾಂಕ್ರಾಮಿಕ ರೋಗಗಳ ಬಗ್ಗೆ ಸಾರ್ವಜನಿಕರಲ್ಲಿ ತಿಳುವಳಿಕೆ ಮೂಡಿಸುವಿಕೆ ಮತ್ತು ಲಸಿಕೆ ನೀಡುವ ಕಾರ್ಯಕ್ರಮದಂತಹ ಚಟುವಟಿಕೆಗಳಲ್ಲಿ ಸಾಕಷ್ಟು ಪ್ರಗತಿ ಸಾಧಿಸಿರುತ್ತದೆ. ಆಸ್ಪತ್ರೆಯ ಮೂಲ ಧ್ಯೇಯ : "ಸೇವೆಯಲ್ಲಿ ಪ್ರೀತಿಯನ್ನು ಕಾಣು" (In Love serve one another).

ಸೇಂಟ್ ಸ್ಟೀಫನ್ ಆಸ್ಪತ್ರೆಯ ಶತಮಾನೋತ್ಸವದ ಅಂಗವಾಗಿ ಪ್ರಧಾನಿ ಶ್ರೀಮತಿ ಇಂದಿರಾಗಾಂಧಿಯವರು "ಸೇಂಟ್ ಸ್ಟೀಫನ್ ಆಸ್ಪತ್ರೆ ಜನರಲ್ಲಿ ಹಾಸುಹೊಕ್ಕಾಗಿದೆ. ಅದು ಜನರ ಸುಖದುಃಗಳೆರಡನ್ನು ಸಮನಾಗಿ ಹಂಚಿಕೊಂಡಿದೆ. ಮಕ್ಕಳ ಮತ್ತು ಸ್ತ್ರೀಯರ ಆರೋಗ್ಯದ ಚಿಂತನೆಯ ಜೊತೆ ಜೊತೆಯಲ್ಲಿಯೇ ಸಮಾಜದ ಹಿಂದುಳಿದ ವರ್ಗದವರಿಗೂ ಆರೋಗ್ಯ ಭಾಗ್ಯ ಲಭಿಸುವಂತೆ ಕಾರ್ಯ ನಿರ್ವಹಿಸುತ್ತಿರುವುದು ಉಲ್ಲೇಖನೀಯ. ಬಡವರ ಆರೋಗ್ಯ ಸಂಬಂಧಿ ವಿಷಯಗಳಲ್ಲಿ ಅದು ಹಮ್ಮಿಕೊಂಡಿರುವ ಸಾಮಾಜಿಕ ಸುಧಾರಣಾ ಕಾರ್ಯಕ್ರಮಗಳು ಸಮಾಜದಲ್ಲಿ ಅದಕ್ಕೊಂದು ಅತಿ ವಿಶಿಷ್ಟವಾದ ಸ್ಥಾನವನ್ನು ನೀಡಿದೆ" ಎಂದು ತಮ್ಮ ಅಭಿನಂದನಾ ಪತ್ರದಲ್ಲಿ ಬರೆದು ತಿಳಿಸಿದ್ದರು.

ಭಾರತ ಸರ್ಕಾರದ ಅಂಚೆ ಇಲಾಖೆ ಈ ಶತಮಾನೋತ್ಸವದ ನೆನಪಿಗೆ ವಿಶೇಷ ಮೆರಗು ಕೊಡುವ ದೃಷ್ಟಿಯಿಂದ ಎರಡು ವರ್ಣಗಳ ಒಂದು ರೂಪಾಯಿ ಬೆಲೆಯ ಸ್ಟಾಂಪನ್ನು 25–11–1985ರಂದು ಬಿಡುಗಡೆ ಮಾಡಿದೆ. ಸ್ಟಾಂಪಿನ ವಿನ್ಯಾಸದ ಹೊಣೆ ಇಂಡಿಯಾ ಸೆಕ್ಯುರಿಟಿ ಪ್ರೆಸ್, ನಾಸಿಕ ಅವರದು. ಪ್ರಥಮ ದಿನ ಆವರಣದ ವಿನ್ಯಾಸ ಮತ್ತು ವಿಶೇಷ ಮುದ್ರೆಯ ವಿನ್ಯಾಸಕಾರರು ಶ್ರೀನೇನು ಬಗ್ಗಾ ಅವರು.

# ಸೇಂಟ್ ಮಾರ್ಥಾಸ್ ಹಾಸ್ಪಿಟಲ್ :
# ಬೆಂಗಳೂರು 100 ವರ್ಷಗಳ ಅವಿರತ ಸೇವೆ




ಗುಡ್ ಶೆಪರ್ಡ್ ಸಹೋದರಿಯರು ಕ್ರಿಶ್ಚಿಯನ್ ಸಂನ್ಯಾಸಿನಿಯರಾಗಿ 1854ರಲ್ಲಿ ಬೆಂಗಳೂರಿಗೆ ಬಂದ ತಕ್ಷಣವೇ ತಮ್ಮನ್ನು ತಾವು ಸಾಮಾಜಿಕ, ಶೈಕ್ಷಣಿಕ ಮತ್ತು ದೀನ ದಲಿತರ ಸೇವೆಗಾಗಿ ಸಮರ್ಪಿಸಿಕೊಂಡರು. ನೈಸರ್ಗಿಕ ಅನಾಹುತಗಳಲ್ಲಿ ಒಂದಾದ ಭೀಕರ ಬರಗಾಲದ ಪರಿಣಾಮವಾಗಿ ಸಂಪೂರ್ಣ ಕರ್ನಾಟಕ ಪ್ರಾಂತವು ಪ್ಲೇಗ್ ಹಾವಳಿಯಿಂದ ತಲ್ಲಣಿಸಿಬಿಟ್ಟಿತು. ಗುಡ್ ಶೆಪರ್ಡ್ ಸಹೋದರಿಯರು ತಮ್ಮ ಸಮಾಜದ ಕಟ್ಟುನಿಟ್ಟುಳೆಗಳನ್ನು ಬದಿಗೊತ್ತಿ ಪ್ಲೇಗ ಪೀಡಿತರ ಶುಶ್ರೂಷೆಗಾಗಿ ಬೆಂಗಳೂರು ಮತ್ತು ಅದರ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಹಗಲು ರಾತ್ರಿಗಳನ್ನೆದೇ ಸೇವೆ ಸಲ್ಲಿಸಿದರು. ಆ ಕಾಲಕ್ಕೆ ಬೆಂಗಳೂರಿನಲ್ಲಾಗಲಿ ಅದರ ಸುತ್ತಮುತ್ತಲಿನ ಪ್ರದೇಶಗಳಲ್ಲಾಗಲಿ ಸಾರ್ವಜನಿಕ ಆಸ್ಪತ್ರೆಗಳಿರಲಿಲ್ಲ. ಹಾಗಾಗಿ ರೋಗಪೀಡಿತರನ್ನು, ಜರ್ಜರಿತರಾದವರನ್ನು ಸಹ ಮನೆಯಲ್ಲಿಯೇ ಉಪಚರಿಸಬೇಕಾಗುತ್ತಿತ್ತು. ಇಲ್ಲವೇ ಸರ್ಕಾರಿ ವೈದ್ಯಕೀಯ ಕ್ಯಾಂಪುಗಳಿಗೆ ಸಾಗಿಸ ಬೇಕಾಗುತ್ತಿತ್ತು.

ಬೆಂಗಳೂರಿನ ವಿಸ್ತಾರ ಪ್ರದೇಶಕ್ಕೆ ಆಸ್ಪತ್ರೆಯ ಅವಶ್ಯಕತೆ ದಿನೇ ದಿನೇ ಹೆಚ್ಚುತ್ತಾ ಹೋದಂತೆ ಗುಡ್ ಶೆಪರ್ಡ್ ಸಹೋದರಿಯರ ಮಹಾಮಾತೆಯಾದ ಮದರ್

ವಿಜಿಟೇಶನ್ ಲೋಶ್ ಅವರ ಮನಸ್ಸು ಆಸ್ಪತ್ರೆಯ ಕನಸು ಕಾಣಹತ್ತಿತು. ಸರ್ಕಾರ ಮತ್ತು ಕ್ರಿಶ್ಚಿಯನ್ ಸಮಾಜದ ಮಹನೀಯರು ಮಹಾಮಾತೆಯ ಕನಸು ನನಸಾಗಲು ಸರ್ವಸಿದ್ಧತೆಗಳನ್ನು ಮಾಡತೊಡಗಿದರು. ಸಾರ್ವಜನಿಕರು ಇವರೆಲ್ಲರ ನಿಸ್ವಾರ್ಥ ಸೇವಾ ಮನೋಭಾವಗಳನ್ನು ಮನಗಂಡು ನೋಡು ನೋಡುವಷ್ಟರಲ್ಲಿ ಹದಿಮೂರು ಸಾವಿರ ರೂಪಾಯಿಗಳನ್ನು ದೇಣಿಗೆಯ ರೂಪದಲ್ಲಿ ಸಂಗ್ರಹಿಸಿ ಆಸ್ಪತ್ರೆಯ ಕಟ್ಟಡಗಳ ಶಂಕುಸ್ಥಾಪನೆಗೆ ಕಾರಣೀಭೂತರಾದರು. ಆಗಿನ ಕಾಲಕ್ಕೆ ಅಂದರೆ ಸುಮಾರು 125 ವರ್ಷಗಳ ಹಿಂದೆ ಆ ಹಣಕ್ಕೆ ಕೋಟಿ ಕೋಟಿ ಬೆಲೆಯೆಂದರೂ ಕಡಿಮೆಯೇ.


ಸಾರ್ವಜನಿಕರ ಉದಾರ ದೇಣಿಗೆ ಹಾಗೂ ಕ್ರಿಶ್ಚಿಯನ್ ಮಿಶನರಿಗಳ ಉದಾತ್ತ ಸೇವಾ ಮನೋಭಾವನೆಗಳು ಮೇಳೈಸಿಕೊಂಡುದರ ಫಲವಾಗಿ 1886ರ ಜನವರಿ 1ರಂದು ಸೇಂಟ್ ಮಾರ್ಥಾಸ್ ಆಸ್ಪತ್ರೆಯ ಹೊರರೋಗಿಗಳ ವಿಭಾಗ ವಿಶೇಷವಾಗಿ ಸಾರ್ವಜನಿಕರ ಉಪಯೋಗಕ್ಕಾಗಿ ತೆರೆಯಲಾಯಿತು. ಮತ್ತು ತೀರಾ ಬಳಲಿದ ರೋಗಿಗಳನ್ನು ಆಸ್ಪತ್ರೆಗೆ ದಾಖಲು ಮಾಡಲು ಅಲ್ಲಿ 50 ಒಳರೋಗಿಗಳ ತುರ್ತುಚಿಕಿತ್ಸೆಗಳಿಗಾಗಿ ವ್ಯವಸ್ಥೆಗಳನ್ನು ಮಾಡಲಾಯಿತು.

ನಿಧಾನವಾಗಿ ಆಸ್ಪತ್ರೆಯ ಕೀರ್ತಿ ನಾಡಿನಲ್ಲೆಲ್ಲಾ ಹಬ್ಬಿ ಜನರು ತಂಡೋಪತಂಡವಾಗಿ ನಾನಾ ತರದ ಕಾಯಿಲೆಗಳ ಚಿಕಿತ್ಸೆಗಳಿಗಾಗಿ ಸೇಂಟ್ ಮಾರ್ಥಾಸ ಆಸ್ಪತ್ರೆಯ ಮೊರೆ ಹೋಗಹತ್ತಿದರು. ಹೆಚ್ಚಿದ ಒಳರೋಗಿಗಳಿಗೆ ಸಾಕಷ್ಟು ಸ್ಥಳಾವಕಾಶಗಳನ್ನು ಕಲ್ಪಿಸುವ ನಿಟ್ಟಿನಲ್ಲಿ ಗೋಥಿಕ್ ಕಟ್ಟಡವನ್ನು ಆಸ್ಪತ್ರೆಯ ಅಂಗವಾಗಿ ರೂಪಾಂತರರಸಬೇಕಾಯಿತು. ಹಂತಹಂತವಾಗಿ ವಿಸ್ತಾರಗೊಳ್ಳುತ್ತ ಹೋದ ಈ ಆಸ್ಪತ್ರೆ 1929ರಲ್ಲಿ ತನ್ನದೇ ಆದ ದಂತಚಿಕಿತ್ಸಾಲಯ, ನೇತ್ರಚಿಕಿತ್ಸಾಲಯ ಮತ್ತು ಆಪರೇಶನ್ ಥಿಟೇಯರಗಳನ್ನು ಆರಂಭಿಸುವಲ್ಲಿ ಯಶಸ್ವಿಯಾಯಿತು. ಆಸ್ಪತ್ರೆಯ ಆವರಣದಲ್ಲಿಯೇ ದಾದಿಯರ ತರಬೇತಿ ಕೇಂದ್ರವನ್ನು 12 ವಿದ್ಯಾರ್ಥಿಗಳೊಂದಿಗೆ 1933ರಲ್ಲಿ ಆರಂಭಿಸಲಾಯಿತು. ಈ ಆಸ್ಪತ್ರೆಗೆ ಅತೀ ದೊಡ್ಡದಾದ ಮತ್ತು ಚೊಕ್ಕಟವಾದ ಚಿಕ್ಕಮಕ್ಕಳ ಸುಸಜ್ಜಿತ ವಾರ್ಡ್‌ವೊಂದನ್ನು 1953ರಲ್ಲಿ, ಬಾಣಂತನ ಕೇಂದ್ರವನ್ನು 1955ರಲ್ಲಿ ಸೇರ್ಪಡಿಸಲಾಯಿತು. ರೋಗಿಗಳ ಹೆಚ್ಚಿನ ತಪಾಸಣೆಗಾಗಿ 'ಕ್ಷ' ಕಿರಣ ಯಂತ್ರಗಳು 1958ರಲ್ಲಿ ಇ.ಸಿ.ಜಿ. ಮತ್ತು ಸುಲಭವಾಗಿ ಸಾಗಿಸುವಂತಹ 'ಕ್ಷ' ಕಿರಣ ಯಂತ್ರಗಳು 1961ರಲ್ಲಿ ಕಾರ್ಯಾರಂಭ ಮಾಡಿದವು.

ಚರ್ಚ್ ಸಮುದಾಯದವರು ಈ ಹಾಸ್ಪಿಟಲನ್ನು ಸೇಂಟ್ ಜಾನ್ಸ್ ಕೆಥೋಲಿಕ್ ವೈದ್ಯಕೀಯ ಮಹಾವಿದ್ಯಾಲಯದ ವೈದ್ಯ ವಿದ್ಯಾರ್ಥಿಗಳ ಕ್ಲಿನಿಕಲ್ ತರಬೇತಿಗಾಗಿ ಉಪಯೋಗಿಸಿಕೊಳ್ಳಲು ಆಗಿನ ಮಹಾಮಾತೆ ಒಪ್ಪಿಕೊಂಡ ಪರಿಣಾಮವಾಗಿ ಆಸ್ಪತ್ರೆ ಸರ್ವ ವಿಧದಲ್ಲಿಯೂ ಅಗಾಧವಾಗಿ ಮೈದಾಳಿ ನಿಂತಿದೆ. ಜಗತ್ತಿನಲ್ಲಿ ಸದ್ಯ ಲಭ್ಯವಿರುವ ಎಲ್ಲ ಹೈಟೆಕ್ ಸೌಲಭ್ಯಗಳು ಒಂದೇ ಸೂರಿನಡಿಯಲ್ಲಿ ಲಭ್ಯವಾಗಿವೆ. ಆಸ್ಪತ್ರೆಯ ಆವರಣದಲ್ಲಿ

ಆರು ಬೇರೆ ಬೇರೆ ತರಬೇತಿ ಕೇಂದ್ರಗಳು ಕೆಲಸ ಮಾಡುತ್ತಿವೆ. ಈ ಮಹಾನ್ ಸಂಸ್ಥೆಯ ನೂರು ವರ್ಷ ತುಂಬಿದ ಸಂದರ್ಭದಲ್ಲಿ ಭಾರತ ಸರ್ಕಾರವು ಒಂದು ನೆನಪಿನ ಅಂಚೆ ಚೀಟಿಯನ್ನು ಬಿಡುಗಡೆ ಮಾಡುವ ಮೂಲಕ ಗೌರವಿಸಿತು. ಸ್ಟಾಂಪಿನ ವಿನ್ಯಾಸಕಾರರು: ಇಂಡಿಯಾ ಸೆಕ್ಯೂರಿಟಿ ಪ್ರೆಸ್ ನಾಸಿಕ ಸುಂದರವಾದ ಮುದ್ರೆ ಮತ್ತು ಪ್ರಥಮ ದಿನದ ಆವರಣದ ವಿನ್ಯಾಸಕಾರರು : ಮಿಸ್. ನೇನು ಬಗ್ಗಾ. ಸ್ಟಾಂಪಿನ ಬಿಡುಗಡೆ : 30–12–1986.

# ನೇತ್ರದಾನ ಮತ್ತು ದೃಷ್ಟಿಹೀನರ ಸೇವೆಯ 100 ವರ್ಷಗಳು




ನೇತ್ರದಾನ ಮತ್ತು ಕುರುಡರಿಗೆ ನೀಡಲಾಗುತ್ತಿರುವ ಸೇವೆಯ 100 ವರ್ಷಗಳ ನೆನಪಿಗಾಗಿ 15-10-1987ರಲ್ಲಿ ಎರಡು ವಿವಿಧ ಬಣ್ಣಗಳ ಅಂಚೆ ಚೀಟಿಗಳನ್ನು ಹೊರತರಲಾಗಿದೆ. ಅಂಚೆ ಇಲಾಖೆಯ ಈ ಸೇವಾ ಮನೋಭಾವನೆ ಮುಂದುವರೆಯಲಿ ಎಂದು ಹಾರೈಸಿಸೋಣ. ಅಂಚೆಚೀಟಿಯ ವಿನ್ಯಾಸ: ಶ್ರೀ ಚೈತನ್ಯ ಜೋಶಿ (ನೇತ್ರದಾನ) ಮತ್ತು ಶ್ರೀ ಸಿ.ಎಂ. ಪರದೇಶಿ (ದೃಷ್ಟಿಹೀನರಿಗೆ ನೀಡಲಾಗುತ್ತಿರುವ ಸೇವೆಯ 100 ವರ್ಷಗಳು). ಪ್ರಥಮ ದಿನ ಲಕೋಟೆಯ ವಿನ್ಯಾಸ : ಶ್ರೀಮತಿ ಅಲ್ಕಾ ಶರ್ಮಾ ಮತ್ತು ಕ್ಯಾನ್ಸಲೇಶನ್‌ದ ರೂವಾರಿ ಮಿಸ್. ನೇನು ಬಗ್ಗಾ. ಒಂದೆಡೆ ಮಾನವನು ತನ್ನ ಅಜ್ಞಾನದಿಂದ ಅಂಧಕಾರದಲ್ಲಿ ಮುಳುಗಿ “ಕಣ್ಣಿದ್ದೂ ಕುರುಡ”ನಾಗಿದ್ದರೆ, ಇನ್ನೊಂದೆಡೆ ವಾಸ್ತವಿಕವಾಗಿ, ದೃಷ್ಟಿಹೀನತೆಯಿಂದ ಕುರುಡರಾಗಿ ಬಳಲುತ್ತಿರುವವರ ಪ್ರಪಂಚವೂ ಅಷ್ಟೇ ಅಗಾಧವೂ ಅಂಧಕಾರಮಯವೂ ಆಗಿದೆ. ಪ್ರಪಂಚದ ಪ್ರತಿಶತ 25ರಷ್ಟು ಅಂಧರು ಭಾರತದಲ್ಲಿರುವುದು ಅತ್ಯಂತ ಶೋಚನೀಯ ವಿಷಯವೇ ಸರಿ.

ಅಪೌಷ್ಟಿಕತೆ ಮತ್ತು ಆರೋಗ್ಯ ಪಾಲನೆಗಳ ಬಗ್ಗೆ ನಮ್ಮ ಜನರಲ್ಲಿ ನೆಲೆಯೂರಿರುವ ಅಸಡ್ಡೆ, ಅಜ್ಞಾನಗಳೇ ಕುರುಡುತನಕ್ಕೆ ಪ್ರಮುಖ ಕಾರಣಗಳೆಂದರೆ ತಪ್ಪಾಗಲಾರದು. ಪ್ರತಿನಿತ್ಯ ಕೆಲವು ಸರಳ ಕ್ರಮಗಳನ್ನು ಕೈಕೊಳ್ಳುವುದರಿಂದ ಉದಾಹರಣೆಗೆ ಜೀವನಸತ್ವ 'A'ಯುಕ್ತ ಆಹಾರ ಸೇವನೆಯಿಂದ ಬಹಳಷ್ಟು ಮಟ್ಟಿಗೆ ಅಂಧತ್ವವನ್ನು ತಡೆಗಟ್ಟಬಹುದು. ಆಹಾರದಲ್ಲಿ 'ಎ' ಅನ್ನಾಂಗದ ಕೊರತೆ ಟ್ರಾಕೋಮಾದಂತಹ ಸಾಂಕ್ರಾಮಿಕ ಕಾಯಿಲೆಗಳು ಮತ್ತು ಅಪಘಾತಗಳು ಇವೇ ಭಾರತದಲ್ಲಿ ಕುರುಡುತನಕ್ಕೆ ಪ್ರಮುಖ ಕಾರಣಗಳಾಗಿವೆ. ಇಲ್ಲಿ ಒಂದು ಆಶಾದಾಯಕ ವಿಷಯವೇನೆಂದರೆ ಈ ಎಲ್ಲಾ ಕಾರಣಗಳಿಂದ ಉಂಟಾಗುವ ಅಂಧತ್ವವನ್ನು ಆರೋಗ್ಯ ಪೋಷಣೆಯಿಂದ ತಡೆಗಟ್ಟಲು ಸಾಧ್ಯ. ವೃದ್ಧಾಪ್ಯದಲ್ಲಿ ಅಂಧತ್ವಕ್ಕೆ ಮೂಲ ಕಾರಣವಾದ 'ಪೊರೆ' (Cataract) ಸಮಸ್ಯೆಗೆ ಮಸೂರವನ್ನು ತೆಗೆದು ನಡೆಸುವ ಸರಳ ಶಸ್ತ್ರಚಿಕಿತ್ಸೆ ವೃದ್ಧರಿಗೆ ವರದಾನವಾಗಿದೆ. ಇದೇ ರೀತಿ ಕಾರ್ನಿಯಾ (Cornea) ದ ದೋಷದಿಂದಾಗಿ ದೃಷ್ಟಿ ಕಳೆದುಕೊಂಡವರಿಗೆ ದಾನಿಗಳಿಂದ ಪಡೆದ ಕಾರ್ನಿಯಾ ಕೂರಿಸಿ ಅವರನ್ನು ಅಂಧತ್ವದಿಂದ ಪಾರು ಮಾಡಬಹುದು. ಇಂತಹ ಸರಳ, ಸುರಕ್ಷಿತ ಶಸ್ತ್ರಕ್ರಿಯೆಗೆ ಬೇಕಾಗುವ ಕಾರ್ನಿಯಾಗಳಿಗೆ ನೇತ್ರದಾನಿಗಳು ಹಾಗೂ ನೇತ್ರ ಬ್ಯಾಂಕುಗಳು ಸಂದಿಸುವ ಅವಶ್ಯಕತೆಯಿದೆ. ಒಬ್ಬ ಮೃತ ನೇತ್ರದಾನಿಯು ಇಬ್ಬರು ಅಂಧರ ಬಾಳಿಗೆ ಬೆಳಕಾಗಬಲ್ಲನು. ನೇತ್ರದಾನವೆಂದರೆ ಸಂಪೂರ್ಣವಾಗಿ ಕಣ್ಣನ್ನು ಬೇರ್ಪಡಸದೇ ಕೇವಲ ಕಾರ್ನಿಯಾ ಎಂಬ ಒಂದೇ ಒಂದು ಪದರನ್ನು ಹೊರತೆಗೆಯಲಾಗುತ್ತದೆ ಎಂಬ ಸತ್ಯವನ್ನು ಪ್ರತಿಯೊಬ್ಬರೂ ಇಂದು ಅರಿಯಬೇಕಾಗಿದೆ.

ದಾನಗಳಲ್ಲಿಯೇ ಅತೀ ಶ್ರೇಷ್ಠವಾದ ದಾನ ನೇತ್ರದಾನವೆಂದು ಹೇಳಲಾಗುತ್ತದೆ. ಆದರೆ ಇಂತಹ ಪರಮೋನ್ನತವಾದ ದಾನಕ್ಕೆ ನಮ್ಮವರು ಮುಂದೆ ಬಾರದೇ ಇರುವುದೇ ಇಂದಿನ ಸಮಸ್ಯೆಗೆ ಮೂಲ ಕಾರಣ. ನಾವು ನೇತ್ರದಾನದಲ್ಲಿ ಮುಂಚೂಣಿಯಲ್ಲಿರುವ ಶ್ರೀಲಂಕಾದಂತಹ ಪುಟ್ಟ ದೇಶಗಳಿಂದ ಪಾಠ ಕಲಿಯಬೇಕಾಗಿದೆ. "ತಮ ಸೋಮಾ ಜ್ಯೋತಿರ್ಗಮಯ" ಎಂಬ ವೇದವಾಕ್ಯವನ್ನು ಸಾಕಾರಗೊಳಿಸುವಲ್ಲಿ ನೇತ್ರದಾನಿಗಳ ಪಾತ್ರ ಅಪೂರ್ವವೂ ಅವಿಸ್ಮರಣೀಯವೂ ಆಗಿದೆ. ಇತ್ತೀಚಿನ ದಿನಗಳಲ್ಲಿ ನೇತ್ರದಾನದ ವಿಧಿವಿಧಾನಗಳನ್ನು ಸರಳೀಕರಿಸಲಾಗಿದೆ. ಈ ದಿಶೆಯಲ್ಲಿ 1983ರಲ್ಲಿ ಸ್ಥಾಪನೆಗೊಂಡ "ಟೈಮ್ಸ್ ನೇತ್ರ ಸಂಶೋಧನಾ ಪ್ರತಿಷ್ಠಾನ"ದ ಕೊಡುಗೆ ಅಪಾರವಾದುದು. ಈ ಸಂಸ್ಥೆಯು ಸ್ವಯಂಪ್ರೇರಿತ ನೇತ್ರದಾನಕ್ಕೆ ಇಂಬು ನೀಡುತ್ತಿರುವುದಷ್ಟೇ ಅಲ್ಲದೇ ನೇತ್ರದಾನದಂತಹ ಕಾರ್ಯಗಳಲ್ಲಿಯೂ ತನ್ನ ಅನುಭವಿ ವೈದ್ಯರ ತಂಡದೊಂದಿಗೆ ಸಹಕರಿಸಲು ಸದಾ ಸಿದ್ಧವಿರುತ್ತದೆ.


ಆದಾಗ್ಯೂ ದುರದೃಷ್ಟವಶಾತ್ ಮಾನವನ ಪ್ರಯತ್ನಗಳು ಅನೇಕ ಸಲ ನಿರರ್ಥಕವಾಗಿ ಬಿಡುತ್ತವೆ. ಇಂತಹ ಅಂಧರ ಬಾಳಿಗೆ ಬೆಳಕಾಗಲು ಪಣ ತೊಟ್ಟು ನಿಂತ ಪ್ರಥಮನೇ ಲೂಯಿಸ್ ಬ್ರೈಲ್ (Louis Braille) 18ನೆಯ ಶತಮಾನದ ಅಂತ್ಯದಲ್ಲಿ ಬ್ರ್ಯಾಯಿಲ್‌ನ ಕನಸಿನ ಕೂಸುಮರಿಯಾದ ಅಂಧರ ಶಾಲೆಯೊಂದು ಪ್ಯಾರೀಸಿನಲ್ಲಿ ಪ್ರಾರಂಭವಾದಾಗ, ಅವನ ಬೆಂಬಲಕ್ಕೆ ನಿಂತವರು ಕೇವಲ ಬೆರಳೆಣಿಕೆಯಷ್ಟು ಜನ ಮಾತ್ರ, ಉತ್ಸಾಹಗುಂದದ

ಬ್ರ್ಯಾಯಿಲ್ ತನ್ನ "ಅಂಧರ ಶಾಲೆ"ಯ ಯೋಜನೆಯು ಒಂದಿಲ್ಲ ಒಂದು ದಿನ ವಿಶ್ವಮಾನ್ಯತೆ ಪಡೆದೇಪಡೆಯುತ್ತದೆಂದು ನಿಶ್ಚಿತವಾಗಿ ಭಾವಿಸಿದ್ದನು. ಅವನು ಅಂದು ಕಂಡ ಕನಸು ಇಂದು ಸಾಕಾರವಾಗಿದೆ.

ಭಾರತದಲ್ಲಿ 1887ರಲ್ಲಿ ಅಮೃತಸರದಲ್ಲಿ ಪ್ರಥಮ ಅಂಧರ ಶಾಲೆಯನ್ನು ತೆರೆಯಲಾಯಿತು. ಕುರುಡರಿಗೆ ಅಲ್ಲಿ ಓದಲು ಬರೆಯಲು ಅನುವು ಮಾಡಿಕೊಡಲಾಯಿತು. ಭಾರತ ಸರ್ಕಾರವು ಈ ವಿದ್ಯಾಭ್ಯಾಸ ಕ್ರಮವನ್ನು ತಡವಾಗಿಯಾದರೂ 1951ರಲ್ಲಿ ಅಧಿಕೃತವಾಗಿ ಅಂಗೀಕರಿಸಿತು. ಅಂಧರು ಇಂದು ತಾವು ಯಾರಿಗೂ ಕಡಿಮೆಯಿಲ್ಲವೆಂದು ತಮ್ಮ ಪ್ರತಿಯೊಂದು ಕಾರ್ಯಗಳಲ್ಲೂ ಸಾಬೀತುಪಡಿಸುತ್ತಿದ್ದಾರೆ.

ದೂರವಾಣಿ ಸಂಚಾಲನೆಯಲ್ಲಿ, ಕಂಪ್ಯೂಟರ ಕಾರ್ಯಕ್ರಮಗಳ ನಿರೂಪಣೆಯಲ್ಲಿ ಆಧುನಿಕ ತಂತ್ರಜ್ಞಾನಾಧಾರಿತ ಕಾರ್ಖಾನೆಗಳಲ್ಲಿ ಇಂದು ಅಂಧರ ಕಾರ್ಯಕ್ಷಮತೆಗಳನ್ನು ಕಂಡು ಬೆರಗಾದವರು ಯಾರಿಲ್ಲ ? ಅಖಿಲ ಭಾರತ ದೃಷ್ಟಿಹೀನರ ಸಂಘವು ಇಂದು ಕುರುಡರ ಮಾರ್ಗದರ್ಶನಕ್ಕೆ ಮುಂದಾಗಿದೆ.

# ಡಾ. ಡಬ್ಲ್ಯು.ಎಂ. ಹಾಫ್‌ಕಿನ್ (1860-1930)





ಡಾ॥ ಡಬ್ಲ್ಯು. ಎಂ. ಹಾಫ್‌ಕಿನ್ (1860-1930) ವೈದ್ಯ ವಿಜ್ಞಾನಿಯ 105ನೆಯ ಜನ್ಮದಿನದಂದು ಬಿಡುಗಡೆಯಾದ ಈ ಅಂಚೆಚೀಟಿ ಒಂದೆರಡು ವರ್ಣಗಳಲ್ಲಿ ಮೂಡಿಬಂದಿದ್ದರೂ ತುಂಬಾ ಸುಂದರವಾಗಿದೆ. ಹಾಫ್‌ಕಿನ್ ಸಂಸ್ಥೆಯಲ್ಲಿ ವಿಶಿಷ್ಟ ಪ್ರಕಾರಗಳಿಂದ ಲಸಿಕೆಗಳ ತಯಾರಿಕೆಗಾಗಿ ಹಾವಿನ ವಿಷವನ್ನು ಸಂಗ್ರಹಿಸುವರು. 1896ರಲ್ಲಿ ಆರಂಭವಾದ ಹಾಫ್‌ಕಿನ್ ಸಂಸ್ಥೆ ಲಸಿಕೆಗಳನ್ನು ತಯಾರಿಸುವವರಲ್ಲಿ ಎತ್ತಿದ ಕೈ. ಮಹಾರಾಷ್ಟ್ರದ ಸರ್ಕಾರದ ನೆರವಿನಿಂದ ನಡೆಯುತ್ತಿರುವ ಈ ಸಂಸ್ಥೆ ರಾಷ್ಟ್ರೀಯ, ಅಂತರರಾಷ್ಟ್ರೀಯ ಸಂಸ್ಥೆಗಳೊಂದಿಗೆ ನಿಕಟ ಸಂಬಂಧ ಹೊಂದಿದೆ. ವೈದ್ಯಕೀಯ ಸಂಶೋಧನೆ, ಸಂಶೋಧಕ ಕೆಲಸದ ತರಬೇತಿ, ವೈದ್ಯರಿಗೆ ರೋಗನಿದಾನದ ಸಾಧನಗಳ ಪೂರೈಕೆ ಸಂಸ್ಥೆಯ ಪ್ರಮುಖ ಕೆಲಸಗಳು.

ವಾಲ್ಡಿಮಾರ್ ಮೊಡಿಕಾವರ್ ಹಾಫ್‌ಕಿನ್ ಮೂಲತಃ ರಷ್ಯದ ಪ್ರಜೆ. ಇವರು ಡಾ॥ ಮೆಚ್ನಿಕಾಫ್ ಮತ್ತು ಲೂಯಿಪಾಶ್ಚರರ ಶಿಷ್ಯ. ಕಾಲರಾ ನಿರೋಧಕ ವ್ಯಾಕ್ಸಿನನ್ನು ಕಂಡುಹಿಡಿದ ಹಾಫ್‌ಕಿನ್ ಅದನ್ನು ಪ್ರಯೋಗಿಸಿ ನೋಡಲು ಅಂಟು ಜಾಡ್ಯದಿಂದ ಬಳಲುತ್ತಿದ್ದ ಭಾರತಕ್ಕೆ 1893ರಲ್ಲಿ ಬಂದರು. ಇವರು "ಪ್ಲೇಗ್ ಸಂಶೋಧನೆ ಪ್ರಯೋಗಾಲಯ" ಪ್ರಥಮ ನಿರ್ದೇಶಕರಾಗಿ ಮುಂಬಯಿಯಲ್ಲಿ ಸೇವೆ ಸಲ್ಲಿಸಿದರು.

ಅದನ್ನೇ 1925ರಲ್ಲಿ "ಹಾಫ್‌ಕಿನ್ ಇನ್‌ಸ್ಟಿಟ್ಯೂಟ್"ವೆಂದು ಪುನರ್ ನಾಮಕರಣ ಮಾಡಿದರು. ಗಾಂಧೀಜಿಯವರು ಸಹ ಹಾಫ್‌ಕಿನ್ ಸಂಸ್ಥೆಯನ್ನು 1933ರಲ್ಲಿ ಸಂದರ್ಶಿಸಿದರು. 1974ರಲ್ಲಿ ಈ ಸಂಸ್ಥೆ ತನ್ನ 75ನೆಯ ವರ್ಧಂತಿಯನ್ನು ಆಚರಿಸಿತು. ಇಲ್ಲಿ ಸ್ನಾತಕೋತ್ತರ ಪದವಿ ಮತ್ತು ಡಾಕ್ಟರೇಟ್ ಪದವಿ ಪಡೆಯುವ ಸವಲತ್ತುಗಳಿವೆ.

# ಭಾರತೀಯ ರೆಡ್‌ಕ್ರಾಸ್ ಸಂಸ್ಥೆ : 50 ವರ್ಷಗಳು




ರೆಡ್‌ಕ್ರಾಸ್ ಸಂಸ್ಥೆ ಒಂದು ಅಂತರ್‌ರಾಷ್ಟ್ರೀಯ ಸಂಸ್ಥೆ. ಉಗಮವಾದದ್ದು 1864ರಲ್ಲಿ. ಈ ಸಂಸ್ಥೆಯ ಮೂಲ ಉದ್ದೇಶ ಯುದ್ಧದ ಗಾಯಾಳುಗಳಿಗೆ ಮತ್ತು ಯುದ್ಧ ಕೈದಿ (P.O.W.) ಗಳಿಗೆ ಎಲ್ಲ ತರದ ಮಾನವೀಯ ಸಹಾಯಗಳನ್ನು ಒದಗಿಸುವದಾಗಿದೆ. ಸ್ವಿಸ್ ಹೆನ್ರಿ ಡ್ಯುನಾಂಟ್ ಅವರು ಬೆಳಕಿಗೆ ತಂದ ಯುದ್ಧದ ಭೀಕರತೆಗಳನ್ನು ಮನಗಂಡು 1864ರಲ್ಲಿ ಜಿನೀವಾ ಸಭೆಯ ಒಪ್ಪಂದಗಳ ಮೇರೆಗೆ ಗಾಯಾಳುಗಳನ್ನು ಸಾಗಿಸುವ ವಾಹನಗಳು, ಆಸ್ಪತ್ರೆಗಳು, ಆಸ್ಪತ್ರೆಯ ಉಗ್ರಾಣಗಳು, ಆಸ್ಪತ್ರೆಯ ಕಾರ್ಯಗಳಲ್ಲಿ ನಿರತವಾಗಿರುವ ಸಿಬ್ಬಂದಿ ವರ್ಗದವರ ಸುರಕ್ಷತೆಗಾಗಿ ಕೆಲವೊಂದು ಸರ್ವಸಮ್ಮತ ನಿಯಮಗಳನ್ನು ಜಾರಿಗೆ ತಂದರು. ಬ್ರಿಟಿಶ್ ರೆಡ್‌ಕ್ರಾಸ್ ಸಂಸ್ಥೆ 1870ರಲ್ಲಿ ಉದಯವಾಗಿ 1908ರಲ್ಲಿ ರೆಡ್‌ಕ್ರಾಸ್ ಅಂತರರಾಷ್ಟ್ರೀಯ ಸಂಸ್ಥೆಯೊಂದಿಗೆ ವೀಲಿನವಾಯಿತು. ಈ ಸಂಸ್ಥೆಯು ಯುದ್ಧದ ಸಮಸ್ಯೆಗಳಾದ ನಿರಾಶ್ರಿತರು, ರೋಗ ರುಜಿನಗಳು ಮತ್ತು ಅಂಗವಿಕಲರ ಕ್ಷೇಮಾಭಿವೃದ್ಧಿಯತ್ತ ಗಮನ ಹರಿಸುವುದಲ್ಲದೇ ಶಾಂತಿ ಸಮಯದಲ್ಲಾಗುವ ನೈಸರ್ಗಿಕ ಪ್ರಕೋಪಗಳಾದ (Natural Calamities) ಮಹಾಪೂರ, ಭೂಕಂಪ, ಜ್ವಾಲಾಮುಖಿ, ಅಪಘಾತಗಳು, ಸಾಂಕ್ರಾಮಿಕ ರೋಗಗಳ ಹಾವಳಿಗಳ ನಿವಾರಣೆಗಳಲ್ಲಿ ನಿರಂತರವಾಗಿ ಭಾಗಿಯಾಗಿ ಸೇವೆಯನ್ನೂ ಈಗಲೂ ಸಲ್ಲಿಸುತ್ತಿರುವುದು

ಸ್ತುತ್ಯಾರ್ಹವಾದುದು. ರೆಡ್‌ಕ್ರಾಸ್ ಅಂತರರಾಷ್ಟ್ರೀಯ ಸಂಸ್ಥೆಯ ಮಾನವೀಯ ಕೆಲಸಗಳನ್ನು ಮೆಚ್ಚಿ, ಸ್ವೀಡಿಸ್ ನೋಬೆಲ್ ಅಕಾಡೆಮಿ, ಶಾಂತಿಗಾಗಿ ಮೀಸಲಿಟ್ಟಿರುವ ನೊಬೆಲ್ ಪ್ರಶಸ್ತಿಯನ್ನು ಸಹ ಈ ಸಂಸ್ಥೆಗೆ ದಯಪಾಲಿಸಿದೆ.


ಇಂಡಿಯನ್ ರೆಡ್‌ಕ್ರಾಸ್ ಸಂಸ್ಥೆ 1920ರಲ್ಲಿ ಉಗಮವಾಯಿತು. ಇದರ ಕೇಂದ್ರ ಕಚೇರಿ ದೆಹಲಿಯಲ್ಲಿರುವುದು. ಅಂತರರಾಷ್ಟ್ರೀಯ ರೆಡ್‌ಕ್ರಾಸ್ ಸಂಸ್ಥೆಯ ಮಾನ್ಯತೆಯನ್ನು ಭಾರತೀಯ ರೆಡ್‌ಕ್ರಾಸ್ ಸಂಸ್ಥೆ ಪಡೆದಿರುವುದು. ಭಾರತದ ರಾಷ್ಟ್ರಪತಿ ಇದರ ಅಧ್ಯಕ್ಷರು. ಕಾರ್ಯನಿರ್ವಾಹಕ ಮಂಡಳಿಯ ಅಧ್ಯಕ್ಷರು ಸಾಮಾನ್ಯವಾಗಿ ಕೇಂದ್ರ ಆರೋಗ್ಯ ಸಚಿವರೇ ಆಗಿರುತ್ತಾರೆ. ಮಂಡಲಿಯ ಕಾರ್ಯಕಲಾಪಗಳನ್ನು ನೋಡಿಕೊಳ್ಳಲು ಒಬ್ಬ ಮಹಾಕಾರ್ಯದರ್ಶಿ ಮತ್ತು ಅವರಿಗೆ ಸಹಾಯಕರಾಗಿ ವಿವಿಧ ಸಿಬ್ಬಂದಿ ವರ್ಗದವರು ಇರುತ್ತಾರೆ.

ಆಸ್ಪತ್ರೆ, ತಾಯಿ ಮತ್ತು ಮಕ್ಕಳ ಯೋಗಕ್ಷೇಮ, ಪ್ರಚಾರ, ರಕ್ತದಾನ, ಆರ್ದರಿಗೆ ನೆರವು. ಕುಟುಂಬ ಯೋಜನೆ ಇವಕ್ಕೆ ಸಂಬಂಧಿಸಿದ ವಿವಿಧ ಭಾಗಗಳಿವೆ. ಜೂನಿಯರ್ ರೆಡ್‌ಕ್ರಾಸ್ ಸಂಘಟನೆಯೂ ಇದೆ. ಭಾರತದಲ್ಲಿ ಪ್ರತಿ ಪ್ರಾಂತ್ಯದಲ್ಲಿ ರೆಡ್‌ಕ್ರಾಸ್ ಸಂಸ್ಥೆಯ ಶಾಖೆಗಳಿವೆ. ಈ ಸಂಸ್ಥೆಯ ವಿವಿಧ ಕಾರ್ಯಗಳ ಬಗ್ಗೆ ಈಗಾಗಲೇ ವಿವರಿಸಲಾಗಿದೆ.

ರೆಡ್‌ಕ್ರಾಸ್ ಸಂಸ್ಥೆಯ ಭಾರತೀಯ ಶಾಖೆಯ 50ನೆಯ ವರ್ಷದ ನೆನಪಿಗಾಗಿ ಬಹು ಮುತುವರ್ಜಿಯಿಂದ ಅಂಚೆ ಇಲಾಖೆಯವರು ತುಂಬಾ ಪ್ರಾತಿನಿಧಿಕವಾದ ಸ್ಟಾಂಪನ್ನು ಹೊರತಂದಿರುವರು. ಸ್ಟಾಂಪಿನ ಬಿಡುಗಡೆ ದಿನ : 5-11-1970.

# ಹೆಲನ್ ಕೆಲರ್ : (1880–1968) :

# ಜನ್ಮಶತಾಬ್ದಿ ವರ್ಷ




ಹೆಲೆನ್ ಕೆಲರ್‌ರವರ ಜನ್ಮಶತಾಬ್ದಿಯ (1880–1968) ನೆನಪಿಗಾಗಿ ಭಾರತೀಯ ಅಂಚೆ ಇಲಾಖೆಯವರು 27–6–1980ರಲ್ಲಿ ಹೊರತಂದ ಅಂಚೆಚೀಟಿ ಇದು. ಅಂಗವಿಕಲೆಗಳನ್ನು ಮೆಟ್ಟಿನಿಂತು ಸಮಾಜಕ್ಕೆ ಆದರ್ಶಪ್ರಾಯವಾಗಿ ಬದುಕುವ ಕಥೆಯ ಮಹಾಗಾಥೆಯನ್ನು ಮತ್ತೊಮ್ಮೆ ನಮ್ಮ ಗಮನಕ್ಕೆ ತಂದು ತುಂಬಾ ಸ್ತುತ್ಯಾರ್ಹ ಕೆಲಸ ಮಾಡಿದ ಭಾರತೀಯ ಅಂಚೆ ಇಲಾಖೆಯನ್ನು ನಾವುಗಳು ಹೃತ್ಪೂರ್ವಕವಾಗಿ ಅಭಿನಂದಿಸಲೇಬೇಕು.

ಮಗುವಿಗೆ ವರ್ಷ ತುಂಬಿ ಏಳು ತಿಂಗಳು ತೀವ್ರ ಕಾಯಿಲೆಯಿಂದ ನರಳಿತು. ಮೆದುಳಿನ ಜ್ವರ ಎಂದರು. ಜ್ವರ ನಿಲ್ಲುವ ಹೊತ್ತಿಗೆ ಮಗು ಕುರುಡಾಯಿತು. ಕಿವುಡಾಯಿತು. ಕೆಲವು ದಿನಗಳ ಆನಂತರ ಮೂಕಿಯೂ ಆಯಿತು. ಇಂಥ ಬದುಕಿಗಿಂತ ಸಾವೇ ಲೇಸು ಎನ್ನುವಂತಹ ಪರಿಸ್ಥಿತಿ. ಕುರುಡಿಯಾಗಿ, ಕಿವುಡಿಯಾಗಿ, ಮೂಕಿಯಾಗಿ ಬೆಳೆದ ಜೀವ ಹೆದರಲಿಲ್ಲ. ಬೇಸರ ಪಡಲಿಲ್ಲ. ವ್ಯಥೆ ಪಡಲಿಲ್ಲ. ಸ್ವಪ್ರಯತ್ನದಿಂದ ಇತರರ ಸಹಾಯದಿಂದ ಓದು ಬರಹವನ್ನೂ ಮಾತನಾಡುವದನ್ನೂ ಕಲಿತು ವಿಶ್ವದಲ್ಲೆಲ್ಲಾ

ಸಂಚರಿಸಿ ಅನೇಕ ಉಪನ್ಯಾಸಗಳನ್ನು ಕೊಟ್ಟು ಅನೇಕ ಗ್ರಂಥಗಳನ್ನು ಬರೆದು ತನ್ನ ಜೀವನದಲ್ಲಿ ಸಫಲತೆ ಪಡೆದಳು. ಅವಳೇ ಈ ಹೆಲೆನ್ ಕೆಲರ (ಜ್ಞಾನ ಗಂಗೋತ್ರಿ ಸಂಖ್ಯೆ 1 ಪುಟ 220).

ಹೆಲೆನ್ ಅಡ್ಯಮ್ಸ್ ಕೆಲರ್ ಅಮೇರಿಕದ ಟಸ್ಕ್‌ಕಂಬಿಯಾ (ಅಲ್ಬಾಮಾ)ದಲ್ಲಿ 27-6-1880ರಲ್ಲಿ ಜನಿಸಿದಳು. ಅವಳ ತಂದೆ ಆರ್ಥರ್ ಕೆಲರ್ ಓರ್ವ ಪತ್ರಕರ್ತ. "ನಾರ್ಥ್ ಅಲಾಬಾಮಿಯನ್" ಸುದ್ದಿ ಪತ್ರದ ಸಂಪಾದಕನಾಗಿದ್ದನು. ಮತ್ತು ಸಮಾಜದ ಪ್ರಭಾವಿ ವ್ಯಕ್ತಿಯಾಗಿದ್ದನು. ಹೆಲೆನಗೆ 28 ತಿಂಗಳುಗಳು ತುಂಬುವಷ್ಟರಲ್ಲಿ ತೀವ್ರ ಕಾಯಿಲೆಯಿಂದ ಕಿವುಡಿ, ಮೂಕಿ ಮತ್ತು ಕುರುಡಿಯಾದಳು. ಶೈಶವಾವಸ್ಥೆಯಿಂದ ಬಾಲ್ಯಾವಸ್ಥೆಯವರೆಗಿನ ಅವಳ ಸ್ಥಿತಿ ತುಂಬಾ ಶೋಚನೀಯವಾಗಿತ್ತು.

ಅವಳ ತಂದೆ ತಾಯಿಗಳು ವಿಜ್ಞಾನಿ ಅಲೆಕ್ಸಾಂಡರ್ ಗ್ರಹಾಂಬೆಲ್‌ನ ಸಲಹೆಯಂತೆ 1887ರಲ್ಲಿ ಅದೇ ಆಗ ಕುರುಡರ ಶಾಲೆಯಿಂದ ವಿಶೇಷ ತರಬೇತಿ ಪಡೆದು ಪದವೀಧರೆಯಾಗಿ ಹೊರಬಂದ ಅನ್ನೆ ಮಾನ್ಸ್ ಫೀಲ್ಡ್ ಸಲ್ಲಿವನ್ ಎಂಬಾಕೆಯನ್ನು ತಮ್ಮ ಮಗಳ ಉಜ್ವಲ ಭವಿಷ್ಯದ ದೃಷ್ಟಿಯಿಂದ ಶಿಕ್ಷಕಿಯನ್ನಾಗಿ ನೇಮಿಸಿಕೊಂಡರು. ಅನ್ನೆ ಸಲಿವನ್‌ಳ ಸತತ ಪರಿಶ್ರಮ ಮತ್ತು ಪ್ರಯತ್ನಗಳು ಫಲ ನೀಡಿದ ಪ್ರಯುಕ್ತ ಮಾತನಾಡುವುದನ್ನು ಕಲಿತಳು. ಬ್ರಾಯಿಲ್ ಲಿಪಿಯ ಮೂಲಕ ಓದುವದನ್ನು ಕಲಿತಳು. ಬಾಸ್ಟನ ಕಿವುಡರ ಶಾಲೆ ಹಾಗೂ ನ್ಯೂಯಾರ್ಕಿನ ರೈಟ್ ಹ್ಯೂಮೋಸನ್ ಕಿವುಡರ ಶಾಲೆ ಅವಳ ಜೀವನಕ್ಕೆ ಒಂದು ಸ್ಥಿರತೆ ತಂದ ಶೈಕ್ಷಣಿಕ ಸಂಸ್ಥೆಗಳು. ಸಾಕಷ್ಟು ವಿವರಿಸಲಾಗದಂತಹ ಪರಿಶ್ರಮಗಳಿಂದ 1904ರಲ್ಲಿ ಹೆಲೆನ್ ಕೆಲರ ಪದವೀಧರೆಯಾದಳು. ಆಗ ಆರ್ಥಿಕವಾಗಿ ಅವಳ ಪರಿಸ್ಥಿತಿ ತುಂಬಾ ಶೋಚನೀಯವಾಗಿತ್ತು. ಆದಾಗ್ಯೂ "ಧೈರ್ಯಂ ಸರ್ವಾರ್ಥ ಸಾಧನಂ" ಎಂಬುದನ್ನು ಸಾಬೀತು ಮಾಡಿ ತೋರಿಸಿದಳು. ತನ್ನ ಭಾಷಣ ಮತ್ತು ಲೇಖನಗಳಿಂದ ತನ್ನ ಕೃತಿಗಳಿಂದ ಬಂದ 20 ಲಕ್ಷ ಡಾಲರ್ ಹಣವನ್ನೆಲ್ಲಾ ಉದಾರವಾಗಿ ದಾನ ಮಾಡಿ, ತನ್ನ ಹೆಸರಿನಲ್ಲಿ ಒಂದು ನಿಧಿಯನ್ನು ಆರಂಭಿಸಿದಳು. ಹೆಲೆನ ಕೆಲರ್‌ಳ ಅಪಾರ ಚಟುವಟಿಕೆಗಳಿಂದ ಅಂಗವಿಕಲರಲ್ಲಿ ಹೊಸ ಚೈತನ್ಯ ಮೂಡುವಂತಾಯಿತು. ಎರಡನೆಯ ಜಾಗತಿಕ ಮಹಾಯುದ್ಧದ ಅನಂತರ ಜಗತ್ತನ್ನೆಲ್ಲ ಸುತ್ತಿ ಶಾಂತಿ, ಸೌಹಾರ್ದತೆಗಳನ್ನು ಸ್ಥಾಪಿಸುವಲ್ಲಿ ಮಹತ್ವ ಪಾತ್ರವಹಿಸಿದಳು. 1955ರಲ್ಲಿ ಭಾರತಕ್ಕೆ ಬಂದಾಗ ದೆಹಲಿ ವಿಶ್ವವಿದ್ಯಾಲಯವು ಆಕೆಗೆ ಡಾಕ್ಟರೇಟ್ ಪದವಿಯಿಂದ ಸನ್ಮಾನಿಸಿತು. ಹೆಲೆನ್ ಕೆಲರ 1968ರಲ್ಲಿ ವಿಧಿವಶಳಾದಳು.

ಹೆಲೆನ್ ಕೆಲರ ಬರೆದಿರುವ ಪುಸ್ತಕಗಳಲ್ಲಿ ಇವು ಪ್ರಮುಖವಾದವು. ನನ್ನ ಜೀವನ ಕಥೆ (The story of my life); ಆಶಾವಾದ ಒಂದು ಪ್ರಬಂಧ. ನಾನು ಜೀವಿಸಿರುವ ಪ್ರಪಂಚ, ಕತ್ತಲಿಂದ ಹೊರಗೆ, ಸಂಜೆ ಶಾಂತಿ ಮತ್ತು ಭರವಸೆ ಇಟ್ಟುಕೊಳ್ಳೋಣ.

ಆಗಿನ ಜಗತ್ತಿನ ಪ್ರಮುಖ ವ್ಯಕ್ತಿಗಳಾದ ಅಲೆಕ್ಸಾಂಡರ್ ಗ್ರಹಾಂಬೆಲ್, ಮಾರ್ಕ್ ಟ್ವೇನ್, ವಿಲಿಯಂ ಜೇಮ್ಸ್ ಅವಳ ಸನ್ಮಿತ್ರರಾಗಿದ್ದುದು ಒಂದು ವಿಶೇಷ.

ದಿ॥ ಜವಾಹಾರಲಾಲ ನೆಹ್ರೂ ಅವರು ಸಹ ಆಕೆ ಬಾಳನ್ನು ಕೊಂಡಾಡಿದವರಲ್ಲಿ ಮುಖ್ಯರು.

"She will live on, one of the few, the immortal names not born to die Her spirt will endure as long as man can read and stories can be told of woman who showed the world there are no boundaries to courage and faith"

-Sentor Lister Hill

# ಮದರ್ ಥೆರೆಸಾ (1910–1997)




ಈ ಮಾಲಿಕೆಯಲ್ಲಿ ಅಷ್ಟು ಪ್ರಸ್ತುತವೆನಿಸದಿದ್ದರೂ ಅವರು ಮಾನವ ಕುಲಕ್ಕೆ ಮಾಡಿದ ಸೇವೆಯನ್ನು ಸ್ಮರಿಸುವಲ್ಲಿ ಯಾವುದೇ ಭಿನ್ನಾಭಿಪ್ರಾಯಗಳಿಗೆ ಎಡೆಯಿಲ್ಲ. ಅವರು ಕಲ್ಕತ್ತಾದ ತಾಯಿಯಾಗಿ, ದೇಶಮಾತೆಯಾಗಿ, ಜಗತ್ತಿನ ಕಣ್ಮಣಿ (An Angel of Mercy) ಯಾದುದರ ಹಿನ್ನೆಲೆಯ ಕತೆ ರೋಚಕವಾದುದಲ್ಲದೇ ಎಲ್ಲರಿಗೂ ಜೀವನದ ಮಾರ್ಗದರ್ಶಿಯಾಗಬಲ್ಲುದು. ಎಲ್ಲ ಕಾಲಕ್ಕೂ ಹಾಗೂ ಎಲ್ಲ ಜನಾಂಗದವರಿಗೂ 'ಸೇವೆ' ಎಂಬ ಶಬ್ದಕ್ಕೆ ವಿಶೇಷ ಅರ್ಥವನ್ನೇ ದಯಪಾಲಿಸಿದ ಈ ಮಹಾಮಾತೆಯ ಜೀವನ ಪರ್ಯಂತದ ಆಶೆ–ಆಕಾಂಕ್ಷೆಗಳಿಲ್ಲದೇ ದೀನದಲಿತರ, ಕುಷ್ಠರೋಗಿಗಳ ನಿರಂತರವಾದ ಸೇವೆಯನ್ನು ಗುರುತಿಸಿ 1979ರಲ್ಲಿ ಸ್ವೀಡಿಸ್ ಅಕೆಡೆಮಿ ನೊಬೆಲ್ ಶಾಂತಿ ಪ್ರಶಸ್ತಿಯನ್ನು ದಯಪಾಲಿಸಿತು. ಹಾಗೂ ಈ ಪ್ರಶಸ್ತಿ ತನ್ನ ಬೆಲೆಯನ್ನು ಇನ್ನಷ್ಟು ಹೆಚ್ಚಿಸಿಕೊಂಡಿತೆಂದರೂ ಯಾರು ಆಕ್ಷೇಪಿಸಲಾರರು. ಸ್ವೀಡಿಸ್ ಅಕೆಡೆಮಿ ಮದರ್ ತೆರೆಸಾರವರ ಹೆಸರನ್ನು 'ನೊಬೆಲ್ ಶಾಂತಿ ಪ್ರಶಸ್ತಿ'ಗಾಗಿ ಘೋಷಿಸಿದಾಗ ನಡೆದಾಡುವ ಸಂತಳೆಂದು ಪ್ರಖ್ಯಾತವಾಗಿದ್ದ ಮದರ್ ಥೆರೆಸಾ ನುಡಿದ ಮುತ್ತಿನಂತಹ ಮಾತುಗಳನ್ನು ಈಗ ಆಲಿಸೋಣ "ನಾನು ಈ ಪ್ರಶಸ್ತಿಯನ್ನು ಬಡವರ ಹೆಸರಿನಲ್ಲಿ ಸ್ವೀಕರಿಸುವೆ. ನನಗೆ ಈ ವಿಶೇಷ ಪ್ರಶಸ್ತಿಯನ್ನು

ದಯಪಾಲಿಸಿ ಅವರು ಜಗತ್ತಿನಲ್ಲಿಯ ಬಡವರನ್ನು ಹಾಗೂ ಅವರ ಸಮಸ್ಯೆಗಳನ್ನು ಅಂಗೀಕರಿಸಿ ಮಾನ್ಯ ಮಾಡಿದಂತಾಗಿದೆ."

ಇನ್ನೊಂದು ಭಾವನಾತ್ಮಕ ಸಂದರ್ಭದಲ್ಲಿ ಅವರು ನುಡಿದ ಅನರ್ಘ್ಯ ರತ್ನದಂತಹ ಮಾತುಗಳು ನಮ್ಮ ಸ್ಮೃತಿಪಟಲ ಸೇರಿದರೆ ನಾವು ಧನ್ಯರಾದಂತೆಯೇ. ಬನ್ನಿ ಆ ನುಡಿಗಳನ್ನು ಕೇಳೋಣ "ನಾನು ಓರ್ವ ವ್ಯಕ್ತಿಯ ಆಂತರಿಕ ಪ್ರೀತಿಯನ್ನು ಸಂಪಾದಿಸುವಾಗ ನನ್ನ ಹೃದಯವನ್ನೆ ಆತನಿಗೆ ಆ ಕ್ಷಣದಲ್ಲಿಯೇ ನೀಡಲು ಸದಾ ಸಿದ್ಧಳು."

ಇದು ಸಮಾಜ ಸೇವೆಯಲ್ಲ. ನಾವು ಒಬ್ಬರೊಬ್ಬರನ್ನು ಪ್ರೀತಿಸಲು ಕಲಿಯಬೇಕು. ಈ ಕ್ರಿಯೆ ಎಲ್ಲ ಅರ್ಹ ವ್ಯಕ್ತಿಗಳನ್ನು ಸಮಾಜ ಸೇವೆಯತ್ತ ಆಕರ್ಷಿಸುವಲ್ಲಿ ಸಂಶಯವಿಲ್ಲ. ಆಗ ನಾವು ಸಹ ಅವರ ಜೊತೆಯಲ್ಲಿ ಭಾವನಾತ್ಮವಾಗಿ ಬೆರೆಯಬೇಕು.

ಅವರ ನಿರಂತರ, ಹೃತ್ಪೂರ್ವಕವಾದ, ಶ್ರೇಷ್ಠವಾದ ಸೇವೆಯನ್ನು ಗುರುತಿಸಿ, ಮನ್ನಿಸಿ ಜಗತ್ತಿನ ಮೂಲೆ ಮೂಲೆಗಳಿಂದ ಲೆಖ್ಖವಿಲ್ಲದಷ್ಟು ಪ್ರಶಸ್ತಿಗಳು ಅವರನ್ನು ಹಗಲಿರುಳು ಅರಸುತ್ತ ಬಂದಾಗ್ಯೂ ಅವರು ದೀನ ದಲಿತರ ಸೇವೆಯನ್ನು ಎಂದೂ ಮರೆಯಲಿಲ್ಲ.

Mother Teresa stepped out of the confines of a convent 50 years ago to "Serve God among the poorest of the poor" and had been a guardian angel of the sick and dying the world ever since then." ಅವರನ್ನು ಅಲಂಕರಿಸಿದ ಪ್ರಶಸ್ತಿಗಳತ್ತ ಒಂದು ಇಣುಕು ನೋಟ ಹರಿಸೋಣ.

ಭಾರತ ಸರ್ಕಾರದ 'ಪದ್ಮಶ್ರೀ' ಪ್ರಶಸ್ತಿ – 1962

ಮ್ಯಾಗ್ಸೇಸ್ಸೆ ಪ್ರಶಸ್ತಿ – 1962

ಪೋಪ್ ಜಾನ್ xxiii ರ ಶಾಂತಿ ಪ್ರಶಸ್ತಿ – 1971

ಅಂತರರಾಷ್ಟ್ರೀಯ ಸದ್ಭಾವನಾ ಜವಾಹರಲಾಲ ನೆಹ್ರೂರವರ ಪುರಸ್ಕಾರ–1972

ದ ಆರ್ಡರ್ ಆಫ್ ಸೇಂಟ ಫ್ರಾನ್ಸಿಸ್ ಆಫ್ ಎಸಿಸಿ – 1974


(The order of Saint Francis of Assisi - 1974)

ಈ ಎಲ್ಲ ಪ್ರಶಸ್ತಿಗಳ ಕಿರೀಟ ಪ್ರಾಯವಾಗಿ ಸಂದ ನೊಬೆಲ್‌ಶಾಂತಿ ಪ್ರಶಸ್ತಿ–1979 ಮತ್ತು

ಭಾರತದ ಅತ್ಯುನ್ನತ ನಾಗರಿಕ ಪ್ರಶಸ್ತಿ "ಭಾರತರತ್ನ" ಪ್ರಶಸ್ತಿಗಳು ತಮ್ಮ ಬೆಲೆಯನ್ನು ಇಮ್ಮಡಿಸಿಕೊಂಡಿವೆ.

ವಿಶೇಷ ಅಂಚೆ ಚೀಟಿ ಬಿಡುಗಡೆ : 27–8–1980.


# ಪರಿಸರ ಸಂರಕ್ಷಣೆ : Environmental Conservation



ಪರಿಸರ ಸಂರಕ್ಷಣೆ ಈಗ ಜಾಗತಿಕ ಸಮಸ್ಯೆಯಾಗಿದೆ. ಅಭಿವೃದ್ಧಿ ಹೊಂದಿದ (Developed Countries) ರಾಷ್ಟ್ರಗಳು ಈ ಸಮಸ್ಯೆಯತ್ತ ಸಾಕಷ್ಟು ಪ್ರಮಾಣದಲ್ಲಿ ಎಲ್ಲ ದೃಷ್ಟಿಗಳಿಂದಲೂ ನಿರಂತರ ಗಮನ ಹರಿಸಿದ ಪ್ರಯುಕ್ತ ಅವರು ತಮ್ಮ ಗುರಿಗಳತ್ತ ಸರಾಗವಾಗಿ ಮುನ್ನಡೆದಿರುವುದು ಪರಿಸರದ ಹಾನಿಗಳಿಂದಾದ ಜ್ವಲಂತ ಸಮಸ್ಯೆಗಳನ್ನು ಮೆಟ್ಟಿ ನಿಲ್ಲಲು ಸಾಧ್ಯವಾಗಿದೆ. ಅಭಿವೃದ್ಧಿ ಹೊಂದಿದ ರಾಷ್ಟ್ರಗಳಲ್ಲಿ ಜನಸಂಖ್ಯೆ ಏರಿಕೆ ಮಿತಿಯಲ್ಲಿದೆ. ಕುಟುಂಬ ಯೋಜನೆಗೆ ಬೆಲೆ ಬಂದಿದೆ. ಅರಣ್ಯಗಳ ನಾಶ ನಿಂತುಬಿಟ್ಟಿದೆ. ವನ್ಯ ಜೀವಿಗಳು ತಮ್ಮ ವಾಸಸ್ಥಾನಗಳಲ್ಲಿ ಸುಖದಿಂದ ಜೀವನವನ್ನು ಕಳೆಯುತ್ತಿವೆ. ನೀರಿನ ಸದುಪಯೋಗವಾಗತ್ತಿದೆ. ಪರಿಸರದ ಸ್ನೇಹದ ವಾತಾವರಣ ಎಲ್ಲೆಡೆ ಹರಡಿದೆ. ಆದರೆ ಇದಕ್ಕೆ ತದ್ವಿರುದ್ಧವಾಗಿ ಅಭಿವೃದ್ಧಿ ಹೊಂದುತ್ತಿರುವ (Developing Countries) ದೇಶಗಳಲ್ಲಿ ಹಣವಿಲ್ಲ. ಹೊಂದಾಣಿಕೆಗಳಿಲ್ಲ. ಕೇವಲ ಕೆಲಸಕ್ಕೆ ಬಾರದ ರಾಜಕಾರಣದ ತಾಂಡವ ನೃತ್ಯಗಳಲ್ಲಿ ದೇಶಗಳು ಮುಳುಗಿ ಹೋಗಿವೆ. ಅರಣ್ಯಗಳು ಅವಸಾನದ ಅಂಚಿನಲ್ಲಿದೆ. ಮಿತಿಮೀರಿದ ಔದ್ಯೋಗಿಕರಣದಿಂದ ಪರಿಸರ ಮಾಲಿನ್ಯ ಹೆಚ್ಚಿದೆ. ಸುರಕ್ಷತಾ ವಿಧಾನಗಳು ಕಣ್ಮರೆಯಾಗಿವೆ. ಶಿಸ್ತು ಮಾಯವಾಗಿದೆ. ಬದುಕು ಅಸಹನೀಯವಾಗಿದೆ. ಜನಸಂಖ್ಯಾ ಸ್ಫೋಟದಿಂದ ಪ್ರಗತಿಗಳು ರಸಾತಳಕ್ಕೆ ಇಳಿದಿವೆ. ಜನರ ಸಾಮಾನ್ಯ

ಬೇಡಿಕೆಗಳಾದ ಆಹಾರ, ಬಟ್ಟೆ, ನೀರು ಮತ್ತು ನೆಲೆಗಳನ್ನು ಒದಗಿಸುವಲ್ಲಿ ಸರ್ಕಾರಗಳು ಗಬ್ಬೆದ್ದು ಹೋಗಿವೆ. ಈ ಎಲ್ಲ ಪ್ರಧಾನ ಸಮಸ್ಯೆಗಳು ಟೊಳ್ಳು ಘೋಷಣೆಗಳಾಗಿವೆ. ದೂರದೃಷ್ಟಿಯುಳ್ಳ ಮಹಾತ್ಮಗಾಂಧಿ ಮತ್ತು ಸನ್ಮಾನ್ಯ ಜಯಪ್ರಕಾಶ ನಾರಾಯಣರಂತಹ ವ್ಯಕ್ತಿಗಳು ಹುಟ್ಟಿಬಂದಲ್ಲಿ ಮಾತ್ರ ಈ ದೇಶಗಳು ಬಾಳಬಹುದು ಮತ್ತು ಬದುಕಬಹುದು. ಅಂಚೆಚೀಟಿ ಬಿಡುಗಡೆ : 15–6–1981.

# ವಿಶ್ವ ಆಹಾರ ದಿನ : World food day




ಆಹಾರ ಮನುಷ್ಯನ ಮೂಲಭೂತ ಅಗತ್ಯಗಳಲ್ಲಿ ಒಂದು. ಆಹಾರವಿಲ್ಲದೇ ಮನುಷ್ಯ ಬದುಕಲಾರ. ಮನುಷ್ಯನು ಶ್ರಮಪಡುವುದು "ಥೋಟುದ್ದ ಹೊಟ್ಟೆಗಾಗಿ, ಗೇಣುದ್ದ ಬಟ್ಟೆಗಾಗಿ" ಎಂಬ ಹಿರಿಯರ ಮಾತುಗಳು ಆಹಾರದ ಮಹತ್ವವನ್ನು ಸಾರಿ ಹೇಳುವವು. ಜನರಲ್ಲಿ ಆಹಾರ ಪ್ರಜ್ಞೆ ಮೂಡಬೇಕಾಗಿದೆ. ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಸಮಸ್ಯೆಗಳ ಬಗ್ಗೆ ಜನಸಾಮಾನ್ಯರಿಗೂ ಅರ್ಥವಾಗುವಂತೆ ತಿಳಿಹೇಳುವುದು, ಅಪೌಷ್ಟಿಕತೆ ಹಸಿವು ಮತ್ತು ಬಡತನಗಳ ನಿವಾರಣೆಗಾಗಿ ಸದೃಢವಾದ ಸೂತ್ರಗಳನ್ನು ಕಂಡುಹಿಡಿಯುವುದು, ವಿಶ್ವ ಆಹಾರ ದಿನದ ಮುಖ್ಯ ಉದ್ದೇಶಗಳು.


ಜನಸಂಖ್ಯಾ ಸ್ಫೋಟದಿಂದ ತತ್ತರಿಸುತ್ತಿರುವ ಈ ಭೂಮಂಡಲ ತನಗೆ ಬೇಕಾದ ಆಹಾರದ ಅವಶ್ಯಕತೆಗಳನ್ನು ಪೂರೈಸಿಕೊಳ್ಳುವಲ್ಲಿ ಸಂಪೂರ್ಣವಾಗಿ ವಿಫಲವಾಗಿದೆ. ಅರ್ಧದಷ್ಟು ಜನ ಅರೆ ಹೊಟ್ಟೆಯಲ್ಲಿ ಜೀವನನೂಕುತ್ತಿದ್ದಾರೆ. ಅವರ ದುಡಿಮೆಗಳು ಅವರನ್ನು ಒಳ್ಳೆಯ ಆಹಾರದಿಂದ ವಂಚಿತರನ್ನಾಗಿ ಮಾಡಿವೆ. ವಿಶ್ವ ಆಹಾರ ಸಂಸ್ಥೆ (W.F.O) 1974ರಲ್ಲಿ ಹೊರಡಿಸಿದ ಘೋಷಣೆ : "ಈ ಜಗತ್ತಿನಲ್ಲಿ ಜನ್ಮತಾಳಿದ ಯಾವುದೇ ಮಗುವಾಗಲಿ, ಸ್ತ್ರೀಯಾಗಲಿ, ಪುರುಷ ನಾಗಲಿ ಹಸಿವೆಯಿಂದ ನಿದ್ರಾದೇವಿಯ ವಶವಾಗಿ ಸಾಯಬಾರದು. ಮತ್ತು ಅಪೌಷ್ಟಿಕತೆಯಿಂದ ಮಾನವನ ಶಾರೀರಕ, ಬೌದ್ಧಿಕ, ಮಾನಸಿಕ

ಬೆಳವಣಿಗೆಗಳು ಕುಂಟಿತವಾಗಬಾರದು" ಹತ್ತು ವರ್ಷಗಳ ಅವಧಿಯಲ್ಲಿ ಈ ಎಲ್ಲ ಜಾಗತಿಕ ಭಯಾನಕ ಸಮಸ್ಯೆಗಳಿಗೆ ಶಾಶ್ವತ ಮತ್ತು ಕ್ರಮಬದ್ಧವಾದ ಪರಿಹಾರೋಪಾಯಗಳನ್ನು ಕಂಡುಹಿಡಿಯ ಬೇಕಾಗಿದೆ.

ಹೊಸ ಹೊಸ ಕೃಷಿ ಸಂಶೋಧನೆಗಳಿಂದ ಆಹಾರದ ಉತ್ಪನ್ನವನ್ನು ಹೆಚ್ಚಿಸಿ, ಅಭಿವೃದ್ಧಿ ಹೊಂದುತ್ತಿರುವ ದೇಶಗಳತ್ತ ಈ ಸಂಶೋಧನೆಗಳ ಲಾಭ ಮತ್ತು ತಿಳುವಳಿಕೆಗಳನ್ನು ರವಾನಿಸಬೇಕಿದೆ. ಅಲ್ಲದೇ ನಮಗಾಗಿ ಸದಾ ಕಾಲ ಗಾಳಿ, ಬಿಸಿಲು, ಮಳೆಗಳೆನ್ನದೇ ಹೊಲಗಳಲ್ಲಿ ದುಡಿಯುತ್ತಿರುವ ರೈತರ ಜೀವನ ಮಟ್ಟವನ್ನು ಹೆಚ್ಚಿಸುವ ಕ್ರಮಗಳನ್ನು ಗುರುತಿಸಬೇಕಾಗಿದೆ. ಆತನ ಜೀವನವನ್ನು ಹಸನು ಮಾಡಬೇಕಿದೆ. ಆತನ ಬೇಡಿಕೆ ಮತ್ತು ಆಗು ಹೋಗುಗಳತ್ತ ಮಾನವೀಯ ದೃಷ್ಟಿ ಬೀರಬೇಕಿದೆ. ಆತನ ಸಮಾಜದ ನಿರಂತರ ಸೇವೆಯನ್ನು ಪರಿಗಣಿಸಿ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಹ ಸಲ್ಲಿಸಬೇಕಾಗಿರುವುದು ನಮ್ಮ ಆದ್ಯ ಕರ್ತವ್ಯವಾಗಿದೆ. 'ಹಸಿರು ಕ್ರಾಂತಿ'ಯಿಂದ ಈ ನಿಟ್ಟಿನಲ್ಲಿ ಸಾಕಷ್ಟು ಅನುಕೂಲಗಳಾಗಿದ್ದರೂ ರಾವಣನ ಹೊಟ್ಟೆಗೆ ಅರೇ ಮಜ್ಜಿಗೆಯಾದಂತಿದೆ.

ಅಂಚೆ ಚೀಟಿ ಬಿಡುಗಡೆ : 16–10–1981.

# ಚಾರ್ಲಸ್ ಡಾರ್ವಿನ್ : (1809-1882)




1859ರಲ್ಲಿ ಹೊರಬಂದ "ಜೀವ ಜಾತಿಗಳ ಉಗಮ" (The origin of species) ಪುಸ್ತಕ ಬಿಡುಗಡೆಯಾದ ದಿನವೇ ಅದರ ಎಲ್ಲ ಪ್ರತಿಗಳು ಮಾರಾಟವಾಗಿ 'ಪುಸ್ತಕ ಪ್ರಪಂಚ'ದ ವಿಶಿಷ್ಟ ದಾಖಲೆಯನ್ನು ನಿರ್ಮಿಸಿತು. ಅದರ ಲೇಖಕನೇ ನಮ್ಮ ಈ ಚಾರ್ಲಸ್ ಡಾರ್ವಿನ್. ಅದು ಜನರ ಆಲೋಚನಾ ಕ್ರಮದಲ್ಲಿ ಕ್ರಾಂತಿಯನ್ನೇ ಮೊಳಗಿಸಿತು. ಡಾರ್ವಿನನ ವಾದವನ್ನು ಅನುಸರಿಸಿ ಮುಂದುವರೆದ ಜೀವ ವಿಜ್ಞಾನಿಗಳು ಇಂದು ಪ್ರಯೋಗಶಾಲೆಯಲ್ಲಿ ಜೀವಸೃಷ್ಟಿ ಮಾಡಬಲ್ಲವರಾಗಿದ್ದಾರೆ.


ಚಾರ್ಲಸ್ ಡಾರ್ವಿನ್ 1809ರಲ್ಲಿ ಇಂಗ್ಲಂಡಿನ ಶ್ರೂಷ ಬರಿಯಲ್ಲಿ ರಾಬರ್ಟ್ ಮತ್ತು ಸುಸಾನ ದಂಪತಿಗಳ 5ನೆಯ ಮಗವಾಗಿ ಜನಿಸಿದನು. ಓದಿನ ಆರಂಭಿಕ ಹಂತಗಳಲ್ಲಿಯೇ ಪ್ರಕೃತಿ, ಇತಿಹಾಸ, ಪ್ರವಾಸ ಹಾಗೂ ಸಾಹಿತ್ಯ-ವಿಶೇಷವಾಗಿ ಕವಿತೆಗಳಲ್ಲಿ ಅಗಾಧವಾದ ಆಸಕ್ತಿಯನ್ನು ಬೆಳೆಸಿಕೊಂಡನು. 16ನೆಯ ವಯಸ್ಸಿನಲ್ಲಿ ವೈದ್ಯಕೀಯ ವಿದ್ಯಾರ್ಥಿಯಾಗಿ ಎಡಿನಬರೋ ವಿಶ್ವವಿದ್ಯಾಲಯವನ್ನು ಸೇರಿದನು. ವೈದ್ಯಕೀಯ ವಿದ್ಯಾಭ್ಯಾಸಗಳು ಆತನ ಗುಣಧರ್ಮಗಳಿಗೆ ಸರಿಬರದ ಕಾರಣ ಅದಕ್ಕೆ ತೀಲಾಂಜಲಿಯನ್ನಿತ್ತು ಕ್ಯಾಂ-ಬ್ರಿಜ್‌ನ ಕ್ರಿಸ್ತ ಕಾಲೇಜಿಗೆ ದೈವಜ್ಞಾನ ಶಾಸ್ತ್ರ (Theology) ದ ವಿದ್ಯಾರ್ಥಿಯಾಗಿ 1828ರಲ್ಲಿ ಸೇರಿದನು. ಪದವಿಯನ್ನು ಶೀಘ್ರವೇ ಗಳಿಸಿದನಾದರೂ ತನ್ನ ಹೆಚ್ಚಿನ ಬಿಡುವಿನ ವೇಳೆಯನ್ನು ಪ್ರಕೃತಿ ಇತಿಹಾಸವನ್ನು ಅಭ್ಯಸಿಸುವಲ್ಲಿ ಕಳೆದನು. ತನ್ನ ವಯಸ್ಸಿನ

22ರಲ್ಲಿ (1831ರಲ್ಲಿ) ಪ್ರಪಂಚ ಪರ್ಯಟನ (Momentous Globe Girdling Voyage) ಕೈಕೊಂಡು ಜಗತ್ತಿನ ಬಹುಪಾಲು ಪ್ರದೇಶಗಳನ್ನು ಸುತ್ತಾಡಿ ತಾನು ಕಂಡ, ಅನುಭವಿಸಿದ ಘಟನೆಗಳ ಸೂಕ್ಷ್ಮಾತೀ ಸೂಕ್ಷ್ಮವಾದ ವಿವರಗಳನ್ನು ಕಣ್ಣಿಗೆ ಕಟ್ಟುವಂತೆ ತನ್ನ ದಿನಚರಿಯಲ್ಲಿ ದಾಖಲಿಸಿರುವನು. "The Descent of man" (1871) ಎಂಬ ಗ್ರಂಥ ಇಂದಿಗೂ ಪ್ರಸ್ತುತವಾಗಿದ್ದು ಇಂದಿನ ಜೀವವಿಜ್ಞಾನಿಗಳ ಮೇಲೂ ತನ್ನ ಪ್ರಭಾವವನ್ನು ಬೀರುವಲ್ಲಿ ಯಶಸ್ವಿಯಾಗಿದೆ.

ಡಾರ್ವಿನ್‌ನ ತಂದೆ ವೈದ್ಯ. ಅವನ ತಾತ ಇರಾಸ್ಮಸ್ ಡಾರ್ವಿನ್ ಪ್ರಕೃತಿ ವಿಜ್ಞಾನಿ, ವೈದ್ಯ ಹಾಗೂ ಕವಿ. ವಿಕಾಸ ವಾದಕ್ಕೆ ಪುಷ್ಟಿ ಕೊಡುತ್ತಿದ್ದವರಲ್ಲಿ ಈತನೂ ಒಬ್ಬ. ಡಾರ್ವಿನ್‌ನಿಗೆ ಪ್ರಾಣಿ, ಸಸ್ಯಗಳ ಬಗ್ಗೆ ವಿಶೇಷ ಆಸಕ್ತಿ. ಮಗನು ಮಠಾಧಿಪತಿಯಾಗ ಬೇಕೆಂಬುದು ಡಾರ್ವಿನ್‌ನ ತಂದೆಯ ಇನ್ನಿಲ್ಲದ ಆಶೆಯಾಗಿತ್ತು. ಆದರೆ ಡಾರ್ವಿನ್ ಪ್ರಕೃತಿ ವಿಜ್ಞಾನಿಯಾಗಿ ವಿಕಾಸವಾದಕ್ಕೆ ತನ್ನ ಅತ್ಯಮೂಲ್ಯವಾದ ಕೊಡುಗೆಯನ್ನು ನೀಡಿದ್ದಾನೆ. 1831ರಲ್ಲಿ ಕೇಂಬ್ರಿಜ್‌ದಿಂದ ಬಿ.ಎ. ಪದವಿಯನ್ನು ಪಡೆದರೂ ಜೀರುಂಡೆ ಸಂಗ್ರಹಿಸುವಲ್ಲಿ ಹೆನ್‌ಸ್ಲೊ ಎಂಬ ಸಸ್ಯವಿಜ್ಞಾನಿ ಪ್ರಾಧ್ಯಾಪಕರಲ್ಲಿ ವಿಷಯ ಸಂಗ್ರಹಣೆ ಹಾಗೂ ಭೂವಿಜ್ಞಾನದ ಪಾಠಗಳನ್ನು ಕಲಿಯುವುದರಲ್ಲಿ ತನ್ನ ವಿರಾಮ ಕಾಲವನ್ನು ಕಳೆದನು. 1831ರಲ್ಲಿ "ಹರ್ ಮೆಜೆಸ್ಟಿ ಶಿಪ್ ಬೀಗಲ್" [H.M.S. Beagle ಹೆಚ್.ಎಮ್.ಎಸ್. ಬೀಗಲ್] ಎಂಬ ಹಡಗಿನಲ್ಲಿ ಪ್ರಕೃತಿ ವಿಜ್ಞಾನಿಯಾಗಿ ಪ್ರಪಂಚದ ವಿವಿಧ ಪ್ರದೇಶಗಳನ್ನು ಸಂದರ್ಶಿಸುವ ಸಂದರ್ಭ ದೊರಕಿದ್ದು ಡಾರ್ವಿನ್‌ನ ಜೀವನದಲ್ಲಿ ಹೊಸ ಘಟ್ಟಕ್ಕೆ ನಾಂದಿಯಾಯಿತು. ಡಾರ್ವಿನ್‌ನ ದಿನಚರಿ "ಪ್ರಕೃತಿ ವಿಜ್ಞಾನಿಯ ಬೀಗಲ್ ಪ್ರವಾಸ" ಎಂಬುದು ಅತ್ಯಂತ ಮನಮೋಹಕ ಪ್ರವಾಸ ಸಾಹಿತ್ಯ ಗ್ರಂಥವೆಂದು ಹೆಸರುವಾಸಿಯಾಯಿತು. ಡಾರ್ವಿನ್‌ನ ಸಿದ್ಧಾಂತಕ್ಕೆ "ಬಾಳ್ವೆಗಾಗಿ ಹೋರಾಟ" (Struggle for Existence) ಮತ್ತು "ಯೋಗ್ಯತಮ ಜೀವಿಗಳ ಉಳಿಯುವಿಕೆ" (Survival of the Fittest) ಎಂಬ ಪ್ರಖ್ಯಾತ ಪದಜೋಡಣೆಗಳನ್ನು ಒದಗಿಸಿದವನು ಡಾರ್ವಿನ್‌ನ ಸಮಕಾಲೀನ ಸ್ನೇಹಿತ ಹರ್ಬರ್ಟ್ ಸ್ಪೆನ್ಸರ್. ಡಾರ್ವಿನನ ಇತರ ಕೃತಿಗಳು 1) ಹವಳ ದ್ವೀಪದ ರಚನೆ ಮತ್ತು ಹಂಚಿಕೆ. 2) ಅಗ್ನಿಪರ್ವತ ದ್ವೀಪಗಳು ಮತ್ತು 3) ಭೂವೈಜ್ಞಾನಿಕ ವೀಕ್ಷಣೆಗಳು. ಥಾಮಸ್ ಹರ್ಲೆಸಿ ಹಾಗೂ ಹರ್ಬರ್ಟ್ ಸ್ಪೆನ್ಸರ್ ವಿಜ್ಞಾನಿಗಳು ಈತನ ವಿಕಾಸವಾದದ ಬೆಂಬಲಿಗರಾದರು.

ಸ್ಟಾಂಪು ಮತ್ತು ಮೊದಲ ದಿನ ಆವರಣದ ವಿನಸ್ಯಾಕಾರರು : ಮಿ॥ ಎಂ. ಮಂಡರ್, ಕ್ಯಾನ್ಸಲೇಷನ್ ಚರಣಜಿತರಾಲರಿಂದ. ಬಿಡುಗಡೆ : 18–5–1983.

# 12ನೆಯ ಅಂತರರಾಷ್ಟ್ರೀಯ ಕುಷ್ಠರೋಗ ಸಮ್ಮೇಳನ : ದೆಹಲಿ




ಜಗತ್ತಿನ ಎಲ್ಲ ಕುಷ್ಠರೋಗ ತಜ್ಞರು ಕೂಡಿ ರಚಿಸಿಕೊಂಡಿರುವ ಸಂಸ್ಥೆಯೇ ಆಯ್.ಎಲ್.ಎ. (I.L.A: International Leprosy Association) ಈ ಸಂಸ್ಥೆಯ ಎಲ್ಲ ಪ್ರಾಥಮಿಕ ಸದಸ್ಯರು ಪ್ರತಿ ಐದು ವರ್ಷಗಳಿಗೊಮ್ಮೆ ಒಂದೆಡೆ ಸೇರಿ ಕಳೆದ ಐದು ವರ್ಷಗಳಲ್ಲಾದ ವಿಶೇಷ ಸಂಶೋಧನೆಗಳ ಬಗ್ಗೆ ಚರ್ಚಿಸಿ ಉಪಯುಕ್ತವಾದ ದುಬಾರಿಯಲ್ಲದ ಹಾಗೂ ಬಡ ರೋಗಿಗಳನ್ನು ಸಹ ಸುಲಭವಾಗಿ ತಲುಪುವ ಸಂಶೋಧನೆಗಳನ್ನು ಕುಷ್ಠರೋಗ ನಿರ್ಮೂಲನಾ ಆಂದೋಲನದಲ್ಲಿ ಅಳವಡಿಸಿಕೊಳ್ಳುವರು. ಮೆಕ್ಸಿಕೋದಲ್ಲಿ ಜರುಗಿದ 11ನೆಯ ಅಂತರರಾಷ್ಟ್ರೀಯ ಕುಷ್ಠರೋಗ ಸಮ್ಮೇಳನದಲ್ಲಿ ಹಿಂದೆ ಕುಷ್ಠ ನಿವಾರಣ ಸಂಘದವರು ಭಾರತ ಸಕಾರದ ಸಂಯುಕ್ತಾಶ್ರಯದಲ್ಲಿ ಮುಂದಿನ ಅಂತರ್ರಾಷ್ಟ್ರೀಯ ಕುಷ್ಠರೋಗ ಸಮ್ಮೇಳನವನ್ನು ಭಾರತದ ರಾಜಧಾನಿ ದೆಹಲಿಯಲ್ಲಿ ಸಂಘಟಿಸಬೇಕೆಂದು ಕೇಳಿಕೊಂಡ ಮನವಿಯನ್ನು ಮನ್ನಿಸಿದ್ದರ ಫಲವೇ ಈ 12ನೆಯ ಅಂ. ಕು. ಸಮ್ಮೇಳನ. ಪ್ರಥಮ ಬಾರಿಗೆ ಯುವ ಕುಷ್ಠ ರೋಗತಜ್ಞರು ಒಂದೆಡೆ ಸೇರಿ, ನಾನಾ ದೇಶಗಳಿಂದ ಬಂದ ಸುಮಾರು 1200 ಪ್ರತಿನಿಧಿಗಳ ಜೊತೆಯಲ್ಲಿ

ಕುಷ್ಠರೋಗದ ಬಗ್ಗೆ ಸಾಕಷ್ಟು ಚರ್ಚಿಸಿ ವಿಚಾರ ವಿನಿಮಯ ಮಾಡಿಕೊಳ್ಳಲು ಅನುವು ದೊರೆತಿತು.

ಅಂತರರಾಷ್ಟ್ರೀಯ ಕುಷ್ಠರೋಗ ಸಂಸ್ಥೆಯ ಚಟುವಟಿಕೆಗಳತ್ತ ಒಂದು ದೃಷ್ಟಿ ಹರಿಸೋಣ.

i) ಪ್ರತಿ ಮೂರು ತಿಂಗಳುಗಳಿಗೆ ಒಂದರಂತೆ (ತ್ರೈಮಾಸಿಕ) ಅಂತರ ರಾಷ್ಟ್ರೀಯ ಪತ್ರಿಕೆಯ ಪ್ರಕಟಣೆ.

ii) ಪ್ರಪಂಚದ ವಿವಿಧ ಸರ್ಕಾರಗಳಿಗೆ ಕುಷ್ಠರೋಗ ನಿವಾರಣೆಯ ವಿಷಯದಲ್ಲಿ ಸುಲಭೋಪಾಯಗಳನ್ನು ಸೂಚಿಸುವುದು ಹಾಗೂ ನೆರವು ನೀಡುವುದು.

iii) ಆಯ್.ಎಲ್.ಎ.ಯು ವಿಶ್ವ ಆರೋಗ್ಯ ಸಂಸ್ಥೆ ಹಾಗೂ ಅದರ ಘಟಕಗಳ ಸಹಾಯ ಮತ್ತು ಸಹಕಾರಗಳನ್ನು ಪಡೆದು ಅವುಗಳ ಸಂಯುಕ್ತಾಶ್ರಯದಲ್ಲಿ ಕುಷ್ಠರೋಗ ನಿವಾರಣೆಯ ಸಂಬಂಧದಲ್ಲಿ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.


iv) ಪ್ರತಿ ಐದು ವರ್ಷಗಳಿಗೊಮ್ಮೆ ಅಂತರರಾಷ್ಟ್ರೀಯ ಮಟ್ಟದ ಸಮ್ಮೇಳನವನ್ನು ಸಂಘಟಿಸುವುದು.

"ಕುಷ್ಠರೋಗ ಪೂರ್ವ ಜನ್ಮದ ಪಾಪದ ಫಲ"ವೆಂದು ನಂಬಿದ್ದ ಕಾಲದಲ್ಲಿ. ಕುಷ್ಠರೋಗದ ರೋಗಾಣುಗಳನ್ನು ಪ್ರಥಮ ಬಾರಿಗೆ ಪತ್ತೆಹಚ್ಚಿ ಸಾಮಾಜಿಕ ಮೂಢನಂಬಿಕೆಗಳಿಗೆ ಬಲಿಯಾಗಿದ್ದ ಜನರನ್ನು ಎಚ್ಚರಿಸದ ವಿಜ್ಞಾನಿಯೇ ಆರ್ಮಯೂರ್ ಹ್ಯಾನ್‌ಸೆನ್. ಆತನು ನಾರ್ವೆ ದೇಶದ ವೈದ್ಯ ಮಹಾಶಯ. ಈ ಕಾಯಿಲೆಯ ಮೂಲ ಈ ಮೊದಲು ಯಾರಿಗೂ ತಿಳಿದಿರಲಿಲ್ಲ. ಸೂಕ್ಷ್ಮ ದರ್ಶಕದಲ್ಲಿ ರೋಗಾಣುಗಳನ್ನು ಗುರುತಿಸಿ, ಬೇರ್ಪಡಿಸಿ ಕಾಯಿಲೆಯ ಮೂಲವನ್ನು ಕಂಡು ಹಿಡಿದಿದ್ದನ್ನು ನೆನಪಿಸುವುದಕ್ಕೋಸ್ಕರ ಕುಷ್ಠ ಕಾಯಿಲೆಗೆ 'ಹ್ಯಾನ್‌ಸೆನ್ಸ್ ಕಾಯಿಲೆ'ಯೆಂದು ನಾಮಕರಣ ಮಾಡಿದರು. ಮೊದಲ ಹಂತಗಳಲ್ಲಿ ಗುರುತಿಸಲ್ಪಟ್ಟರೇ ಇದು ಸಂಪೂರ್ಣವಾಗಿ ವಾಸಿಯಾಗುವ ಕಾಯಿಲೆ. ದೀರ್ಘ ಕಾಲದ ಸಂಪರ್ಕದಿಂದ ಮಾತ್ರ ಒಬ್ಬರಿಂದ ಒಬ್ಬರಿಗೆ ಹರಡುವ ಕಾಯಿಲೆ. ಕುಷ್ಠರೋಗ ಕಾಯಿಲೆಯ ಅಲಕ್ಷ್ಯ ನಿಮ್ಮನ್ನು ಅಂದಗೇಡಿ ಮಾಡುವದಲ್ಲದೇ, ಸಮಾಜದಿಂದ ಬಹಿಷ್ಕಾರಕ್ಕೂ ಒಳಬೇಕಾಗಬಹುದಾದ ಸಮಯ ಒಂದಿತ್ತು. ಈಗ ಜನರಲ್ಲಿ ಆರೋಗ್ಯಪ್ರಜ್ಞೆ ಹೆಚ್ಚಿರುವದರಿಂದ ಕುಷ್ಠರೋಗಿಗಳು ಭಯಪಡಬೇಕಿಲ್ಲ. ನಿಯಮಿತವಾದ ಔಷದೋಪಚಾರಗಳಿಂದ ಇದನ್ನು ಬೇರು ಸಹಿತ ಕಿತ್ತು ಎಸೆಯಬಹುದು. ರೋಗವು ಸಂಪೂರ್ಣವಾಗಿ ವಾಸಿಯಾಗಲು ಸಾಕಷ್ಟು ದಿನಗಳು ಕೆಲವೊಮ್ಮೆ ವರ್ಷಗಳು ಬೇಕಾಗುವುದರಿಂದ ರೋಗಿಗಳಿಗೆ ತಾಳ್ಮೆಯಿರಬೇಕಾದುದು ತೀರಾ ಅವಶ್ಯ. ವೈದ್ಯರು ಸಹ ಈ ದಿಶೆಯಲ್ಲಿ ರೋಗಿಗಳ ಜೊತೆಯಲ್ಲಿ ನಯವಾಗಿ ವರ್ತಿಸಬೇಕು, ಹಾಗೂ ಅವರ ಚಿಂತೆಗಳನ್ನು ದೂರು ಮಾಡಲು ಇನ್ನಿಲ್ಲದ ಪ್ರಯತ್ನಗಳನ್ನು ಮಾಡಬೇಕು. ಆಗ ಮಾತ್ರ ನಾವುಗಳು ಕುಷ್ಠರೋಗದಿಂದ ಸಂಪೂರ್ಣವಾಗಿ ಬಿಡುಗಡೆ

ಹೊಂದಿದ ರಾಷ್ಟ್ರವನ್ನು ಕಟ್ಟಬಹುದು. ಈಗೀಗ ಈ ಕಾಯಿಲೆಯ ನಿಯಂತ್ರಣಕ್ಕೆ ಲಸಿಕೆಯು ಸಹ ಲಭ್ಯವಾಗಿರುವುದು ಈ ರೋಗದಿಂದ ಬಳಲುವವರಿಗೆ ಒಂದು ಆಶಾಕಿರಣವೇ ಸೈ !

ಭಾರತೀಯ ಅಂಚೆ ಇಲಾಖೆಯವರು ದೆಹಲಿಯಲ್ಲಿ ಸಂಘಟಿಸಲಾದ ಕುಷ್ಠರೋಗ ಮೇಳದ ನೆನಪಿಗಾಗಿ ಹೊರತಂದ ಅಂಚೆಚೀಟಿ ತುಂಬಾ ಮಾರ್ಮಿಕವಾಗಿ ಮೂಡಿಬಂದಿದೆ. ಪ್ರಥಮ ದಿನ ಆವರಣದ ಒಂದು ಬದಿಯಲ್ಲಿ ಆರ್ಮ್ಯೂರ್ ಹಾನ್‌ಸೆನ್‌ರ ಭಾವಚಿತ್ರ ಮೂಡಿಬಂದಿದೆ. ಪ್ರಥಮ ದಿನದ ಕ್ಯಾನ್ಸಲೇಶನ್ ಮುದ್ರೆಯನ್ನು ನೀವು ನೋಡಿಯೇ ಆನಂದಪಡಬೇಕು. ಅಂಚೆಚೀಟಿ ಹಾಗೂ ಪ್ರಥಮ ದಿನ ಆವರಣದ ವಿನ್ಯಾಸಕಾರರು ಶ್ರೀ ಜೆ.ಪಿ. ಇರಾಣಿ, ಪ್ರಥಮ ದಿನದ ಮುದ್ರೆಯ ವಿನ್ಯಾಸಕಾರ್ತಿ : ಶ್ರೀಮತಿ ಅಲ್ಕಾ ಶರ್ಮಾ.

# ಯುನಿಸೆಫ್ (Unicef) ದ 50ನೆಯ ವಾರ್ಷಿಕೋತ್ಸವ : 1986




ಯುನಿಸೆಫ್‌ದ 40ನೆಯ ವಾರ್ಷಿಕೋತ್ಸವ ಸಂದರ್ಭದಲ್ಲಿ ಭಾರತೀಯ ಅಂಚೆ ಇಲಾಖೆಯವರು ಹೊರತಂದಿರುವ ಎರಡು ಮುದ್ದಾದ ಅಂಚೆಚೀಟಿಗಳನ್ನು ಮೊದಲ ದಿನದ ಆವರಣದ ಮೇಲೆ ವಿಶೇಷ ಕ್ಯಾನ್ಸಲೇಶನ ಮುದ್ರೆಯೊಂದಿಗೆ ಕಾಣಬಹುದಾಗಿದೆ. ಯುನಿಸೆಫ್‌ದ ಆರಂಭವಾದದ್ದು 1946ರಲ್ಲಿ. ಉದ್ದೇಶ : ಮಕ್ಕಳ ಸಂರಕ್ಷಣೆ ಮತ್ತು ಪಾಲನೆ ಹಾಗೂ ಜೊತೆ ಜೊತೆಯಲ್ಲಿಯೇ ಮಕ್ಕಳ ವಿಕಾಸದತ್ತ ಸುಗಮ ದಾರಿಗಳ ನಿರ್ಮಾಣ. ವಿಶ್ವಸಂಸ್ಥೆಯ ಪ್ರಥಮ ಸಾಮಾನ್ಯ ಅಧಿವೇಶನದಲ್ಲಿಯೇ ಯುನಿಸೆಫ್‌ದ ಜನನ. (Unicef : United Nations Children's Fund) ಈ ಸಂಸ್ಥೆ ಮೊದ ಮೊದಲಿಗೆ ಯುದ್ಧಗಳಲ್ಲಿ ಮಡಿದವರ ಮಕ್ಕಳತ್ತ ಮಾತ್ರ ಆಸಕ್ತಿ ವಹಿಸಿತ್ತು. ಆನಂತರ ದಿನಗಳಲ್ಲಿ ಯುರೋಪ ಮತ್ತು ಚೀನಾ ದೇಶಗಳಲ್ಲಿಯ ದಿಕ್ಕಿಲ್ಲದ ಅನಾಥ ಮಕ್ಕಳಿಗೆ ಆಹಾರ ಔಷಧಿ ಮತ್ತು ಅರಿವೆಗಳ ಪೂರೈಕೆಗಳತ್ತ ಗಮನಹರಿಸಿತು. ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿಯ ಮಕ್ಕಳ ಸಮಸ್ಯೆಗಳು ತುರ್ತು ಪರಿಸ್ಥಿತಿಗಿಂತಲೂ ಹೆಚ್ಚಿನ ಆತಂಕಕ್ಕೆ ಕಾರಣವಾಗಿರುವದನ್ನು ಮನಗಂಡು 1953ರಲ್ಲಿ ವಿಶ್ವ ಸಂಸ್ಥೆ ಈ ಮಕ್ಕಳ ಅಭ್ಯುದಯದ ಕಾರ್ಯಕ್ರಮಗಳು ಸದಾಕಾಲ ಜಾರಿಯಲ್ಲಿರಬೇಕೆಂದು ನಿರ್ಧರಿಸಿ United Nations

Childrens Fund' ಎಂಬುದಾಗಿ ಹೆಸರನ್ನು ಬದಲಾಯಿಸಿಕೊಂಡಾಗ್ಯೂ Unicef ಎಂಬ ಸಂಕ್ಷಿಪ್ತ ಹೆಸರನ್ನು ಬಿಟ್ಟುಕೊಡಲಿಲ್ಲ. (Unicef : United Nations International Children's Emergency Fund) ಯುನಿಸೆಫ್‌ದ ಪ್ರಗತಿಪರ ಕಾರ್ಯಕ್ರಮಗಳನ್ನು ಮೆಚ್ಚಿಕೊಂಡು 1965ರಲ್ಲಿ ಈ ಸಂಸ್ಥೆಗೆ ನೊಬೆಲ್ ಶಾಂತಿ ಪ್ರಶಸ್ತಿಯನ್ನು ಪ್ರದಾನ ಮಾಡಲಾಯಿತು. Unicef ಭಾರತ ಸರ್ಕಾರದ ಜೊತೆಯಲ್ಲಿ 1949ರಿಂದಲೇ ತುಂಬಾ ಸೌಹರ್ದಯುತವಾದ ಸಂಬಂಧಗಳನ್ನು ಹೊಂದಿರುವುದನ್ನು ಇಲ್ಲಿ ಸ್ಮರಿಸಬಹುದು.


Unicef 118 ರಾಷ್ಟ್ರಗಳಲ್ಲಿ ತನ್ನ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದರೂ ಭಾರತದ ಜೊತೆಗಿರುವ ಸಂಬಂಧ ತುಂಬಾ ಅರ್ಥಪೂರ್ಣವಾಗಿದೆ. ಭಾರತ ಸರ್ಕಾರವು ಈ ಕಾರ್ಯಕ್ರಮಗಳ ಯಶಸ್ಸಿಗಾಗಿ ತುಂಬಾ ಮುಕ್ತ ಮನಸ್ಸಿನಿಂದ ಸಹಕರಿಸಿದ್ದರಿಂದ ಲಸಿಕೆ ನೀಡುವ ಕಾರ್ಯಕ್ರಮ (Immunization Programme) ತುಂಬಾ ಯಶಸ್ವಿಯಾಗಿದೆ. ಅತೀಸಾರ ಭೇದಿಯಿಂದ ಬಳಲುತ್ತಿದ್ದ ಮಕ್ಕಳು ಈಗ ಉಲ್ಲಾಸದಿಂದಿರಲು ORS=Oral Rebydration Solution ದಿಂದ ಸಾಧ್ಯವಾಗಿದೆ. ಅದೊಂದು 20ನೆಯ ಶತಮಾನಕ್ಕೆ Unicef ದ ಮಹಾನ್ ಕೊಡುಗೆಯೆಂದರೂ ತಪ್ಪಾಗದು. ನಮ್ಮ ದೇಶದಲ್ಲಿ ಮಕ್ಕಳು ಒಂದು ವರ್ಷ ತುಂಬುವಷ್ಟರಲ್ಲಿ ಮಹಾಮಾರಿಗಳಾದ ಪೋಲಿಯೋ, ಧನುರ್ವಾಯು, ಗಂಟಲುಬೇನೆ, ನಾಯಿಕೆಮ್ಮು, ಕ್ಷಯ ಮತ್ತು ದಢಾರಗಳಿಂದ ಬಹಳ ತೊಂದರೆಗಳಿಗೊಳಗಾಗುತ್ತಿದ್ದರು ಮತ್ತು ವರ್ಷವೊಂದರಲ್ಲಿಯೇ 20 ಲಕ್ಷ ಹಸುಳೆಗಳು ಇಹಲೋಕವನ್ನು ತ್ಯಜಿಸುತ್ತಿದ್ದವು. ಈಗ ಈ ಸಾವು ನೋವುಗಳನ್ನು ತಪ್ಪಿಸಲು ಭಾರತವು ಸಮರೋಪಾಯದಲ್ಲಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು ಇತರ ದೇಶಗಳಿಗೆ ಮೇಲ್ಪಂಕ್ತಿಯಾಗಿದೆ.

ಸ್ವರ್ಗೀಯ ಪ್ರಧಾನಿ ಶ್ರೀಮತಿ ಇಂದಿರಾಗಾಂಧಿಯವರ ಜನ್ಮದಿನವಾದ 19 ನವೆಂಬರ್ 1985ರಲ್ಲಿ ಒಂದು ಪಂಚವಾರ್ಷಿಕ ಆಂದೋಲನದ ರೂಪದಲ್ಲಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡರು. ಮಕ್ಕಳನ್ನು ಒಂದು ವರ್ಷ ತುಂಬುವುದರೊಳಗಾಗಿ ಷಡ್ವೈರಿಗಳಿಂದ ರಕ್ಷಿಸಲು ಹಾಗೂ ಬಾಣಂತಿ ಸ್ತ್ರೀಯರನ್ನು ಧನುರ್ವಾಯುವಿನಿಂದ ಪಾರು ಮಾಡಲು ಲಸಿಕೆ ನೀಡುವ ಕಾರ್ಯಕ್ರಮಗಳತ್ತ ವಿಶೇಷ ಆಸ್ತೆ ವಹಿಸಲಾಯಿತು. ಈ ಕಾರ್ಯಕ್ರಮವನ್ನು "ಚಿರಂತನ ಸ್ಮಾರಕ" (Living Memorial) ವೆಂದು ಆಗಿನ ಪ್ರಧಾನಿಗಳಾಗಿದ್ದ ರಾಜೀವಗಾಂಧಿಯವರು ಬಣ್ಣಿಸಿದ್ದರು. ಕುಡಿಯಲು ಒಳ್ಳೆಯ ನೀರು, ನಿರ್ಮಲ ಪರಿಸರ, ಸಮುದಾಯ ಶಿಕ್ಷಣ ಹಾಗೂ ಹೆಣ್ಣು ಮಕ್ಕಳಿಗಾಗಿ ವಿಶೇಷ ತರಬೇತಿಗಳು ಇಂತಹ ಜ್ವಲಂತ ಸಮಸ್ಯೆಗಳ ನಿವಾರಣೆಯಲ್ಲಿ Unicef ಪ್ರಮುಖ ಪಾತ್ರವಹಿಸಿತು. ಸರ್ಕಾರವು ಈ ಎಲ್ಲ ಕಾರ್ಯಕ್ರಮಗಳ ಯಶಸ್ಸಿಗಾಗಿ ಉದಾರವಾಗಿ ಆರ್ಥಿಕ ದೇಣಿಗೆಗಳನ್ನು ನಿರಂತರವಾಗಿ ನೀಡುತ್ತಿರುವುದು ಸರ್ಕಾರದ ಧನಾತ್ಮಕಪಾತ್ರದ ಬಗ್ಗೆ ಜನರಲ್ಲಿ ಅರಿವು ಮೂಡಿದೆ.

ಅಂಚೆಚೀಟಿಯ ಬಿಡುಗಡೆ : 11–12–1986.

# ಮಾರಕ ಔಷಧಿಗಳಿಂದ ದೂರವಿರಿ

## (Beware of Drugs)




ಔಷಧಿಗಳ ಮೂಲ ಉದ್ದೇಶ ಕಾಯಿಲೆಗಳನ್ನು ವಾಸಿ ಮಾಡಿ ರೋಗಿಗಳ ಕಾರ್ಯಕ್ಷಮತೆಗಳನ್ನು ಹೆಚ್ಚಿಸಿ ಅವರು ಸಮಾಜಕ್ಕೆ ಹೊರೆಯಾಗದಂತೆ ನೋಡಿಕೊಳ್ಳುವುದಾಗಿದೆ. ಸದ್ಯ ನಮ್ಮ ದೇಶದಲ್ಲಿ ಅಡ್ಡಕಸಬಿ ವೈದ್ಯ (Quack) ರುಗಳಿಂದ ಔಷಧಿಗಳ ದುರುಪಯೋಗ ಹೆಚ್ಚುತ್ತಿದ್ದು ಆ ವಿಷಯದಲ್ಲಿ ಸರ್ಕಾರಗಳು ಮತ್ತು ವೈದ್ಯಕೀಯ ಸಂಘ ಸಂಸ್ಥೆಗಳು ಎಚ್ಚೆತ್ತುಕೊಳ್ಳಬೇಕಾಗಿದೆ. ನಮ್ಮ ದೇಶದಲ್ಲಿ 'ಆರೋಗ್ಯ ಪ್ರಜ್ಞೆ' ಯಿರುವ ಜನರು ಸಹ ಮಾಯ, ಮಂತ್ರ ಮಾಟಗಳಿಗೆ ಬಲಿಯಾಗಿ ಅಡ್ಡ ಕಸಬಿ ವೈದ್ಯರ ದಾಳಿಗೆ ಈಡಾಗುತ್ತಿರುವುದು ನಿಜವಾಗಿಯೂ ಶೋಚನೀಯ ಸ್ಥಿತಿಯೇ ಸರಿ.

ವೈದ್ಯಕೀಯ ಕಾಲೇಜುಗಳಲ್ಲಿನ 8–9 ವರ್ಷಗಳ ಕಠಿಣ ತಪಸ್ಸಿನ ಫಲದಿಂದ ಉತ್ತಮೋತ್ತಮವಾದ ಸ್ನಾತಕೋತ್ತರ ಪದವಿಗಳನ್ನು ಪಡೆದು ಹೊರಬಂದವರು ಸಹ ಅಡ್ಡ ಕಸಬಿ ವೈದ್ಯರ ದಾಳಿಗಳನ್ನು ದಿನನಿತ್ಯ ಎದುರಿಸಲೇಬೇಕಾಗಿದೆ. ಈ ಜ್ವಲಂತ ಸಮಸ್ಯೆಗೆ ಪರಿಹಾರ ಸಿಗದೇ ಔಷಧಿಗಳ ದುರುಪಯೋಗ ನಿಲ್ಲದು. ತಾವು ಉಪಯೋಗಿಸುವ ಔಷಧಿಗಳ ಬಗ್ಗೆ ಸ್ವಲ್ಪವೂ ಜ್ಞಾನವಿಲ್ಲದೇ ಇರುವದರಿಂದ ಅಡ್ಡ

ಕಸಬಿ ವೈದ್ಯರ ಸುಶ್ರೂಷೆಗಳಿಗೆ ಬಲಿಯಾಗಿ ಜನರ ಪ್ರಾಣ ಸಂಚಕಾರಕ್ಕೆ ಬಂದ ಸಾಕಷ್ಟು ಉದಾಹರಣೆಗಳಿವೆ. ಶಹರಿನಲ್ಲಿಯೇ R.M.P. (ಬಿಹಾರ, ಉತ್ತರ ಪ್ರದೇಶಗಳಿಂದ ನೋಂದಣಿ ಪಡೆದವರು) ಹಾಗೂ ನಾಟಿ ವೈದ್ಯರ ಹಾವಳಿ ತಪ್ಪಿಲ್ಲವೆಂದರೆ ಹಳ್ಳಿಗಳ ಪಾಡನ್ನು ನೀವೇ ಊಹಿಸಬಹುದು. ಜನರಲ್ಲಿ ಆರೋಗ್ಯ ಪ್ರಜ್ಞೆ ಮೂಡಿ ಕ್ರಾಂತಿಯಾದಲ್ಲಿ ಮಾತ್ರ ಅಳಲೇಕಾಯಿ ಪಂಡಿತರು ಗೂಡು ಸೇರಬಹುದಷ್ಟೆ ಕ್ವ್ಯಾಕ್‌ಗಳ ನಿಯಂತ್ರಣದಲ್ಲಿ ಸರ್ಕಾರದ ಎಲ್ಲ ವಿಭಾಗದವರು ಒಟ್ಟುಗೂಡಿ ಶ್ರಮಿಸಿದರೇ ಮಾತ್ರ ಈ ಸಮಸ್ಯೆಗೆ ವಿದಾಯ ಹೇಳಲು ಸಾಧ್ಯವಾಗುತ್ತದೆ.

"Self medication is injurious" ವೆಂಬುದು ತಿಳಿದಾಗ್ಯೂ ಸುಶಿಕ್ಷಿತರು ವೈದ್ಯರ ಸಲಹೆಗಳಿಲ್ಲದೇ ಅಲ್ಲಲ್ಲಿ ಓದಿದ್ದನ್ನು ನೆನಪಿಸಿಕೊಂಡು ತಮ್ಮನ್ನೇ ತಾವೇ ಬಲಿಪಶುಗಳನ್ನಾಗಿ ಪರಿವರ್ತಿಸಿಕೊಳ್ಳುತ್ತಿರುವುದು ನಿಜವಾಗಿಯೂ ಗಂಭೀರವಾದ ಸಮಸ್ಯೆ. ವೈದ್ಯರು ರೋಗಿಗಳು ಔಷಧಿಗಳ ವಿಷಯದಲ್ಲಿ ಏನಾದರೂ ಮಾಹಿತಿ ಕೇಳಿದಲ್ಲಿ ಆ ಔಷಧಿಗಳ ಬಗ್ಗೆ ಅವರಿಗೆ ಮನದಟ್ಟಾಗುವಂತೆ ವಿವರಿಸಿ ಅವುಗಳ ಪರಿಣಾಮ ಮತ್ತು ದುಷ್ಪರಿಣಾಮಗಳ ಬಗ್ಗೆ ತಿಳಿ ಹೇಳಬೇಕಾಗಿರುವುದು ಅವರ ಪ್ರಥಮ ಕರ್ತವ್ಯವಾಗಿದೆ. ಇಲ್ಲದ ಪಕ್ಷದಲ್ಲಿ ವೈದ್ಯರನ್ನು ಬಳಕೆದಾರರ ಕಾಯ್ದೆ (Consumer Act) ಯಡಿಯಲ್ಲಿ ಶಿಕ್ಷೆಗೆ ಗುರಿಪಡಿಸಬಹುದಾಗಿದೆ. ನಾವು ಉಪಯೋಗಿಸುವ ಔಷಧಿಗಳು ರಸಾಯನ ವಸ್ತುಗಳೇ. ಒಂದು ವಿಷವನ್ನು ಹೊರದೂಡಲು ಮತ್ತೊಂದು ವಿಷದ ಪ್ರಯೋಗ. ಇದಕ್ಕೆ ತಡೆ ಎಂಬುದಿಲ್ಲ. ತಡೆರಹಿತ ಬಸ್ಸಿನಂತೆ ಹಿಗ್ಗಾಮುಗ್ಗಾ ಮುನ್ನುಗ್ಗುವುದೇ ಇದರ ಗುರಿ.

ವಿಶ್ವ ಆರೋಗ್ಯ ಸಂಸ್ಥೆಯು ನಿಗದಿಪಡಿಸಿದ 200 ಔಷಧಿಗಳಿಂದಲೇ ಜಗತ್ತಿನ ಎಲ್ಲಾ ಭಾಗಗಳಲ್ಲಿಯ ಎಲ್ಲಾ ತರದ ರೋಗ-ರುಜಿನಗಳನ್ನು ಹತೋಟಿಗೆ ತರಲು ಸಾಧ್ಯವಿದ್ದಾಗ್ಯೂ ಈಗಲೂ ಈ ಕ್ಷೇತ್ರದಲ್ಲಿ ಅನಾವಶ್ಯಕವಾದ ಸುಮಾರು 60000 ಔಷಧಿಗಳ ಉತ್ಪತ್ತಿ ನಡೆಯುತ್ತಾ ಇರುವುದೆಂದರೆ ಈ ವಿಷಜಾಲದ ಪರಿಕಲ್ಪನೆ ಮೂಡಬಹುದು. 1976ರಲ್ಲಿ ಕೇಂದ್ರ ಸರ್ಕಾರದ ಆದೇಶದ ಮೇರೆಗೆ ರಚಿತವಾದ ಹಾಥಿ ಸಮಿತಿಯ ವರದಿಯಲ್ಲಿ ಯೋಗ್ಯವಾದ ಕೇವಲ 116 ಔಷಧಿಗಳು ಮಾತ್ರ ಬಳಕೆಗೆ ಸಾಕು ಎಂದು ತಿಳಿಸಿದೆ. ಈ ವರದಿ ಕೇಂದ್ರ ಸರ್ಕಾರದ ಲಕ್ಷ್ಯಕ್ಕೆ ಬಾರದೇ ಮೂಲೆ ಗುಂಪಾಗಿರುವುದು ಸರ್ವರಿಗೂ ವೇದ್ಯವಾದ ವಿಷಯ.

ಹಿರಿಯ ನೇತ್ರತಜ್ಞರೊಬ್ಬರ ಅನುಭವದ ನುಡಿಗಳತ್ತ ಒಂದು ದೃಷ್ಟಿ ಹರಿಸೋಣ. Todays doctors are more dangerous than medicines. Medicines are more dangerous than diseases. (ಇಂದಿನ ವೈದ್ಯರು ಔಷಧಿಗಳಿಗಿಂತ ಅಪಾಯಕಾರಿ ಮತ್ತು ಔಷಧಿಗಳು ರೋಗಗಳಿಗಿಂತಲೂ ಭಯಾನಕ/ಭಯಂಕರ) ಜನಸಾಮಾನ್ಯರಿಗೂ ಈ ವಿಷಯದಲ್ಲಿ ಸಾಕಷ್ಟು ಅರಿವು ಇದೆ ಎಂಬುದಕ್ಕೆ ಓರ್ವ ಹಿರಿಯರು ಹೇಳಿದ ಮಾತು ನೆನಪಾಗುತ್ತದೆ. "ನಿಮಗೆ ಅನಾರೋಗ್ಯವೆ? ಹಾಗಿದ್ದರೇ ಡಾಕ್ಟರರ ಹತ್ತಿರ ಹೋಗುವುದನ್ನು ಬಿಡಬೇಡಿ. ಯಾಕೆಂದರೆ ಅವರೂ ಬದುಕಬೇಕು.

ಅವರು ಬರೆದುಕೊಟ್ಟ ಔಷಧಿಗಳನ್ನು ಖರೀದಿಸಿರಿ. ಯಾಕೆಂದರೆ ಔಷಧ ವ್ಯಾಪಾರಿ ಬದುಕಬೇಕು. ಆದ ನೀವು ಖಂಡಿತ ಬದುಕಬೇಕಿದ್ದರೇ ಆ ಔಷಧಿಗಳನ್ನು ಮಾತ್ರ ಸೇವಿಸದೇ ಇದ್ದರಾಯಿತು." ಇದು ಸ್ವಲ್ಪ ಮಟ್ಟಿಗೆ ಅತಿಶಯವೆನಿಸಿದರೂ ಅರ್ಥವಿಲ್ಲದೇ ಇಲ್ಲ.

ಬಾಂಗ್ಲಾ ದೇಶದ ಡಾ॥ ಜಫರುಲ್ಲಾ ಚೌಧುರಿಯವರು ಹಾಥಿ ಸಮಿತಿಯ ವರದಿಯನ್ನು 1982ರಲ್ಲಿ ಅನುಷ್ಠಾನಗೊಳಿಸಿದರು. ಆರೋಗ್ಯ ಕಾಪಾಡುವ ಕೇವಲ 250 ಔಷಧಿಗಳ ತಯಾರಿಕೆಗಳಿಗೆ ಮಾತ್ರ ಅನುಮತಿಯಿತ್ತು ಯಾರ ಒತ್ತಡಕ್ಕೂ ಮಣಿಯದೇ ಸರ್ವರಿಗೂ ಆದರ್ಶಪ್ರಾಯವಾಗಿರುವರು. ಸದ್ಯ ಬಾಂಗ್ಲಾದೇಶದಲ್ಲಿ ಔಷಧಿಗಳ ಬೆಲೆಗಳು ಜನಸಾಮಾನ್ಯರ ಕೈಗೆ ಎಟಕುವಂತಿವೆ. ನಮ್ಮ ದೇಶದಂತಹ ಅಭಿವೃದ್ಧಿ ಹೊಂದುತ್ತಿರುವ ದೇಶಗಳು ಬಾಂಗ್ಲಾ ದೇಶದಿಂದ ಕಲಿಯಬೇಕಾದ ಪಾಠ ಇದಾಗಿದೆ.

ಕೊನೆಯ ಮಾತು : ನಿಷೇದಿಸಲ್ಪಟ್ಟ ಮತ್ತು ನಿಷೇದಿಸಬಹುದೆಂದು ಶಿಫಾರಸು ಮಾಡಲ್ಪಟ್ಟ ಔಷಧಿಗಳ ಪಟ್ಟಿಯೊಂದನ್ನು "ವಾಲಂಟರಿ ಹೆಲ್ತ ಅಸೋಸಿಯೇಶನ್ ಆಫ್ ಇಂಡಿಯಾ"ದವರು ಸಾರ್ವಜನಿಕರ ಪ್ರಯೋಜನಕ್ಕಾಗಿ ಪ್ರಕಟಿಸಿದ್ದಾರೆ. ಅದನ್ನೊಮ್ಮೆ ಕೂಲಂಕುಷವಾಗಿ ಪರಿಶೀಲಿಸುವುದು ನಮ್ಮೆಲ್ಲರ ಆರೋಗ್ಯದ ದೃಷ್ಟಿಯಿಂದ ಒಳ್ಳೆಯದು. ಸಾಮಾನ್ಯರಿಗೆ ತಿಳುವಳಿಕೆ ಕೊಡುವ ನಿಟ್ಟಿನಲ್ಲಿ ಭಾರತ ಸರ್ಕಾರವು ದಿನಾಂಕ 8–3–1991ರಂದು ಔಷಧಿಗಳ ಬಗ್ಗೆ ಎಚ್ಚರಿಕೆ ಇರಲಿ ಎಂಬ ಘೋಷಣೆಯೊಂದಿಗೆ ಅಂಚೆಚೀಟಿಯೊಂದನ್ನು ಹೊರಡಿಸಿದೆ.

ಭಾಗ : ಮೂರು

# ಅಂಚೆಲೋಕದ ಕೌತುಕಗಳು, ಅದ್ಭುತಗಳು ಮತ್ತು ಅವಿಸ್ಮರಣೀಯ ಘಟನೆಗಳು....

# ಅಂಚೆ ಲೋಕದ ವಿಸ್ಮಯಗಳು

1) ವಿಶ್ವದ ಪ್ರಪ್ರಥಮ ಅಂಚೆಚೀಟಿ 1840 ನೆಯ ಮೇ 6ರಂದು ಇಂಗ್ಲೆಂಡಿನಲ್ಲಿ ಬಳಕೆಗೆ ಬಂತು. ಈ ಅಂಚೆಚೀಟಿಯೇ "ಪೆನ್ನಿ ಬ್ಲಾಕ್" ಎಂದು ವಿಶ್ವಖ್ಯಾತಿ ಗಳಿಸಿದೆ.

2) ಭಾರತದ ಮೊದಲ ಅಂಚೆ ಚೀಟಿ 1852ರಲ್ಲಿ ಬಿಡುಗಡೆಯಾಯಿತು. ಈ ಅಂಚೆ ಚೀಟಿ "ಸಿಂಧ್ ಡಾಕ್" ಎಂಬ ಹೆಸರಿನಿಂದ ಖ್ಯಾತಿ ಪಡೆದಿದೆ. ವಿಶ್ವದಲ್ಲಿಯೇ ಹೊರಬಂದ ಪ್ರಥಮ ಕಾಗದದ ಅಂಚೆಚೀಟಿಗಳಲ್ಲಿ ಇದು ಒಂದಾಗಿದೆ. ಈಸ್ಟ್ ಇಂಡಿಯಾ ಕಂಪೆನಿಯ ಮೊಹರನ್ನು ಹೊತ್ತ ಈ ಅಂಚೆ ಚೀಟಿಗಳನ್ನು ಕಲ್ಲಚ್ಚಿನಲ್ಲಿ ಛಾಪಿಸಲಾಗುತ್ತಿತ್ತು. ಹೀಗಾಗಿ ಈ ಸ್ಟಾಂಪುಗಳು ದೋಸೆಯ ತದ್ರೂಪಕಾರದಂತಿರುತ್ತಿದ್ದವು. ಈ 'ಸಿಂಧಡಾಕ್' ಸ್ಟಾಂಪುಗಳು ಭಾರತದ ಸಿಂಧ ಪ್ರಾಂತ್ಯಕ್ಕೆ ಮಾತ್ರ ಸೀಮಿತವಾಗಿದ್ದವು. ಭಾರತವು ಏಷ್ಯಾ ಖಂಡದಲ್ಲಿಯೇ ಮೊದಲ ಅಂಚೆ ಚೀಟಿಗಳನ್ನು ಬಿಡುಗಡೆ ಮಾಡಿದ ಪ್ರಥಮ ದೇಶವಾಗಿರುತ್ತದೆ.

3) ಇಂದು ನಾವು ನೋಡುವ ಅಂಚೆ ಡಬ್ಬಿಗಳು 1854ರಿಂದಲೇ ಕೆಂಪುಬಣ್ಣ ಬಳಿಸಿ (ಲೇಪಿಸಿ) ಕೊಂಡಿವೆ.

4) ಭಾರತದಲ್ಲಿ ಮೊದಲ ಜನರಲ್ ಪೋಸ್ಟ್ ಆಫೀಸ್ (G.P.O.) ಆರಂಭವಾದದ್ದು ಜೂನ್ 1, 1786ರಲ್ಲಿ. ಈ ಕಚೇರಿ ಮದ್ರಾಸಿನ ಸಮುದ್ರ ದಂಡೆಯಲ್ಲಿನ ಜಾರ್ಜ್ ಚೌಕದಲ್ಲಿತ್ತು.

5) ಅಂಟುಲೇಪಿನ ಅಂಚೆ ಚೀಟಿಗಳು ಪ್ರಥಮವಾಗಿ ಹೊರಬಂದಿದ್ದು ಇಂಗ್ಲಂಡಿನಲ್ಲಿ. ಈ ಪದ್ಧತಿಯನ್ನು ಆವಿಷ್ಕರಿಸಿದ್ದಕ್ಕಾಗಿ ಮತ್ತು ಅಂಚೆ ಇಲಾಖೆಯ ಸುಧಾರಣೆಗಳಿಗಾಗಿ ಶ್ರಮಿಸಿದ ರೋಲ್ಯಾಂಡ್ ಹಿಲ್ ಅವರಿಗೆ ಬ್ರಿಟಿಶ್ ಸರ್ಕಾರವು 'ಸರ್' ಪದವಿಯನ್ನು ನೀಡಿ ಗೌರವಿಸಿತು. ಈತನೇ ಅಂಚೆ ಚೀಟಿಗಳ ಪಿತಾಮಹ.

6) ಜಗತ್ತಿನಲ್ಲಿ ಉಳಿದಿರುವ ಏಕೈಕ ಅಂಚೆಚೀಟಿ 'ಬ್ರಿಟಿಶ್ ಗಯಾನಾ'. ದೇಶದ ಕೇವಲ 1 ಸೆಂಟ್ ಬೆಲೆಯ, ಇತಿಹಾಸವನ್ನೇ ಸೃಷ್ಟಿಸಿದ ಸ್ಟಾಂಪಿನ ಈಗಿನ ಬೆಲೆ 20 ಕೋಟಿ ರೂಪಾಯಿಗಳಿಗೂ ಮಿಕ್ಕಿದೆ.

7) ಮುದ್ರಾ ರಾಕ್ಷಸನ ಪ್ರಭಾವದಿಂದಾಗಿ ಪೋಸ್ಟ್‌ಪೇಡ್ (Post Paid) ಬದಲು 'ಪೋಸ್ಟ್ ಆಫೀಸ್' (Post Office) ಎಂದು ಮುದ್ರಣಗೊಂಡ 'ಪೋಸ್ಟ್ ಆಫೀಸ್ : ಮಾರಿಷಸ್' ಸ್ಟಾಂಪಿನ ಇಂದಿನ ಬೆಲೆ ಸುಮಾರು 8 ಕೋಟಿ ರೂಪಾಯಿಗಳು.

8) ಆಸ್ಟ್ರೇಲಿಯಾದ ಬ್ಲಾಕ್ ಸ್ವಾನ್ (Black Swan) ಎಂಬ ಅಂಚೆಚೀಟಿಯು ಮುದ್ರಣ ದೋಷದಿಂದಾಗಿ ಕೋಟಿ ರೂಪಾಯಿ ಗಳಿಸುವ ಅದೃಷ್ಟ ಪಡೆದಿದೆ.

9) ಭಾರತದಲ್ಲಿ 1854ರಲ್ಲಿ ಬಿಡುಗಡೆಯಾದ ಅಂಚೆ ಚೀಟಿಗಳಲ್ಲಿ ವಿಕ್ಟೋರಿಯಾ ರಾಣಿಯ ಚಿತ್ರ ತಲೆಕೆಳಗಾಗಿ ಮುದ್ರಣವಾಗಿತ್ತು. ಈಗ ಉಳಿದಿರುವ ಈ ಅಂಚೆಚೀಟಿಗಳು ಮಿಲಿಯನ್ ಡಾಲರು ಗಳಿಸಬಲ್ಲವು.

10) 1830ರಲ್ಲಿ ಅಂಚೆಯನ್ನು ರೈಲಿನ ಮೂಲಕ ಸಾಗಿಸುವ ಪದ್ಧತಿ ಇಂಗ್ಲೆಂಡಿನಲ್ಲಿ ಜಾರಿಗೆ ಬಂತು. ಕಾಲಾನುಸಾರವಾಗಿ ಚಲಿಸುವ ರೈಲಿನ ಪ್ರತ್ಯೇಕ ಡಬ್ಬಿಯಲ್ಲಿ ಅಂಚೆ ವಿಂಗಡಿಸುವ ಕ್ರಿಯೆಯು ಆರಂಭವಾಯಿತು. ಇದನ್ನೆ RMS ಎಂದರೇ Railway mail Service ಎಂದು ಕರೆಯುವರು.

11) ಅಮೇರಿಕದ ಪ್ರಥಮ ಅಂಚೆಯ ಮಹಾಪಾಲಕ (P.MG : Post Master General) ನನ್ನಾಗಿ 1752ರಲ್ಲಿ ಬೆಂಜಮಿನ್ ಫ್ರಾಂಕ್ಲಿನ್‌ನನ್ನು ನೇಮಿಸಲಾಗಿತ್ತು.

12) ಭಾರತವನ್ನು ಒಳಗೊಂಡಂತೆ ವಿಶ್ವದ ಎಲ್ಲ ದೇಶಗಳು ಹೊರತರುವ ಅಂಚೇ ಚೀಟಿಗಳಲ್ಲಿ ಆಯಾ ದೇಶದ ಹೆಸರು ಪ್ರಮುಖವಾಗಿ ಮುದ್ರಣಗೊಂಡಿರುತ್ತದೆ. ಆದರೆ ಇದಕ್ಕೆ ವ್ಯತಿರಿಕ್ತವಾಗಿ ಬ್ರಿಟನ್ ದೇಶದಲ್ಲಿ ಬಿಡುಗಡೆಯಾಗುವ ಅಂಚೆ ಚೀಟಿಗಳಲ್ಲಿ ದೇಶದ ಹೆಸರು ಎಲ್ಲಿಯೂ ನಮೂದಿತವಾಗಿರುವುದಿಲ್ಲ. ಇದರ ಬದಲು ಸ್ಟಾಂಪಿನಲ್ಲಿ ಕಡ್ಡಾಯವಾಗಿ ಮುದ್ರಣಗೊಳ್ಳುವ ವಿಕ್ಟೋರಿಯ ರಾಣಿ ಮುಖಚಿತ್ರವೇ ದೇಶವನ್ನು ಸಾಂಕೇತಿಕವಾಗಿ ಪ್ರತಿನಿಧಿಸುವ ಪರಂಪರೆ ಇಂದಿಗೂ ಇದೆ.

13) ನಮ್ಮ ಪ್ರಾಂತ್ಯಗಳನ್ನು ತಹಶೀಲುಗಳಾಗಿ ವಿಂಗಡಿಸುವ ಮುನ್ನವೇ ಮೈಸೂರಿನ ಚಿಕ್ಕದೇವರಾಯ ಅರಸರು 1701ರಲ್ಲಿ ಮೈಸೂರು ಪ್ರಾಂತ್ಯವನ್ನು 16 ಭಾಗಗಳಾಗಿ ವಿಂಗಡಿಸಿ ಪ್ರತಿಯೊಂದು ಭಾಗಕ್ಕೆ "ಬೇಹಿನ ಚಾವಡಿ" ಎಂದು ಹೆಸರಿಸಿ ಪ್ರತಿ ಚಾವಡಿಗೂ ಓರ್ವ ಅಧಿಕಾರಿಯನ್ನು ನೇಮಿಸಿದರು. ಅವರನ್ನು 'ಅಂಚೆ ಬಕ್ಷಿ' ಯೆಂದು ಕರೆಯಲಾಗುತ್ತಿತ್ತು. ಈ ಪದ್ಧತಿ ಮೊದಲು ರಾಜ್ಯದ ಆಡಳಿತಕ್ಕೆ ಸಂಬಂಧಪಟ್ಟ ವ್ಯವಹಾರಗಳಿಗೆ ಮಾತ್ರ ಸೀಮಿತವಾಗಿತ್ತು. ಈ ಅನುಕೂಲ ಸಾಮಾನ್ಯರಿಗೂ ಸಹ ಲಭ್ಯವಾದದ್ದು ಬ್ರಿಟೀಷ್ ಕಮೀಷನರುಗಳ ಆಡಳಿತದಲ್ಲಿ.

14) "ಉದ್ಯೋಗ ಇಲ್ಲದ ಬಡಿಗಿ ಮಗನ...." ಗಾದೆಯಂತೆ ಅಂಚೆ ಆಫೀಸಿನ ಸೋಂಬೇರಿ ಕ್ಲರ್ಕ್‌ನೊಬ್ಬ ತನ್ನ ವಿರಾಮದ ವೇಳೆಯಲ್ಲಿ ಏನು ಕೆಲಸವಿಲ್ಲದ ಕಾರಣ ಸೂಜಿ ತೆಗೆದುಕೊಂಡು ಎರಡು ಸ್ಟಾಂಪುಗಳ ನಡುವೆ ತೂತುಗಳನ್ನು ಕೊರೆಯುತ್ತ ಹೋದ. ಸಮಯ ಕಳೆಯಲು ಈತ ಮಾಡಿದ 'ಕಿತಾಪತಿ'ಯೇ ಸ್ಟಾಂಪುಗಳ ನಡುವೆ

ತೂತು ಕೊರೆಯುವ (Perforation) ಆವಿಷ್ಕಾರಕ್ಕೆ ನಾಂದಿಯಾಯಿತು. ಇದಕ್ಕಿಂತ ಹಿಂದೆ ಪೋಸ್ಟಾಫೀಸಿನಲ್ಲಿ ಪೋಸ್ಟ ಮಾಸ್ತರರು ಕತ್ತರಿಯಿಂದಲೋ, ಚಾಕುವಿನಿಂದಲೋ, ಸ್ಟಾಂಪುಗಳನ್ನು ಕತ್ತರಿಸಿ ಕೊಡಬೇಕಾಗುತ್ತಿತ್ತು. ಹೆನ್ನಿ ಅರ್ಚರ್ ಎಂಬವನು 1847ರಲ್ಲಿ ಸ್ಟಾಂಪುಗಳನ್ನು ಪ್ರತ್ಯೇಕಿಸುವ ರಂಧ್ರಗಳನ್ನು ಕೊರೆಯುವ ಬೃಹತ್ ಯಂತ್ರಗಳನ್ನೇ ಬಳಕೆಗೆ ತಂದ.

15) ಈಸ್ಟ್ ಇಂಡಿಯಾ ಕಂಪನಿ ಸ್ಥಾಪಿಸಿದ ಅಂಚೆ ವ್ಯವಸ್ಥೆಯನ್ನು 1774ರಲ್ಲಿ ಸಾರ್ವಜನಿಕರ ಬಳಕೆಗೆ ತೆರೆಯಲಾಯಿತು. ಆ ಕಾಲದಲ್ಲಿ ಪ್ರತಿನೂರು ಮೈಲಿಗಳಿಗೆ 2 ಆಣೆ (ಈಗಿನ 12 ಪೈಸೆ) ಶುಲ್ಕವನ್ನು ವಿಧಿಸಲಾಗುತ್ತಿತ್ತು. ಅಂಚೆಗೆ ನಿಗದಿತ ಶುಲ್ಕ ನೀಡಲು ಅನುವಾಗುವಂತೆ ಟಂಕಸಾಲೆಗಳಲಿ 2 ಆಣೆ ಮೌಲ್ಯದ ವಿಶೇಷ ತಾಮ್ರದ ನಾಣ್ಯಗಳನ್ನು ತಯಾರಿಸಲಾಗುತ್ತಿತ್ತು.

16) ಅಂಚೆಯನ್ನು ವಿಮಾನದ ಮೂಲಕ ಪ್ರಥಮವಾಗಿ ಸಾಗಿಸಿದ ಹಿರಿಮೆ ಭಾರತದ್ದು. ಈ ಘಟನೆ ನಡೆದದ್ದು 1911 ಫೆಬ್ರವರಿ 18ರಂದು. ಅಂದು 6500 ಪತ್ರಗಳು ಮತ್ತು ಪೋಸ್ಟ್ ಕಾರ್ಡುಗಳನ್ನು ಅಲಹಾಬಾದಿನಿಂದ ನೈನಿತಾಲಗೆ ಸಾಗಿಸಲಾಯಿತು.

17) ವಿಮಾನದ ಮೂಲಕ ಸಾಗಿಸುವ ಅಂಚೆಗೆ ಅಂಟಿಸುವ ವಿಶೇಷ ಅಂಚೆಚೀಟಿಗಳನ್ನು (Air Mail) ಹೊರಡಿಸಿದ ಕಾಮನವೆಲ್ತ್ ದೇಶಗಳಲ್ಲಿ ಭಾರತ ಮೊದಲನೆಯದಾಗಿದೆ. ಹೀಗೆ ಭಾರತದ ಏರಮೇಲ್ ಅಂಚೆಚೀಟಿ 1929ರಂದು ಜನ್ಮ ತಳೆಯಿತು.

18) ಭಾರತದಲ್ಲಿ ಬಳಸಲಾಗುತ್ತಿದ್ದ ಸ್ಟಾಂಪುಗಳನ್ನು 1926ರವರೆಗೆ ಇಂಗ್ಲಂಡಿನಲ್ಲಿ ಮುದ್ರಿಸಲಾಗುತ್ತಿತ್ತು. ಹೀಗಾಗಿ ಈ ಸ್ಟಾಂಪುಗಳಲ್ಲಿ ರಾಣಿ ವಿಕ್ಟೋರಿಯಾ ಏಳನೆಯ ಎಡ್ವರ್ಡ್ ಐದನೆಯ ಜಾರ್ಜ್ ಹಾಗೂ ಆರನೆಯ ಜಾರ್ಜ ಅವರ ಚಿತ್ರಗಳಿರುತ್ತಿದ್ದವು.


19) ಭಾರತದಲ್ಲಿನ ಅತ್ಯಂತ ಅಪರೂಪವಾದ (ವಿರಳವಾದದ್ದು ಸಹ) ಅಂಚೆ ಚೀಟಿಗಳಲ್ಲಿ ನಾಲ್ಕಾಣೆ ಮೌಲ್ಯದ ವಿಕ್ಟೋರಿಯಾ ರಾಣಿಯ ಚಿತ್ರ ತಲೆಕೆಳಗಾಗಿ ಮುದ್ರಣವಾದ ಸ್ಟಾಂಪು ಪ್ರಮುಖವಾದದ್ದು. ನ್ಯೂಜಿಲಂಡಿನ ಶಾಲಾ ಬಾಲಕಿಯ ಸಂಗ್ರಹದಲ್ಲಿದ್ದ ಈ ಸ್ಟಾಂಪು ಮೇ 10, 1988ರಲ್ಲಿ ಲಂಡನ್ನಿನಲ್ಲಿ ನಡೆದ ಹರಾಜಿನಲ್ಲಿ 52,800 ಪೌಂಡುಗಳಿಗೆ ವಿಕ್ರಯವಾಗಿ ನೂತನ ದಾಖಲೆ ಸೃಷ್ಟಿಸಿದೆ.

20) ಓರಿಸ್ಸಾದ ಕಟಕನಲ್ಲಿ 1946ರಲ್ಲಿ ಪ್ರಾರಂಭವಾದ ಪಾರಿವಾಳದ ಅಂಚೆ ವ್ಯವಸ್ಥೆಯಲ್ಲಿ ಸಾವಿರಕ್ಕೂ ಹೆಚ್ಚು ನುರಿತ ಪಾರಿವಾಳಗಳಿವೆ. ಭಾರತದಲ್ಲಿರುವ ಏಕಮೇಯ ಪಾರಿವಾಳ ಅಂಚೆ ವ್ಯವಸ್ಥೆ ಇದಾಗಿದ್ದು, ಇದನ್ನು ಪೊಲೀಸರು ಈಗಲೂ ನಿರ್ವಹಿಸುತ್ತಿದ್ದಾರೆ.


21) 1948ರಲ್ಲಿ ಗಾಂಧೀಜಿಯ ಸ್ಮರಣಾರ್ಥವಾಗಿ ಹೊರತರಲಾದ ನಿತ್ಯ ಉಪಯೋಗಿಸುವ ಅಂಚೆ ಚೀಟಿಗಳು ಅಂದಿನ ಗವರ್ನರ ಜನರಲ್ ರಾಜಾಜಿಯ ಆಜ್ಞೆಯ ಮೇರೆಗೆ ಸರ್ವೀಸ್ ಸ್ಟಾಂಪುಗಳಾಗಿ ಬಳಸಲ್ಪಟ್ಟು ಅಂಚೆ ಇತಿಹಾಸದಲ್ಲಿ ವಿಶಿಷ್ಟ ಸ್ಥಾನ ಗಳಿಸಿವೆ.

22) ಅಂಚೆ ಚೀಟಿಗಳಿಗೆ ಎಂಜಲು ಹಚ್ಚಿ ಅಂಟಿಸುವ ಪದ್ಧತಿ ಸಾಮಾನ್ಯ. ಆದರೆ ಜಾನ್ ಕೆನ್‌ಮೂರ ಎಂಬಾತ ಕೇವಲ 4 ನಿಮಿಷದಲ್ಲಿ 328 ಸ್ಟಾಂಪುಗಳನ್ನು ನಾಲಿಗೆಯಿಂದ ನೆಕ್ಕಿ ಅಂಟಿಸಿ ಗಿನ್ನೆಸ್ ದಾಖಲೆ ಮಾಡಿದ್ದಾನೆ. ಈ ಘಟನೆ ಇಂಗ್ಲಂಡಿನ ಪೋಸ್ಟಾಫೀಸ ಒಂದರಲ್ಲಿ ಇತ್ತೀಚೆಗೆ (30 ಜೂನ್, 1989) ನಡೆದಿದೆ.

23) ಅಂಚೆ ಚೀಟಿಗಳ ವೈವಿಧ್ಯತೆ ಅದೆಷ್ಟೇ ಆಕರ್ಷಕವಾಗಿದ್ದರೂ ಇವೆಲ್ಲ ರೂಪುಗೊಳ್ಳುವುದು ಸಾಮಾನ್ಯವಾಗಿ ಕಾಗದದ ಮೇಲೆಯೇ. ಆದರೆ ಭೂತಾನ ಮತ್ತು ಅನೇಕ ಸಣ್ಣ ದೇಶಗಳು ಪ್ಲಾಸ್ಟಿಕ್ [3-D printing], ಉಕ್ಕಿನ ಹಾಳೆ, ರೇಷ್ಮೆ ಬಟ್ಟೆ, ಬಂಗಾರದ ಹಾಳೆಗಳ ಮೇಲೆ ಅಂಚೆ ಚೀಟಿಗಳನ್ನು ಮುದ್ರಿಸಿ ವಿಸ್ಮಯವನ್ನಂತು ಮಾಡಿದೆ. ಇವೆಲ್ಲ ಸಂಗ್ರಹಕಾರರನ್ನು ದೃಷ್ಟಿಯಲ್ಲಿಟ್ಟುಕೊಂಡು ಹೊರತಂದ ಸ್ಟಾಂಪುಗಳೇ ಹೊರತು ನಿಜವಾಗಿ ಅಂಚೆ ಉಪಯೋಗಕ್ಕೆ ಮಾಡಿದವುಗಳಲ್ಲ.




24) ಅಮೇರಿಕ ದೇಶದ ಪೋಸ್ಟಲ್ ಕಮೋಮರೇಟಿ ಸೊಸೈಟಿ ಎಂಬ ಸಂಸ್ಥೆಯು ಅಮೇರಿಕಾದ ಅಂಚೆ ಇಲಾಖೆಯಿಂದ ಅನುಮತಿ ಪಡೆದು ಕೆಲವು ವಿಶಿಷ್ಠ ಅಂಚೆ ಚೀಟಿಗಳನ್ನು ಬಂಗಾರದ, ತೆಳುವಾದ ತಗಡಿನಲ್ಲಿ ಪ್ರತಿಕೃತಿಯನ್ನು ರಚಿಸಿ, ಮೊದಲ ದಿನದ ಲಕೋಟೆಯೊಂದಿಗೆ ಬಿಡುಗಡೆ ಮಾಡುತ್ತಾ ಬಂದಿರುತ್ತದೆ. ಈ ರೀತಿಯ ಸ್ಟಾಂಪುಗಳು Gold Replica ಎಂದು ಕರೆಯಲ್ಪಡುತ್ತವೆ.




25) ತ್ವರಿತ ಅಂಚೆ ಸೇವೆ (Speed Post)-

–ತ್ವರಿತ ಅಂಚೆ ಸೇವೆಯನ್ನು ಭಾರತೀಯ ಅಂಚೆ ಇಲಾಖೆ ತಾ॥ 1–8–1986ರಿಂದ ದೆಹಲಿ, ಮದ್ರಾಸ್, ಕಲ್ಕತ್ತಾ, ಮುಂಬಯಿ, ಬೆಂಗಳೂರು, ಅಹಮದಾಬಾದ ಹಾಗೂ ಹೈದರಾಬಾದ ಈ ಏಳು ನಗರಗಳಲ್ಲಿ ಪ್ರಾರಂಭಿಸಿತು. ನಂತರ 15–11–1996 ರಿಂದ ಈ ಸೇವೆಯನ್ನು ಇತರ ನಗರಗಳಿಗೆ ವಿಸ್ತರಿಸಿತು. ಅಂತರ್ ರಾಷ್ಟ್ರೀಯ ತ್ವರಿತ ಅಂಚೆ ಸೇವೆಯನ್ನು ಬೆಂಗಳೂರು ನಗರದಲ್ಲಿ ತಾ॥ 15–11–1986ರಿಂದ ಪ್ರಾರಂಭಿಸಲಾಯಿತು. ಈಗ ದೇಶದ ಹಲವಾರು ನಗರಗಳಲ್ಲಿ ಈ ಸೇವೆ ಲಭ್ಯವಿದೆ. ತ್ವರಿತ ಸೇವೆಯ ಮೂಲಕ ಕಳಿಸುವ ವಸ್ತುವಿನ ತೂಕ ಹಾಗೂ ದೂರಕ್ಕೆ ಅನುಸಾರವಾಗಿ ತ್ವರಿತ ಸೇವೆಯ ದರವನ್ನು ನಿಗದಿಪಡಿಸಲಾಗಿದೆ. ಈಗೀಗ ಈ ಸೇವೆ ಹೆಚ್ಚು ಜನಪ್ರಿಯವಾಗುತ್ತಿದೆ. ಈ ಸೇವೆಗೆ ಭಾರತ, ಶ್ರೀಲಂಕಾ, ಪಾಕಿಸ್ತಾನ ಮತ್ತು ಸಿಂಗಾಪೂರದಲ್ಲಿ "ಸ್ಪೀಡ್ ಪೋಸ್ಟ" ಎಂದು ಕರೆದರೆ, USA ಮತ್ತು ಜಪಾನನಲ್ಲಿ E.M.S. (Express mail Service) ಎನ್ನುತ್ತಾರೆ. ಇಂಗ್ಲಂಡಿನಲ್ಲಿ Data Post ಎಂತಲೂ, ಫ್ರಾನ್ಸನಲ್ಲಿ ಕ್ರೋನೋ ಪೋಸ್ಟ ಎಂತಲೂ, U.A.E. (United Arab Emirates) ನಲ್ಲಿ ಮಮ್ ಟಾನ್ ಪೋಸ್ಟ ಎಂತಲೂ ಕರೆಯುತ್ತಾರೆ. "Express Delivery" ಸೇವೆಯನ್ನು ಅನುಷ್ಠಾನಕ್ಕೆ ತಂದ ಹಿರಿಮೆ ಭಾರತದ್ದು.

26) ಮೇಘದೂತ ಹಾಗೂ ಡಾಕ್‌ಸೇವಾ ಪ್ರಶಸ್ತಿಗಳು...ಇಲಾಖೆಯ ನೌಕರರ ಶಿಸ್ತು, ಶ್ರದ್ಧೆ, ಕಾರ್ಯಕ್ಷಮತೆ, ಸೇವಾತತ್ಪರತೆ ಇವುಗಳನ್ನು ಗುರುತಿಸಿ ಮತ್ತು ಪರಿಗಣಿಸಿ ಸರ್ವೋತ್ತಮ ಸೇವೆ ಸಲ್ಲಿಸಿದ ನೌಕರರಿಗೆ ಈ ಮೇಲ್ಕಾಣಿಸಿದ ಪ್ರಶಸ್ತಿಗಳನ್ನು ನೀಡುವ ಕ್ರಮ 1986ರಿಂದ ಭಾರತ ಅಂಚೆ ಇಲಾಖೆಯಲ್ಲಿ ಜಾರಿಗೆ ಬಂದಿತು. ದಕ್ಷತೆ, ಇಲಾಖೆಯ ಪ್ರತಿಷ್ಠೆಯನ್ನು ವೃದ್ಧಿಸುವಂತಹ ನೌಕರರ ಕಾಣಿಕೆ ಮುಂತಾದ ಅಪೂರ್ವ ಗುಣಗಳನ್ನು

ಹೊಂದಿದವರಿಗೆ ಈ ಪ್ರಶಸ್ತಿಯನ್ನು ನೀಡಲಾಗುತ್ತಿದೆ. ರಾಜ್ಯಮಟ್ಟದಲ್ಲಿ 'ಡಾಕ್ ಸೇವಾ' ಪ್ರಶಸ್ತಿಯನ್ನು ಹಾಗೂ ರಾಷ್ಟ್ರಮಟ್ಟದಲ್ಲಿ "ಮೇಘದೂತ ಪ್ರಶಸ್ತಿ"ಯನ್ನು ನೀಡಲಾಗುತ್ತಿದೆ. ನೌಕರ ವರ್ಗದ i) ಇಲಾಖೇತರ ನೌಕರರು, ii) ಗ್ರೂಪ್ 'ಡಿ'/ಪೋಸ್ಟ್ ಮನ್‌ಗಳು, iii) ಅಂಚೆ ಸಹಾಯಕರು, iv) ಕಚೇರಿಯ ಮುಖ್ಯಸ್ಥರು. (Grrad "C") ಮೇಲ್ವಿಚಾರಣಾ ಸಿಬ್ಬಂದಿ ಹಾಗೂ vi) ಮಹಿಳಾ ನೌಕರರು ಎಂಬ ಆರು ವಿಭಾಗದವರನ್ನು ಈ ಪ್ರಶಸ್ತಿಗಳಿಗೆ ಪರಿಗಣಿಸಲಾಗುತ್ತಿದೆ.

'ಅಂಚೆ ಚೀಟಿಗಳಲ್ಲಿ ಆರೋಗ್ಯ' - ಕೃತಿಯನ್ನು ಡಾ॥ ಎ.ಟಿ. ಪಾಟೀಲ ಅವರು ಬರೆದಿದ್ದಾರೆ. ಇವರು ವೃತ್ತಿಯಲ್ಲಿ ವೈದ್ಯರಾದರೂ ಅಂಚೆ ಚೀಟಿ ಸಂಗ್ರಹವನ್ನು ಒಂದು ಹವ್ಯಾಸವಾಗಿಸಿ ಕೊಂಡಿದ್ದಾರೆ. ಅಷ್ಟೇ ಅಲ್ಲದೆ ವಿಶೇಷವಾಗಿ ತಮ್ಮ ವೃತ್ತಿಧರ್ಮದ ನೆಲೆಯಲ್ಲಿ ತಮ್ಮ ಹವ್ಯಾಸಕ್ಕೆ ಒಂದು ಅರ್ಥಪೂರ್ಣತೆ ತಂದುಕೊಳ್ಳುವ ಕ್ರಿಯೆಯಾಗಿ ಈ ಕೃತಿ ರಚನೆ ಮಾಡಿದ್ದಾರೆ. ವೃತ್ತಿ - ಪ್ರವೃತ್ತಿಗಳೆರಡಕ್ಕೂ ಅಭಿರುಚಿ ಆಸಕ್ತಿಗಳೆಂಬ ಮನೋಧರ್ಮ ಭೂಮಿಕೆಯಾಗಿದೆ. ಒಂದು ವಿಶೇಷ ದಾಖಲಾತಿಯಾಗಿ ಈ ಪುಸ್ತಕ ಮುಖ್ಯವಾಗುತ್ತದೆ.

ಪ್ರೊ. ಎಸ್.ಜಿ. ಸಿದ್ಧರಾಮಯ್ಯ

---

ISBN : 81-7713-210-5

ಬೆಲೆ ರೂ. ೪೦/-

ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು